[MR. DEPUTY SPEAKER in the Chair]

BUDGET ESTIMATES FOR 1966-67—DEMANDS FOR GRANTS.

DEMAND NOS. 6, 30A, 31, 32, 43, 47, 48 AND 50—(*Continued.*)

†ಶ್ರೀ ಎಸ್. ಎಸ್. ಕೊಳ್ಕೆಬೈಲ್ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯ ದಿವಸ ಪಬ್ಲಿಕ್‌ವರ್ಕ್ಸ್ ಇಲಾಖೆಯ ಮೇಲೆ ಮಾತನಾಡುವಾಗ ಹೇಳುತ್ತಾ ಇದ್ದೆ, ಈ ಇಲಾಖೆಯ ಮೇಲೆ ಒತ್ತಡ ಜಾಸ್ತಿ ಇರುವುದಕ್ಕೆ ಕಾರಣವೇನೆಂದರೆ ಕೇಂದ್ರ ಸರ್ಕಾರ ಸಾರಿಗೆ ವಿಚಾರದಲ್ಲಿ ಅವರಲ್ಲೂ ರೈಲ್ವೆಯಲ್ಲಿ ಬಹಳ ಹಿಂದಲಿದಿರುವುದರಿಂದ ಯಾವ ದೇಶದಲ್ಲಾಗಲೀ, ಯಾವ ರಾಜ್ಯದಲ್ಲಾಗಲೀ ರೈಲ್ವೆಯು ಕಾಡಿನಲ್ಲಿ ಮಧ್ಯೆ ಇರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಇವೊತ್ತು ಬೆಂಗಳೂರು ಮತ್ತು ತಾಳಗುಪ್ಪ ರೈಲ್ವೆ ಲೈನಿನಲ್ಲಿ ಒಂದು ರೈಲ್ವೆ ಲೈನು ಕಾಡಿನ ಮಧ್ಯದಲ್ಲಿ ನಿಂತಿದೆ. ಮೈಸೂರಿನಿಂದ ಭಟ್‌ಕಲ್ಲಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಮಧ್ಯೆ ಕಾಡಿನಲ್ಲಿ ರೈಲ್ವೆ ಲೈನು ನಿಂತಿದೆ. ಭಟ್‌ಕಲ್‌ತಾಳಗುಪ್ಪ ಮಧ್ಯೆ ರಸ್ತೆಯನ್ನು ಸಹ ಸರಿಯಾಗಿ ಮಾಡಿಲ್ಲ. ಇದರಿಂದ ಜೋಗ್‌ಫಾಲ್ಸ್‌ಗೆ ಹೋಗುವುದಕ್ಕೆ ಕೂಡ ಕಷ್ಟವಾಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ಆದಷ್ಟು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಸುಮಾರು 25—27 ಮೈಲಿ ರೈಲ್ವೆಯನ್ನು ಮಾಡುವುದು ಯೋಗ್ಯ ಅನಿಸುತ್ತದೆ.

ಇನ್ನು ಪೋರ್ಟ್ಸ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಪೋರ್ಟ್ ಅಭಿವೃದ್ಧಿಯು ಬಹಳ ಕುಂಠಿತವಾಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ 2¼ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿತ್ತು. ಅದರಲ್ಲಿ ಹೇರಳವಾಗಿ ಹಣ ಖರ್ಚಾಗದೆ ಹಾಗೆಯೇ ಉಳಿದಿದೆ. ಇದಕ್ಕೆ ಮುಖ್ಯಕಾರಣವೇನೆಂದರೆ, ಸ್ಟೇಟ್ ಪೋರ್ಟ್ ಆಫೀಸರು ಪೋರ್ಟ್ ಸಂಬಂಧದಲ್ಲಿ ಯಾವ ಕೆಲಸವನ್ನೂ ಮಾಡದೇ ಇರುವುದು. ಪೋರ್ಟ್ ಎಂದರೆ ಏನು, ಅದನ್ನು ಯಾವ ಪ್ರಕಾರ ಅಭಿವೃದ್ಧಿ ಮಾಡಬೇಕು ಎನ್ನುವ ವಿಷಯ ಆ ಆಫೀಸರಿಗೆ ಗೊತ್ತಿಲ್ಲ. ನಾವು ಕಳೆದ ವರ್ಷ ಬಜೆಟ್ ಅಧಿವೇಶನದಲ್ಲಿ ಹೇಳಿದ್ದೇವೆ, ಇದು ಮೆರೈನ್ ಇಂಜಿನಿಯರ್ಸ್‌ಗೆ ಗೊತ್ತು, ಪೋರ್ಟ್ ಅಭಿವೃದ್ಧಿ ಮಾಡುವುದಕ್ಕೆ ಪೋರ್ಟ್ ವಿಷಯದಲ್ಲಿ ಅನುಭವ ಇಲ್ಲದೆ ಇರುವವರಿಗೆ ಇದರ ಅಧಿಕಾರವನ್ನು ಕೊಟ್ಟರೆ ಪೋರ್ಟ್ ಯಾವುದೂ ಆಗುವುದಿಲ್ಲ ಎಂದು ಹೇಳಿದ್ದೇವೆ. ಇದು ನಿಶ್ಚಯವಾದ ಸಂಗತಿ. ಪೋರ್ಟ್ ಪೈಲೆಟ್ ಮಾಡುವುದಕ್ಕೆ ಕೆಲವು ಪ್ರಿನ್ಸಿಪಲ್ಸ್‌ಗಳನ್ನು ಹಾಕಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಈ ಯೋಜನೆ ಇತ್ತು ಇದನ್ನು ಇನ್ನೂ ಕಾರ್ಯಗತ ಮಾಡುವುದಕ್ಕೆ ಆಗಿಲ್ಲ. 200—300 ರೂಪಾಯಿಗಳನ್ನು ಖರ್ಚುಮಾಡಿ ನೇವಿಗೇಷನ್‌ಗೆ ಬೇಕಾದ ಸೌಲಭ್ಯವನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಪೋರ್ಟ್ ಅಭಿವೃದ್ಧಿ ಆಗಿಲ್ಲ. ಇದಕ್ಕೆ ಕಾರಣ ಇದರಲ್ಲಿ ಯಾವತರಹ ತಲೆಹಾಕಬೇಕು ಎನ್ನುವ ವಿಚಾರ ಗೊತ್ತಿಲ್ಲ. ಈಗ 4—5 ವರ್ಷಗಳಿಂದ ಮೈನರ್ ಪೋರ್ಟ್ ಅಭಿವೃದ್ಧಿಯ ವಿಷಯದಲ್ಲಿ ಯಾವ ಕೆಲಸವೂ ಆಗಿಲ್ಲ. ಯಾವ ತರಹದ ಅಭಿವೃದ್ಧಿಯ ಕೆಲಸವೂ ಆಗಿಲ್ಲ. ಕೇರಳಕ್ಕೆ ಹೋಗಲೀ ಇತ್ತಲಾಗಿ ಮಹಾರಾಷ್ಟ್ರ ಮತ್ತು ಗುಜರಾತಿಗೆ ಹೋಗಲೀ ಅಲ್ಲಿ ಮೈನರ್ ಪೋರ್ಟುಗಳು ಬಹಳ ಮಟ್ಟಿಗೆ ಅಭಿವೃದ್ಧಿಯನ್ನು ಹೊಂದಿವೆ. ಆದರೆ ನಮ್ಮ ದೇಶದಲ್ಲಿ ಮೈನರ್ ಪೋರ್ಟುಗಳು ಯಾವತರಹ ಅಭಿವೃದ್ಧಿಯನ್ನೂ ಹೊಂದಿಲ್ಲ. ಕಳೆದ ಒಂದು ವರ್ಷದಿಂದ ನಮ್ಮ ಪಬ್ಲಿಕ್‌ವರ್ಕ್ಸ್ ಶಾಖೆಯ ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಒಟ್ಟಾಗಿ ಕುಂದಾಪುರ, ಭಟ್‌ಕಲ್ ಮತ್ತು ಕಾರವಾರ ಈ ಬಂದರುಗಳನ್ನು ಅಭಿವೃದ್ಧಿ ಮಾಡಬೇಕೆಂದು ಅನೇಕ ಹುಕುಂಗಳನ್ನು ಮಾಡಿದರು.

10-00 A.M.

ಆದರೆ ಇವೊತ್ತಿನ ದಿವಸ ಇಲಾಖೆಯವರು ಕೊಡಬೇಕಾದ ಸಹಾಯ ಸಲಕರಣೆಗಳನ್ನು ಕೊಡದೇ ಇರುವುದರಿಂದ ಇಲ್ಲಿ ತುಂಬಾ ಕಷ್ಟವಾಗುತ್ತಿದೆ. ಇದೂ ಅಲ್ಲದೆ ಸೆಂಟ್ರಲ್ ಗವರ್ನಮೆಂಟಿನವರು ಇಂತಹ ಡಿಪಾರ್ಟುಮೆಂಟಿಗೆ ಆರ್ಡರು ಕೊಟ್ಟರೂ ಅದಕ್ಕೆ ಬೇಕಾಗುವ ಮೆಷಿನ್ನುಗಳು ಬರಲಿಲ್ಲ ಮತ್ತು ಇಂತಹ ಕಂಪನಿಗೆ ಸಾಮಾನುಗಳಿಗಾಗಿ ಬರೆದರೂ ಇನ್ನೂ ಬರಿಲಿಲ್ಲ ಎಂದು ಹೇಳುವುದರಿಂದಾಗಿ ಇಲ್ಲಿನ ಕೆಲಸಕಾರ್ಯಗಳು ಆಗುತ್ತಿಲ್ಲ. ಮೂರನೇ ಯೋಜನೆಯಲ್ಲಿ ಇದಕ್ಕಾಗಿ ಸುಮಾರು ಎರಡೂವರೆ ಕೋಟಿಯಷ್ಟು ಹಣ ಇದೆ. ಇಂತಹ ಓರ್ ಕ್ಯಾರಿಯಿಂಗ್ ರಸ್ತೆಯನ್ನು ಮಾಡಿಕೊಡದೇ ಹೋದರೆ ಪೋರ್ಟುಗಳ ಅಭಿವೃದ್ಧಿ ಕಾರ್ಯಗಳು ಹೇಗಾಗಬೇಕು ? ಇದನ್ನು

(ಶ್ರೀ ಎಸ್. ಎಸ್. ಕೊಳ್ಕೆಬೈಲ್)

ಒತ್ತಾಯ ಮಾಡದೇ ಇರುವುದು ತುಂಬಾ ಶೋಚನೀಯ ವಿಷಯ. ನೆರೆ ಹೊರೆಯ ರಾಜ್ಯಗಳಲ್ಲಿರುವ ಪೋರ್ಟುಗಳು ಬಹಳ ಒಳ್ಳೆಯ ಸ್ಥಿತಿಯಲ್ಲಿವೆ. ಆದರೆ ನಮ್ಮ ರಾಜ್ಯದಲ್ಲಿರುವ ಬಂದರುಗಳಿಗಾಗಿ ಅಂದಾಜುಗಳನ್ನು ಮಾಡಿರುವುದನ್ನು ನೋಡಿದರೆ ತುಂಬಾ ಶೋಚನೀಯವಾಗಿದೆ. ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ ಈ ಪೋರ್ಟುಗಳ ಕೆಲಸಗಳನ್ನು ಇಂಜನೀಯರಿಂಗು ಅಧಿಕಾರಿ ಗಳಿಗೇ ವಹಿಸಿದರೆ ಅವರಿಂದ ಕೆಲಸಗಳನ್ನು ಮಾಡಲು ಅನುಕೂಲವಾಗುತ್ತದೆ. ಪೋರ್ಟುಗಳ ಸ್ಥಿತಿ ತಿಳಿಯದೇ ಇರುವವನ್ನು ಇಲ್ಲಿ ನೇಮಿಸಿದರೆ ಇದರ ಅಭಿವೃದ್ಧಿಯಾಗುವುದಿಲ್ಲ. ಇದರ ಬಗ್ಗೆ ಇಲ್ಲಿರು ವವರನ್ನು ಬದಲಾವಣೆ ಮಾಡಬೇಕೆಂದು ನನ್ನ ವಿನಂತಿ.

ಇನ್ನು ನಮ್ಮಲ್ಲಿರುವುದು ಮಂಗಳೂರು ಪೋರ್ಟಿನಿಂದ ಹಿಡಿದು ಭಟ್ಕಳ ವರೆಗೆ ಸುಮಾರು 110 ಮೈಲ ರೈಲ್ವೆ ಆಗಬೇಕು. ಹಾಗೆ ಹುಬ್ಬಳ್ಳಿ ಕಾರವಾರದವರೆಗೆ ರೈಲು ಹಾಕಬೇಕು. ಪೋರ್ಟು ಗಳು ಅಭಿವೃದ್ಧಿಗೆ ಬರಬೇಕಾದರೆ ಅದಕ್ಕೆ ತಕ್ಕಂತೆ ಹೆಚ್ಚು ಸಾರಿಗೆ ಸಂಪರ್ಕಗಳು ಹೆಚ್ಚಾದರೆ ಆದರಿಂದ ವ್ಯಾಪಾರವೂ ಹೆಚ್ಚಾಗುತ್ತದೆ. ಈ ಬಗ್ಗೆ ನಮ್ಮ ಸರಕಾರ ಅದಷ್ಟು ಒತ್ತಾಯವನ್ನು ಕೇಂದ್ರ ಸರಕಾರದಮೇಲೆ ತರಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ 20-30 ವರ್ಷಗಳಿಂದಲೂ ನಮ್ಮ ಭಾಗದಲ್ಲಿ ಯಾವ ರಸ್ತೆಗಳೂ ಆಗಿಲ್ಲ ಎಂದು ಹೇಳುತ್ತಾ ಆ ದಿನ್ನೆ ಇಲ್ಲಿ ಮಾತ ನಾಡಿದ ಒಬ್ಬ ಮಾನ್ಯ ಸದಸ್ಯರು ಬಿಜಾಪುರದ ಪ್ರಾಂತ ಬಿಟ್ಟು ಎಲ್ಲ ವೆಸ್ಟು ಕೋಸ್ಟು ರೋಡುಗಳಿಗೆ ಹೆಚ್ಚು ಖರ್ಚು ಮಾಡುತ್ತಿದ್ದಾರೆ ಮತ್ತು ಇದರಿಂದ ಬರೀ ಕೋಸ್ಟು ಏರಿಯಾಕ್ಕೆ ಹೆಚ್ಚು ಗಮನ ಕೊಡು ತ್ತಿದ್ದಾರೆಂದು ಹೇಳಿದರು. ಇದು ಸರಿಯಲ್ಲ ವಾಸ್ತವವಾಗಿ ನೋಡುವುದಾದರೆ, ಈ ರಸ್ತೆ ಕನ್ಯಾ ಕುಮಾರಿಯಿಂದ ಬೊಂಬಾಯಿವರೆಗೂ ಹೋಗುತ್ತದೆ. ಇದಕ್ಕೆಲ್ಲಾ ಕೇಂದ್ರ ಸರಕಾರದವರೇ ಪೂರ್ತಿ ಹಣ ಕೊಡುತ್ತಾರೆ. ಆದರೆ ಕೆಲಸಗಳನ್ನು ಮಾಡಿಸುವ ಜವಾಬುದಾರಿ ಮಾತ್ರ ರಾಜ್ಯ ಸರಕಾರಕ್ಕಿರುತ್ತದೆ. ಅದರಂತೆ ಈ ರಸ್ತೆ ನಮ್ಮ ಜಿಲ್ಲೆಯಲ್ಲೂ ಹಾದು ಹೋಗುತ್ತದೆ. ಇದರಿಂದ ರಾಜ್ಯ ಸರಕಾರಕ್ಕೆ ಯಾವ ವೆಚ್ಚವು ತಗಲುವುದಿಲ್ಲ. ಮತ್ತು ಹೆಚ್ಚು ವೆಚ್ಚ ಮಾಡುತ್ತಿಲ್ಲ ಬರೀ ಕೆಲಸದ ಜವಾಬುದಾರಿ ಸರಕಾರದ ಮೇಲೆ ಇದೆ, ಇದರ ಬಗ್ಗೆ ನನ್ನ ಸ್ನೇಹಿತರು ಹೇಳಿದ್ದು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಕೇಂದ್ರ ಸರಕಾರ ಕೊಡುತ್ತಿರುವ ಹಣ ಎಂದು ಬಜೆಟ್ಟಿನಲ್ಲೂ ತೋರಿಸಿದ್ದಾರೆ. ಆದರೆ ಇದರಲ್ಲಿ ರಾಜ್ಯ ಸರಕಾರದ ಸಂಬಂಧವೇ ಇಲ್ಲ.

ಇನ್ನು ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯ ಸರಕಾರದವರು ಏನು ಮಾಡಿಲ್ಲ ಎಂದು ನಾನು ಹೇಳಲಿಕ್ಕೆ ತಯಾರಿಲ್ಲ. ಆದರೆ ಎಷ್ಟು ಪ್ರಗತಿ ಸಾಧಿಸಬೇಕೆಂದು ಇತ್ತೋ ಅದನ್ನು ಮಾಡಲು ಸಾಕಷ್ಟು ಹಣದ ಸಹಾಯ ಇಲ್ಲಿ ಸಿಗಲಿಲ್ಲ. ಆದರೂ ನಿನ್ನೆ ಶ್ರೀಮತಿ ರತ್ನಮ್ಮ ಮಾಧವ ರಾಯರು ಹೇಳಿದಂತೆ ನಮ್ಮ ಮಲೆನಾಡಿನಲ್ಲಿ ಆದಷ್ಟೂ ಹೆಚ್ಚಿನ ಸಾರಿಗೆ ಸಂಪತ್ತುಗಳನ್ನು ಮಾಡಲು ಹೆಚ್ಚು ಹಣ ಖರ್ಚು ಮಾಡುವುದು ಅಗತ್ಯ. ಹಾಗೆ ಮಾಡದಿದ್ದರೆ ಇಲ್ಲಿಗೆ ಯಾವ ರಸ್ತೆ ಸೌಕರ್ಯಗಳೂ ಸಿಗುವುದಿಲ್ಲ. ಕಳೆದ ಜನವರಿ ತಿಂಗಳಲ್ಲಿ ನಮ್ಮ ರಾಜ್ಯದ ಚೀಫ್ ಇಂಜನೀಯರವರು ಇಲ್ಲಿಗೆ ಪ್ರವಾಸ ಬಂದಿದ್ದರು. ಅವರಿಗೂ ಕೂಡ ನಾವು ಮಲೆನಾಡಿನ ಅಭಿವೃದ್ಧಿ ವಿಚಾರಗಳನ್ನು ಹೇಳಿ ಕೆಲವು ಕೆಲಸಗಳ ಬಗ್ಗೆ ಕೂಡ ನಾವು ತೋರಿಸಿದೆವು. ಅಲ್ಲಿ ಹೊಳೆಗಳನ್ನು ದಾಟಲು ಸಣ್ಣ ಸಣ್ಣ ಸೇತುವೆ ಗಳನ್ನು ಮಾಡಿಸಿಕೊಡಬೇಕೆಂದು ಅವರಲ್ಲಿ ಹೇಳಿದೆವು ಮತ್ತು ಅಲ್ಲಿನ ಜನ ನದಿ ದಾಟಬೇಕಾದರೆ ಸಣ್ಣ ಮರದ ತುಂಡುಗಳನ್ನು ಹಾಕಿಕೊಂಡು ಹೇಗೆ ದಾಟುತ್ತಿದ್ದಾರೆ ಎನ್ನುವುದನ್ನು ಅವರಿಗೇ ಖುದ್ದು ತೋರಿಸಿದ್ದೆವು. ಆ ಬಗ್ಗೆ ತಕ್ಕ ಕೆಲಸಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿ ಬಂದರೂ ಇವೊತ್ತಿನವರೆಗೆ ಯಾವುದೇ ಕೆಲಸಗಳನ್ನು ಮಾಡಲಿಲ್ಲ; ಮತ್ತು ಅದಕಾಗಿ ಯಾವ ಹಣವನ್ನೂ ಒದಗಿಸಲಿಲ್ಲ. ಇದರಲ್ಲಿ ರೋಡುಗಳಿಗಾಗಿ ಹಾಗೂ ಬ್ರಿಡ್ಜ್‌ಗಳಿಗಾಗಿ ಹಣ ಒದಗಿ ಸಿರುವುದೂ ಬಹಳ ಕಡಿಮೆ. ಹೋದ ಸಾರಿ 17 ಲಕ್ಷದಷ್ಟು ಒದಗಿಸಿದ್ದಾರೆ. ಈ ಸಾರಿ ಆರು ಲಕ್ಷ ಎಂದು ಇಟ್ಟಿದ್ದರು. ಅದರಲ್ಲೂ ಈಗ ಕಡಿಮೆ ಮಾಡಿ ಕೇವಲ ಮೂರುವರೆ ಲಕ್ಷ ಎಂದು ಮಾಡಿದರೆ ಇಲ್ಲಿನ ಕೆಲಸಗಳು ಕುಂಠಿತವಾಗುತ್ತವೆ. ಆದುದರಿಂದ ಇಲ್ಲಿ ಮಾಡಬೇಕಾದ ಕೆಲಸಗಳನ್ನು ಕೂಡಲೇ ಮಾಡುವುದು ಅಗತ್ಯ. ಅದರಲ್ಲೂ ಕೆಲವು ರಸ್ತೆಗಳನ್ನು ಮತ್ತು ಸಣ್ಣ ಸಣ್ಣ ಸೇತುವೆ ಗಳನ್ನು ಮಲೆನಾಡು ಭಾಗದಲ್ಲಿ ಮಾಡಿದರೆ ಅಲ್ಲಿರುವ ಹಳ್ಳಿಗಳ ಜನಕ್ಕೆ ಅನುಕೂಲವಾಗುತ್ತದೆ. ಇಂತಹ ನಾಲ್ಕೈದು ಸಣ್ಣ ಕೆಲಸಗಳು ಇಲ್ಲವೆ. ಇದನ್ನು ಮಾಡದೇ ಇದ್ದರೆ ಇಲ್ಲಿನ ಜನಕ್ಕೆ ತುಂಬಾ ಕಷ್ಟವಾಗುತ್ತದೆ. ಇಲ್ಲಿನ ಜನರ ಸಂಕಟವನ್ನು ನಮ್ಮ ಚೀಫ್ ಇಂಜನೀಯರು ಕೂಡ ನೋಡಿರು ವುದರಿಂದ ಬಹುಶಃ ಅವರಿಗೂ ಇದರ ವಿಚಾರ ಚೆನ್ನಾಗಿ ಗೊತ್ತಾಗಿದೆ. ಇದರ ಬಗ್ಗೆ ಕೂಡಲೇ ಸರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಈ ವರ್ಷವೇ ಮಾಡಿದರೆ ತುಂಬಾ ಉಪಕಾರವಾಗು ತ್ತದೆ ಎಂದು ಇಲ್ಲಿ ಹೇಳುತ್ತೇನೆ.

ಇನ್ನೊಂದು ವಿಚಾರ, ನನ್ನ ಕ್ಷೇತ್ರದಲ್ಲಿ ಸುಮಾರು ಐದಾರು ಮೈಲಿ ಇರುವ ಒಂದು ರಸ್ತೆಯಲ್ಲಿ ನಾಲ್ಕೈದು ಕಲ್‌ವರ್ಟು ಕೆಲಸಗಳೂ ಆಗಬೇಕು. ಇದನ್ನು ಮಾಡದೇ ಇರುವುದರಿಂದ ಇಲ್ಲಿನ ಬಸ್ಸು ಸರ್ವಿಸ್ಸುಗಳು ನಿಂತು ಹೋಗಿವೆ. ಈ ವಿಚಾರವಾಗಿ ನಮ್ಮ ಜಿಲ್ಲೆಯಲ್ಲಿರುವ ಸ್ವತಂತ್ರ ಪಕ್ಷದ ನಾಯಕರಾದ ಶ್ರೀ ಲೋಬೋ ಪ್ರಭು ಎನ್ನುವವರು ಈಗಿನಿಂದಲೇ ಚುನಾವಣೆಗೆ ತಯಾರು ಮಾಡುತ್ತಿರುವಂತೆ ಅವರು ಹೊರಡಿಸುತ್ತಿರುವ 'ಇನ್ ಸ್ಟೈಟ್' ಎನ್ನುವ ಪತ್ರಿಕೆಯಲ್ಲಿ ಈ ರೀತಿ ಪ್ರಕಟಣೆ ಮಾಡಿದ್ದಾರೆ. ಅದನ್ನು ಇಲ್ಲಿ ಸರಕಾರದ ಗಮನಕ್ಕೆ ತರುವುದು ಅತ್ಯಗತ್ಯ ಎಂದು ನನಗೆ ತೋರುತ್ತದೆ. ಅದಕ್ಕಾಗಿ ಅದನ್ನು ಇಲ್ಲಿ ತಮ್ಮ ಅನುಮತಿ ಪಡೆದು ಓದುತ್ತೇನೆ.

> "We are surprised to learn that bus traffic to this village has been stopped because the culverts and the roads have been condemned and the repair works have been stopped because of emergency...."

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮೀ, ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಯಾರೋ ಪ್ರೈವೇಟು ಪಾರ್ಟಿ ಒಬ್ಬರು ಕಾಗದ ಬರೆದಿರುವುದನ್ನು ಇಲ್ಲಿ ಮಾನ್ಯ ಸದಸ್ಯರು ಸಭೆಯಲ್ಲಿ ಓದುತ್ತಾ ಸ್ವತಂತ್ರ ಪಕ್ಷದಮೇಲೆ ಹೇಳುತ್ತಿದ್ದಾರೆ. ಹಾಗಾದರೆ ನಾವೂ ಕೂಡ ನಮಗೆ ದಿನಬೆಳಗಾದರೆ ಹತ್ತು ಇಪತ್ತು ಪತ್ರಗಳು ಬರುತ್ತಿರುತ್ತವೆ. ಅದನ್ನೂ ಕೂಡ ಇಲ್ಲಿ ಇಲ್ಲಿ ಓದಬಹುದು. ಸ್ವತಂತ್ರ ಪಾರ್ಟಿಯವರು ಹೀಗೆ ಮಾಡುತ್ತಾರೆ ಎಂದು ಅದಕ್ಕೆ ಹೆದರಿ ಇಲ್ಲಿ ಓದಿದರೆ ಸರಿಯಾಗುತ್ತದೆಯೇ ? ಇದರ ಬಗ್ಗೆ ಮಾನ್ಯ ಅಧ್ಯಕ್ಷರು ಗಮನಿಸಬೇಕು.

SRI G. V. GOWDA.—I wish to know the ruling of the Chair. I draw your attention to rule 285 (1).

> "While the Assembly is sitting, a member shall not read any book, newspaper or letter, except in connection with the business of the Assembly."

So, the content of the paper is not connected with the business of the Assembly and so, he is not in order, in my opinion, to read that statement. I request that it may be ruled out of order.

MR. DEPUTY SPEAKER.—While speaking on Demand, he may refer to some quotation. He may quote it and he is quite in order.

ಶ್ರೀ ಎಸ್. ಎಸ್. ಕೊಳ್ಕೆಬೈಲ್.—ಕುಂದಾಪುರ-ಕಳ್ಳೂರು ರಸ್ತೆ ಪೂರಾ ಹಾಳಾಗಿ ಜನರಿಗೆ ಉಪದ್ರವವಾಗಿದೆ. ಆ ವಿಚಾರವಾಗಿ ಪತ್ರಿಕೆಯಲ್ಲಿ ಬರೆದದ್ದನ್ನು ತಮ್ಮ ತಿಳಿವಳಿಕೆಗೆ ತರಲು ಪ್ರಯತ್ನ ಮಾಡಿದ್ದೇನೆ.

ಇನ್ನು ವಿದ್ಯುಚ್ಛಕ್ತಿ ವಿಷಯ. ರೂರಲ್ ಎಲೆಕ್ಟ್ರಿಫಿಕೇಷನ್ ಮಾಡುತ್ತೇವೆ ಎಂದು ಆಗಿಂದಾಗೆ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಅನೇಕ ಘೋಷಣೆಗಳನ್ನು ಹೊರಡಿಸಿದ್ದಾರೆ. ನಮ್ಮಲ್ಲಿ 26 ಸಾವಿರ ಹಳ್ಳಿಗಳು ಇವೆ. ಮೂರನೇ ಪಂಚವಾರ್ಷಿಕಯೋಜನೆಯಲ್ಲಿ 5,600 ಹಳ್ಳಿಗಳಲ್ಲಿ ಎಲೆಕ್ಟ್ರಿಫಿಕೇಷನ್ ಮಾಡುತ್ತೇವೆ ಎಂದು ರಾಜ್ಯಸರ್ಕಾರದವರು ಘೋಷಣೆ ಮಾಡಿ ಆ ಪ್ರಕಾರ ಹೆಚ್ಚಿನ ಪ್ರಗತಿಯನ್ನು ಸಾಧನೆ ಮಾಡಿದ್ದಾರೆ. ಆದರೆ ಕೆಲವು ಹಳ್ಳಿಗಳಿಗೆ ಒಂದೆರಡು ಪಂಪ್ ಸೆಟ್ಟುಗಳನ್ನು ಕೊಟ್ಟು ಎಲ್ಲಾ ಕಡೆಯಲ್ಲೂ ರೂರಲ್ ಎಲೆಕ್ಟ್ರಿಫಿಕೇಷನ್ ಆಗಿದೆ ಎಂದು ಹೇಳುತ್ತಾ ಇದ್ದಾರೆ. ನನ್ನ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಸಾವಿರಾರು ಜನ ರೈತರು ಅವರಿಗೆ ಪವರ್ ಕೊಟ್ಟು ಐ. ಪಿ. ಸೆಟ್ಟುಗಳನ್ನು ಕೊಟ್ಟರೆ ಎರಡು ಮೂರು ಬತ್ತದ ಬೆಳೆಗಳನ್ನು ತೆಗೆಯಲಿಕ್ಕೆ ತಯಾರಾಗಿದ್ದಾರೆ. ಅಷ್ಟು ನೀರಿನ ಅನುಕೂಲ ಉಂಟು. ಆದರೆ ಪಂಪ್ ಸೆಟ್ಸ್ ಸಿಕ್ಕುವುದಿಲ್ಲ. ಪಂಪ್‌ಸೆಟ್ಟ್ ಸಿಕ್ಕರೂ ಕೂಡ ಅನೇಕ ಮಾನ್ಯ ಸದಸ್ಯರು ಹೇಳಿದ ಹಾಗೆ ಪವರ್ ಸಿಕ್ಕುತ್ತಾ ಇಲ್ಲ; ಪವರ್ ಸಿಕ್ಕಬೇಕಾದರೆ 6 ತಿಂಗಳು, ವರ್ಷ, ಎರಡು ವರ್ಷಗಳ ವರೆಗೆ ಜಾತಕ ಪಕ್ಷಿಯಂತೆ ಕಾಯಬೇಕಾಗಿದೆ. ಶರಾವತಿಯಲ್ಲಿ ಹೆಚ್ಚಿನ ವಿದ್ಯುಚ್ಛಕ್ತಿ ಬರುತ್ತಾ ಇದ್ದರೂ ಕೂಡ ಅದು ರೈತರಿಗೆ ಸಿಕ್ಕದೇ ಇರುವುದು ದುಃಖಕರವಾದ ಸಂಗತಿ. ಎ. ಸಿ. ಎಸ್. ಆರ್. ವೈರ್ ಇಲ್ಲ, ಕಂಬ ಇಲ್ಲ ಎಂದು ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನವರು ಹೇಳುತ್ತಾ ಇದ್ದಾರೆ. ಅದು ನಿಜವಾದ ಸಂಗತಿಯಾದರೆ ಕೇಂದ್ರ ಸರ್ಕಾರದವರಿಗೆ ಒತ್ತಾಯ ಮಾಡಿ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ಈ

(ಶ್ರೀ ಎಸ್. ಎಸ್. ಕೊಳ್ಕೆಬೈಲ್)

ಸಲಕರಣೆಗಳನ್ನು ಕೂಡ ಒದಗಿಸಿ ರೈತರಿಗೆ ಬೇಕಾದ ಪವರ್ ಮತ್ತು ಪಂಪ್ ಸೆಟ್ಸ್‌ಗಳನ್ನು ಒದಗಿಸಿದರೆ ನಿಜವಾಗಿಯೂ ನಮ್ಮ ರೈತರು ಈಗ ಬೆಳೆಯುತ್ತಾ ಇರುವುದಕ್ಕಿಂತ ಹತ್ತು ಪಾಲು ಹೆಚ್ಚು ಆಹಾರದ ಬೆಳೆಯನ್ನು ಬೆಳೆಯಬಹುದು ಎಂದು ನಾನು ಖಂಡಿತವಾಗಿ ಹೇಳಬಿಚ್ಛಿಸುತ್ತೇನೆ. ಆದ್ದರಿಂದ ರೂರಲ್ ಎಲೆಕ್ಟ್ರಿಫಿಕೇಷನನ್ನು ತೀವ್ರಗತಿಯಿಂದ ಮಾಡಬೇಕೆಂದು ನನ್ನ ವಿನಂತಿ. ಇವತ್ತು ಶರಾವತಿ ಆಯಿತು. ಇನ್ನು ಮುಂದೆ ಕಾಳಿನದಿ, ವರಾಹಿ ಪ್ರಾಜಿಕ್ಟುಗಳಿಗೆ ಹೆಚ್ಚಿನ ಗಮನವನ್ನು ಕೊಡಬೇಕು. ಏಕೆಂದರೆ ಅವುಗಳಿಂದ ಪವರ್ ಬರುವುದೂ ಅಲ್ಲದೆ 30-40 ಸಾವಿರ ಎಕರೆಗೆ ನೀರನ್ನು ಅದರಿಂದ ಉಣ್ಣಿಸಬಹುದು. ಹೆಚ್ಚಿನ ಖರ್ಚು ಇಲ್ಲ. 30 ಅಥವಾ 40 ಕೋಟಿ ರೂಪಾಯಿ ಖರ್ಚಾಗಬಹುದು. ವರಾಹಿ ಪ್ರಾಜಿಕ್ಟ್‌ನ್ನು ಅದಷ್ಟು ಬೇಗನೆ ತೆಗೆದುಕೊಳ್ಳಬೇಕು ಮತ್ತು ಅದನ್ನು ಕಾರ್ಯಗತ ಮಾಡಬೇಕು ಎಂದು ಹೇಳುತ್ತೇನೆ. ಕಾಳಿನದಿ ತೆಗೆದುಕೊಳ್ಳಬಾರದು ಎಂಬುದು ನನ್ನ ವಾದ ಅಲ್ಲ. ಅದಕ್ಕೆ 130 ಕೋಟಿ ರೂಪಾಯಿ ಬೇಕಾಗಬಹುದು, ಆದರೆ ವರಾಹಿ ಪ್ರಾಜೆಕ್ಟಿಗೆ 30-40 ಕೋಟಿ ರೂಪಾಯಿಗಳಾದರೆ ಸಾಕು, ಕೆಲಸ ಪೂರೈಸಬಹುದು. ಒಂದು ಕಡೆ ವಿದ್ಯುಚ್ಛಕ್ತಿಯೂ ಸಿಕ್ಕುತ್ತದೆ ಮತ್ತು ಇನ್ನೊಂದು ಕಡೆ 30-40 ಸಾವಿರ ಎಕರೆಗೆ ನೀರನ್ನು ಕೊಟ್ಟು ಹೆಚ್ಚಿನ ಬೆಳೆಯನ್ನು ಉತ್ಪಾದನೆ ಮಾಡಬಹುದು. ಆದ್ದರಿಂದ ವರಾಹಿ ಪ್ರಾಜಿಕ್ಟ್‌ನ್ನು ಕಾರ್ಯಗತ ಮಾಡುವುದಕ್ಕೆ ಕೂಡಲೇ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮಿ, ಈಗ ಡಿಮ್ಯಾಂಡ್ ನಂಬರ್ 31, 32, 43, 47, 48, 50, ಈ 6 ಡಿಮ್ಯಾಂಡುಗಳು ನಮ್ಮ ಮುಂದೆ ಇವೆ. ಇದರ ಬಗ್ಗೆ ಈ ಸಭೆ ಒಪ್ಪಿಗೆ ಕೊಡುವುದಕ್ಕಿಂತ ಮುಂದೆ ಬಹುಶಃ ಸರ್ಕಾರವನ್ನು ಬಹಳ ಕಟುವಾಗಿ ಟೀಕೆ ಮಾಡ ಬೇಕಾದ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಏಕೆಂದರೆ ನಾನು ಈ ಸಭೆಗೆ ಬಂದು 4 ವರ್ಷ ಆಯಿತು. ಈ 4 ವರ್ಷದ ನನ್ನ ಅನುಭವದಲ್ಲಿ ನಾವು ಈ ಇಲಾಖೆಯ ಆಡಳಿತದ ಬಗ್ಗೆ ಅನೇಕ ಸಲಹೆಗಳನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದೆವು. ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಭಾಷಣ ಮಾಡತಕ್ಕ ಕಾಲದಲ್ಲಿ, ಬಡ್ಜೆಟ್ ಭಾಷಣದ ಮೇಲೆ ಅವರು ತಮ್ಮ ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಅನೇಕ ನ್ಯೂನತೆಗಳನ್ನು ಸರಿಪಡಿಸುತ್ತೇವೆ ಎಂದು ಆಶ್ವಾಸನೆಯನ್ನೂ ಸಹ ಅವರು ಕೊಟ್ಟಿದ್ದರು. ಅದರಲ್ಲಿ ಕೆಲವು ಸಲಹೆಗಳನ್ನು ಈಡೇರಿಸಿದ್ದಾರೆ ಅದಕ್ಕೆ ನಾನು ನನ್ನ ವೈಯಕ್ತಿಕವಾದಂತಹ ಅಭಿನಂದಿನೆಗಳನ್ನು ಅವರಿಗೆ ಸಲ್ಲಿಸುತ್ತೇನೆ. ಆದರೆ ಪ್ರಗತಿಪರವಾದ ಅನೇಕ ಸಲಹೆಗಳು ಇನ್ನೂ ಇವೆ ಅವನ್ನು ಕಾರ್ಯರೂಪಕ್ಕೆ ತಂದಿಲ್ಲ. ಅವನ್ನು ಒಂದೊಂದಾಗಿ ಹೇಳಲು ಅಪೇಕ್ಷೆಪಡುತ್ತೇನೆ. ಪ್ರಥಮವಾಗಿ ಶ್ರೀಮಾನ್ ಕೊಳ್ಕೆಬೈಲ್ ಅವರು ವರಾಹಿ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳಬೇಕು ಎಂದು ಹೇಳಿದರು. ಅದೇ ರೀತಿ ಕಾಳಿನದಿ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳಬೇಕೆಂದು ಅನೇಕ ಜನ ಕಾಂಗ್ರೆಸ್ ಸದಸ್ಯರು ಹೇಳಿದರು. ಇದಕ್ಕೆ ಕಾರಣ ಅದರಿಂದ ಪವರ್ ಬರುತ್ತದೆ ಎಂದು ಹೇಳಿ ಇದರ ಬಗ್ಗೆ ಬಹಳ ಆಸಕ್ತಿಯನ್ನು ವಹಿಸಬೇಕೆಂದು ಬಹಳ ಜನ ಕಾಂಗ್ರೆಸ್ ಸದಸ್ಯರು ಹೇಳಿದ್ದನ್ನು ಪತ್ರಿಕೆಗಳಲ್ಲಿ ಓದಿದೆ. ನಾನು ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಮಾಡುವುದಾದರೂ ಇಷ್ಟೆ. ಇವತ್ತು ನಮ್ಮ ದೇಶದಲ್ಲಿ ಎಷ್ಟು ಪವರ್ ಪ್ರಾಜೆಕ್ಟುಗಳನ್ನು ಮಾಡುತ್ತಾ ಇದ್ದೇವೆಯೋ ಅದೇ ಮಟ್ಟದಲ್ಲಿ ಇಂಡಸ್ಟ್ರೀಸ್ ಕೂಡ ಡೆವಲಪ್ ಆಗುತ್ತಾ ಇದೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇವು ಒಂದ ಕ್ಕೊಂದಕ್ಕೆ ಹೊಂದಾಣಿಕೆ ಇರಬೇಕು. ಇಲ್ಲದೇ ಹೋದರೆ ಪ್ರಾಯಶ: ಎಷ್ಟೋ ಪವರ್ ಪ್ರಾಜೆಕ್ಟು ಗಳನ್ನು ತೆಗೆದುಕೊಂಡರೂ ಕೂಡ ಅದರಿಂದ ಉತ್ಪಾದನೆಯಾಗತಕ್ಕ ಪವರ್ ಪೊಟೆನ್ಷಿಯಲ್ ಹೆಚ್ಚಿಗೆ ಬೇರೆ ರಾಜ್ಯಗಳಿಗೆ ಅದನ್ನು ಕೇವಲ ವ್ಯಾಪಾರದ ಉದ್ದೇಶಕ್ಕೆ, ಲಾಭಗಳಿಸತಕ್ಕ ಉದ್ದೇಶಕ್ಕೆ ಮಾರಾಟ ಮಾಡತಕ್ಕ ಸಂದರ್ಭಬರುತ್ತದೆ. ಅಂತಹ ಪ್ರಾಜೆಕ್ಟುಗಳನ್ನು ನಿರ್ಮಾಣ ಮಾಡುವುದಾದರೆ ಅದರಿಂದ ಸ್ವಲ್ಪ ಲಾಭ ಪಡೆಯಬಹುದೇ ಹೊರತು ಪ್ರಾಯಶ: ನಮ್ಮ ಸಂಸ್ಥಾನಕ್ಕೆ ಹೆಚ್ಚಿನ ಫಲ ದೊರೆಯುವುದಿಲ್ಲ ಎಂಬುದನ್ನು ಸ್ಪಷ್ಟ ಪಡಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇವತ್ತು ಕಾಳೀನದಿ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳಬೇಕೆಂದು ಅನೇಕ ಮಾನ್ಯ ಸದಸ್ಯರು ಹೇಳುತ್ತಾರೆ. ಇನ್ನೂ ಅನೇಕ ಪ್ರಾಜಿಕ್ಟುಗಳು ಇವೆ. ಅವುಗಳಿಂದ ನಾವು ಪವರ್ ಜನರೇಟ್ ಮಾಡಬಹುದು. ಕಾಳೀನದಿ, ವರಾಹಿ, ಕಾವೇರಿ, ಅಘನಾಶಿನಿ, ಬಾರಾಪೊಳೆ, ಹೀಗೆ ಅನೇಕ ಪ್ರಾಜಿಕ್ಟುಗಳು ಇವೆ. ನನ್ನ ಅಭಿಪ್ರಾಯ ವನ್ನು ಹೇಳುವುದಾದರೆ ತಾತ್ಕಾಲಿಕವಾಗಿ ಇವುಗಳ ಅವಶ್ಯಕತೆ ಇಲ್ಲ- ಏಕೆಂದರೆ ಇವತ್ತು ಶರಾವತಿ ಯಲ್ಲಿ ಉತ್ಪಾದನೆ ಮಾಡತಕ್ಕ ಪವರ್‌ನ್ನು ಉಪಯೋಗಿಸಿಕೊಳ್ಳತಕ್ಕ ಶಕ್ತಿ ನಮಗೆ ಇಲ್ಲ. ಅದಕ್ಕೇ ಸುಮಾರು 100 ಕೋಟಿ ರೂಪಾಯಿ ಆಗುತ್ತದೆ ಎಂದು ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ಹೊಸ ಪ್ರಾಜಿಕ್ಟುಗಳನ್ನು ಯಾವುದಾದರೂ ತೆಗೆದುಕೊಂಡರೂ ಕೂಡ

ಅದನ್ನು ನಾವು ವಿರೋಧ ಮಾಡುತ್ತೇವೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳು ವುದಕ್ಕೆ ಇಷ್ಟಪಡುತ್ತೇನೆ. ಒಂದುವೇಳೆ ಕೇಂದ್ರ ಸರ್ಕಾರದವರು ನಿಮಗೆ ಏನಾದರೂ ಪೂರ್ಣ ಹಣ ಕೊಟ್ಟು ಸಹಾಯ ಮಾಡುವುದಾದರೆ ಮಾತ್ರ ಈ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕೇ ವಿನಾ ನೀವೇ, ರಾಜ್ಯ ಸರ್ಕಾರದ ಹಣದಿಂದ ಇದರಲ್ಲಿ ಈ ಒಂದು ಯೋಜನೆಗಳನ್ನು ತೆಗೆದುಕೊಳ್ಳುವುದು, ತನ್ಮೂಲಕ ಉತ್ಪಾದದೆ ಮಾಡಿದ ಪವರ್‌ನ್ನು ಬೇರೆ ಸಂಸ್ಥಾನಗಳಿಗೆ ಮಾರಾಟ ಮಾಡುವುದು ಈ ಒಂದು ಪಾಲಿಸಿ ಏನಿದೆ ಇದು ಖಂಡನೀಯವಾದದ್ದು. ಇದು ಬೇಕಾಗಿಲ್ಲ ಎಂದು ಸ್ಪಷ್ಟವಾಗಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ನಾನು ಪ್ರಾಸ್ತಾಪ ಮಾಡಲು ಇಚ್ಛಿಸುತ್ತೇನೆ. ಹೊಗೇನ್‌ಕಲ್ ಪ್ರಾಜೆಕ್ಟ್ ವಿಷಯದಲ್ಲಿ ಮಾನ್ಯ ಮಂತ್ರಿಗಳು ನಿರ್ದಿಷ್ಟವಾಗಿ ಉತ್ತರ ಕೊಡಬೇಕು. ಕೇಂದ್ರದ ಸ್ನೇಹವನ್ನು ಪಡೆಯುವುದಕ್ಕೆ, ಕೇಂದ್ರದ ಪ್ರಭಾವಕ್ಕೆ ಒಳಗಾಗಿ, ಮದರಾಸಿನ ಮುಂಖಂಡರ ಪ್ರಭಾವಕ್ಕೆ ಒಳಗಾಗಿ ಹೋಗೇನ್‌ಕಲ್ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವು ದಾದರೆ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ಸರ್ಕಾರ ಬಹಳ ಹುಷಾರಾಗಿ ಯೋಚನೆ ಮಾಡಬೇಕಾಗುತ್ತದೆ. ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಈ ಪೋರ್ಟ್‌ಫೋಲಿಯೋ ತೆಗೆದುಕೊಳ್ಳುವುದಕ್ಕೆ ಮುಂಚೆ ಚೀಫ್ ಮಿನಿಸ್ಟರು ಈ ವಿಷಯದಲ್ಲಿ ಕಮಿಟ್ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗಿದೆ. ಕೆಲವು ಪತ್ರಿಕೆಗಳಲ್ಲಿ ವರದಿಯಾಗಿರುವ ಪ್ರಕಾರ ಹೋಗೇನ್‌ಕಲ್ ಪ್ರಾಜೆಕ್ಟನ್ನು ಮದ್ರಾಸ್ ಸರ್ಕಾರದವರು ಇಂಪ್ಲಿಮೆಂಟ್ ಮಾಡುತ್ತಾರೆ, ಮೈಸೂರು ಸರ್ಕಾರ ಮತ್ತು ಸಿ.ಡಬ್ಲ್ಯೂ.ಪಿ.ಸಿ. ಅವರ ಅಭಿಪ್ರಾಯ ಕೇಳಿದ್ದಾರೆ, ಅದರಂತೆ ಪ್ರೊಸೀಡ್ ಮಾಡುತ್ತಾರೆ ಎಂಬ ಅಭಿಪ್ರಾಯ ಇದೆ. ಇನ್ನೊಂದು ವರದಿ ಏನೆಂದರೆ, ಮುಖ್ಯ ಮಂತ್ರಿಗಳು ಇದಕ್ಕೆ ಒಪ್ಪಿಗೆ ಕೊಟ್ಟಿ ದ್ದಾರೆ ಎಂಬ ಅಭಿಪ್ರಾಯ ಇದೆ. ಅದನ್ನು ಇವತ್ತು ತೆಗೆದುಕೊಳ್ಳುವುದಾದರೆ ನಾಳೆ ಏನಾಗು ತ್ತದೆ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಮೈಸೂರು ರಾಜ್ಯದ ಹಿತಾಸಕ್ತಿ ಯನ್ನು ಕೊಲೆ ಮಾಡುತ್ತೀರಿ ಎಂಬ ಅಂಶವನ್ನು ಹೇಳಲೇಬೇಕಾಗುತ್ತದೆ. ಯಾರ ಮೇಲೂ ನನಗೆ ವೈಯಕ್ತಿಕ ಆಕ್ರೋಶವಿಲ್ಲ, ನಮ್ಮ ಕಡೆ ಇಷ್ಟು ಕೆಲಸ ಮಾಡಲೇಬೇಕೆಂದು ವಾದಿಸುತ್ತಿಲ್ಲ. ಇರುವ ಅವಧಿಯೊಳಗಾಗಿ ಕಾವೇರಿ ನೀರನ್ನು ನಾವು ಉಪಯೋಗಿಸಿಕೊಳ್ಳ ದಿದ್ದರೆ ನಮಗಿರುವ ಅವಕಾಶ ಹೋಗಿಬಿಡುತ್ತದೆಂದು ನಾನು ಅನೇಕ ಸಾರಿ ಹೇಳಿದ್ದೇನೆ. ಪಾರ್ಲಿಮೆಂಟಿನ ಸದಸ್ಯರು ಕೃಷ್ಣಾನದಿ ನೀರಿನ ವಿಚಾರ ಮಾತ್ರ ಹೇಳುತ್ತಿದ್ದಾರೆ, ಅಲ್ಲಿನ ಹಿಂದುಳಿದ ಪ್ರದೇಶವನ್ನು ಅಭಿವೃದ್ಧಿಪಡಿಸುವುದಕ್ಕೆ ಅಡ್ಡಿಯಿಲ್ಲ. ಆದರೆ ಅದೇ ರೀತಿ ಕಾವೇರಿ ನೀರಿನಿಂದ ಪವರ್ ಉತ್ಪತ್ತಿ ಮತ್ತು ನೀರಾವರಿ ಸೌಕರ್ಯವನ್ನು ಇರುವ ಕಾಲಮಿತಿಯೊಳಗೆ ಮಾಡಿಕೊಳ್ಳ ಬೇಕಾದುದು ಸಹ ನಮ್ಮ ಕರ್ತವ್ಯ. ಈ ವಿಚಾರದಲ್ಲಿ ನಮ್ಮ ಮೂರು ಜನ ಮುಖಂಡರುಗಳಾದ ಚನ್ನಬಸಪ್ಪನವರು, ವೀರಣ್ಣಗೌಡರು ಮತ್ತು ನಿಜಲಿಂಗಪ್ಪನವರು ಪ್ರಯತ್ನ ಮಾಡಿದ್ದಾರೆ. ಆದರೆ ಅವರು ಯಶಸ್ವಿಯಾಗಿ ಆ ಕೆಲಸ ಮಾಡಿಲ್ಲದಿರುವುದರಿಂದ ಮೈಸೂರು ಜನರು ಒಂದು ರೀತಿಯಲ್ಲಿ ಚಳುವಳಿ ನಡೆಸಬಹುದು. ಅದಕ್ಕಾಗಿ ಇದನ್ನು ಒತ್ತಿಹೇಳಬೇಕಾಗಿದೆ. ಹೋಗೇನಕಲ್ ಯೋಜನೆ ಯಿಂದ ಶಿವಸಮುದ್ರ ಪ್ರಾಜೆಕ್ಟು ಮುಳುಗಡೆಯಾಗಬಹುದೆಂಬ ಭಯವಿದೆ. 18 ವರ್ಷಗಳಲ್ಲಿ ಕೇವಲ 10 ಸಾವಿರ ಎಕರೆಯಷ್ಟು ಕೂಡ ನೀರಾವರಿಗೆ ತರದಿರುವುದು ಬಹಳ ಅವಮಾನಕರ. ವೀರೇಂದ್ರ ಪಾಟೀಲರಿಗೆ ಈ ವಿಷಯ ಚೆನ್ನಾಗಿ ಮನವರಿಕೆಯಾಗಿದೆ, ಮೊನ್ನೆ ಪವರ್ ಕನ್‌ಸಲ್ಟೇಟಿವ್ ಕಮಿಟಿ ಮೀಟಿಂಗಿನಲ್ಲಿ ಚರ್ಚೆಯಾದಾಗ ಅವರು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಮಾತನಾಡಿದ್ದಾರೆ. 1974 ರೊಳಗಾಗಿ ಕಾವೇರಿಯ ನೀರನ್ನು ಉಪಯೋಗಿಸಿಕೊಳ್ಳದಿದ್ದರೆ ಫಲತಾಂಶವೇನೆಂಬುದನ್ನು ಆ ಮೀಟಿಂಗಿನಲ್ಲಿ ಚರ್ಚೆಮಾಡಿದ್ದಾರೆ. ಅವರಿಗೆ ಆಸಕ್ತಿಯಿದೆ. ಇದನ್ನು ಕಾರ್ಯರೂಪಕ್ಕೆ ತರಬೇಕು. ಇದರಿಂದ ಆರೇಳು ಜಿಲ್ಲೆಗಳಿಗೆ ಆಗುವ ಅನ್ಯಾಯವನ್ನು ತಡೆಗಟ್ಟ ದಿದ್ದರೆ ಬಹಳ ನಷ್ಟವಾಗುತ್ತದೆ. ಮಾನ್ಯ ಲೋಕೋಪಯೋಗಿ ಸಚಿವರಿಗೆ ಇರಿಗೇಷನ್ ಸಂಬಂಧ ನೇರವಾಗಿಲ್ಲದಿದ್ದರೂ ಅವರು ಈ ವಿಚಾರದಲ್ಲಿ ಆಸಕ್ತಿ ವಹಿಸಬೇಕು. ಹೊಗೇನಕಲ್ ಯೋಜನೆ ವಿಷಯದಲ್ಲಿ ಅವರಿಗೆ ನೇರ ಸಂಪರ್ಕವಿದೆ. ಹಾಗಿರುವಾಗ ಅವರು ನಿರ್ದಿಷ್ಟ ನಿಲುವು ತಾಳಬೇಕು. ಮದ್ರಾಸಿನವರು ಪ್ರಭಾವ ಬೀರಿ ಸಿ.ಡಬ್ಲ್ಯು. ಪಿ.ಸಿ. ಅನುಮತಿ ಪಡೆದು ನಮ್ಮ ಅನುಮತಿ ಪಡೆ ಯದೆ ಕಾರ್ಯಕ್ರಮ ತೆಗೆದುಕೊಳ್ಳಲು ಅವಕಾಶಕೊಡಬಾರದು. ಇಂಜಿನಿಯರುಗಳ ಅಭಿಪ್ರಾಯ ಪಡೆದು ಪರಿಶೀಲಿಸಿ ಸಚಿವರು ತಮ್ಮ ಅಭಿಪ್ರಾಯ ಸೂಚಿಸಬೇಕು. ಇನ್ನು ಪವರ್ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಕಾಲವಿಲ್ಲದಿರುವುದರಿಂದ ಆಡಳಿತ ವರದಿಯಲ್ಲಿ ಕೊಟ್ಟಿರುವ ಒಂದು ವಿಷಯ ವನ್ನು ಪ್ರಸ್ತಾಪಮಾಡಿ ಪಿ.ಡಬ್ಲ್ಯು. ಇಲಾಖೆಗೆ ಸಂಬಂಧಪಟ್ಟ ಬೇರೆ ವಿಷಯ ಹೇಳುತ್ತೇನೆ. ಇವತ್ತು 26 ಸಾವಿರ ಹಳ್ಳಿಗಳಿಗೆ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಿರುವುದಾಗಿ ಹೇಳಿದೆ. ಯಾವ ಯಾವ ಕಡೆ ಎಷ್ಟಾಗಿದೆ ಎಂಬುದನ್ನು ನೋಡಬೇಕು. ನಾಲ್ಕೂವರೆ ವರ್ಷಗಳಿಂದ ಒಂದೇ ಸಮ

(ಶ್ರೀ ಎಚ್. ಡಿ. ದೇವೇಗೌಡ)

ನಾಗಿ ಹೇಳಿದರೂ ನಾವು ಹೇಳಿದ ಕಡೆ ಒಂದು ಗ್ರಾಮಕ್ಕೂ ಕೂಡ ಅಂದಾಜುಮಾಡಿಲ್ಲ. ಸರ್ವತೋಮುಖವಾಗಿ ಎಲ್ಲಾ ಕಡೆಯೂ ಅನುಕೂಲಮಾಡದೆ ಮಂತ್ರಿಗಳು ತಮ್ಮ ತಾಲ್ಲೂಕು, ಜಿಲ್ಲೆ ಕ್ಷೇತ್ರ ಮುಂತಾದ ಕಡೆಗಳಿಗೆ ಮಾತ್ರ ಹೆಚ್ಚು ಗಮನಕೊಡುವ ಮನೋಭಾವನೆ ಹೊಂದಿದ್ದರೆ ಅದು ನಿಜವಾಗಿಯೂ ಖಂಡನೀಯ. ದಕ್ಷಿಣ ಕನ್ನಡದಲ್ಲಿ ಹೆಚ್ಚಿನ ಕೆಲಸವಾಗಿದೆ. ನಿನ್ನೆ ಮುಖ್ಯ ಮಂತ್ರಿಗಳು ಇದನ್ನು ಹೇಳಿದರು. ಹೀಗೆ ಒಂದೇ ಒಂದು ಜಿಲ್ಲೆಗೆ ಹೆಚ್ಚು ಪ್ರಾಮುಖ್ಯತೆ ಕೊಡುವುದು ನ್ಯಾಯವಲ್ಲ, ಎಲ್ಲ ಭಾಗಗಳಿಗೂ ಸಮತಾ ದೃಷ್ಟಿಯಿಂದ ಅನುಕೂಲಮಾಡಿಕೊಡಬೇಕು.

50 ಸಿವಿಲ್ ವರ್ಕ್ಸ್ ವಿಚಾರದಲ್ಲಿ ನಾನು ಆಗಲೇ ಹೇಳಿದ್ದೇನೆ. ಚೀಫ್ ಎಂಜಿನಿಯರಿಂದ ಬಜೆಟ್ ಬರುವುದು, ಹಣಕಾಸಿನ ಇಲಾಖೆ ಅದನ್ನು ಪ್ರಿಂಟ್ ಮಾಡಿಸುವುದು. ಕೆಲವು ಡಿವಿಜನ್ನುಗಳಿಗೆ 50 ಲಕ್ಷ, 60 ಲಕ್ಷ, 80 ಲಕ್ಷ ಹೀಗೆಲ್ಲಾ ಹಣ ಒದಗಿಸಿದ್ದಾರೆ, ಹೊಸ ಮೈಸೂರು ಮತ್ತು ಹಳೆಯ ಮೈಸೂರಿನ ಅನೇಕ ಡಿವಿಜನ್ನುಗಳಲ್ಲಿ ಈ ರೀತಿ ಇದೆ. ಅದೇ ಹಾಸನ ಜಿಲ್ಲೆ ನೋಡಿದರೆ ನಾಲ್ಕಾರು ವರ್ಷಗಳಿಂದ 1-2 ಲಕ್ಷ ರೂಪಾಯಿಗಳನ್ನು ಕೂಡ ಅದಕ್ಕೆ ಒದಗಿಸದೆ ಇದ್ದಾರೆ. ನಾವಾದರೂ ಮಾಡಿರುವ ಅನ್ಯಾಯವೇನು ? ಭಿನ್ನಭಾವನೆಯಿಂದ ಮಾತನಾಡುತ್ತಾರೆಂದು ತಿಳಿಯಬಾರದು. ಏಕೆ ಹಾಸನ ಜಿಲ್ಲೆಗೆ ಅನ್ಯಾಯಮಾಡಿದೆ ಎಂಬುದನ್ನು ಯೋಚನೆಮಾಡಬೇಕು. ಇರಿಗೇಷನ್ ವಿಚಾರದಲ್ಲಿ ಕೂಡ ಹೀಗೆ ಆಗಿದೆ. ನಾನು ಬಜೆಟ್ಟಿನ ಎಲ್ಲಾ ಹೆಡ್ಡುಗಳನ್ನೂ ಪರಿಶೀಲನೆ ಮಾಡಿದ್ದೇನೆ. ಡಿವಿಜನ್‌ವೈಜ್ ಅಂಕಿ ಬೇಕಾದರೆ ಕೊಡುತ್ತೇನೆ. ಈ ಮನೋಭಾವ ಇರಬಾರದು. ತಮ್ಮನ್ನು ನಾನು ಕೇಳುವುದಿಷ್ಟೆ: ಈ ದಿವಸ ಲಂಪ್‌ಸಂ ಹಣ ಅನೇಕ ಕಡೆ ಒದಗಿಸಲಾಗಿದೆ, ಅದನ್ನು ಖರ್ಚುಮಾಡಲು ಚೀಫ್ ಎಂಜಿನಿಯರಿಗೆ ಅಧಿಕಾರವಿದೆ, ಅವರಿಗೆ ಬೇಕಾದ ಡಿವಿಜನ್ನಿಗೆ ಅದನ್ನು ಕೊಡಬಹುದು. 50 ಸಿವಿಲ್ ವರ್ಕ್ಸ್‌ನ ಸುಮಾರು 50 ಲಕ್ಷ ರೂಪಾಯಿಗಳನ್ನು ಚೀಫ್ ಎಂಜಿನಿಯರು ಖರ್ಚುಮಾಡುವುದಕ್ಕೆ ಅವಕಾಶವಿದೆ. ಅದರಲ್ಲಾದರೂ ನಮ್ಮ ಜಿಲ್ಲೆಗೆ ಹಣ ಒದಗಿಸಿ ನಮಗೆ ನ್ಯಾಯ ದೊರಕಿಸಿಕೊಡಬೇಕು. ಈ ಬಗ್ಗೆ ಸರಕಾರ ಸೂಕ್ತ ದೇಶ ಕೊಡಬೇಕೆಂದು ಹೇಳುತ್ತೇನೆ.

ಕಳೆದ ಶಾಸನಸಭೆಯಲ್ಲಿ ಕೆಲವು ವಿಷಯಗಳನ್ನು ಹೇಳಿದೆ. ಟೂಲ್ಸ್ ಅಂಡ್ ಪ್ಲಾಂಟಿಗೆ ಒಂದು ಕೋಟಿ ರೂಪಾಯಿಗಳ ಖರ್ಚಿದೆ, 50 ಸಿವಿಲ್ ವರ್ಕ್ಸ್‌ನಲ್ಲಿ ಒಂದು ಕೋಟಿ ರೂಪಾಯಿ ಇದೆ. ಒಂದು ಕೋಟಿ 30 ಲಕ್ಷ ಸಿಬ್ಬಂದಿಗೇ ಬೇಕು. ಈ ಎರಡು ವಿಷಯಗಳನ್ನು ಪ್ರಸ್ತಾಪಮಾಡಬೇಕಾಗಿದೆ. ಅನೇಕ ಡಿವಿಜನ್ನು ಸಬ್‌ಡಿವಿಜನ್ನು ಮತ್ತು ಸರ್ಕಲುಗಳೇನಿವೆ ಅವುಗಳಲ್ಲಿ ಒಂದಕ್ಕೊಂದಕ್ಕೆ ಹೊಂದಾಣಿಕೆಯಿಲ್ಲ, ರೀಆರ್ಗನೈಜ್ ಮಾಡಬೇಕು. ಹೊಸ ಪ್ರಾಜೆಕ್ಟುಗಳ ಇನ್‌ವೆಸ್ಟಿಗೇಷನ್ನಿಗೇ ಒಂದು ಡಿವಿಜನ್ನಿದೆ. 8 ಜನ ಚೀಫ್ ಎಂಜಿನಿಯರುಗಳಿದ್ದಾರೆ, ಅವರಿಗೆಷ್ಟು ಕೆಲಸವಿದೆ, ಎಷ್ಟು ಮಂದಿ ಇದ್ದರೆ ಸಾಕು ಎಂಬುದನ್ನು ನೋಡಬೇಕು. ಮುಕ್ಕಣ್ಣಪ್ಪನವರು ಈ ವಿಚಾರವನ್ನು ಹೇಳಿದ್ದಾರೆ. ಇಲಾಖೆಯನ್ನು ರೀ-ಆರ್ಗನೈಜ್ ಮಾಡುವುದಕ್ಕೆ ಇರುವ ಸಾಧ್ಯತೆಯನ್ನು ಪರೀಕ್ಷೆ ಮಾಡಬೇಕು. ಹೆಚ್ಚು ಅಧಿಕಾರಿಗಳಿದ್ದರೆ ತೆಗೆಯಿರಿ, ಇದರ ಬಗ್ಗೆ ಚಿಂತೆಮಾಡಬೇಕಾಗಿಲ್ಲ. ಕೆಲವು ಕಡೆ ಅಧಿಕಾರಿಗಳ ಸಂಖ್ಯೆ ಸಾಲದೆಂಬ ಅಭಿಪ್ರಾಯವಿದೆ, ಕೆಲವು ಕಡೆ ಹೆಚ್ಚು ಸಿಬ್ಬಂದಿ ಇದೆ. ಹೀಗೆ ಇಲಾಖೆಗಳಲ್ಲಿ ಸಮನ್ವಯವಿಲ್ಲದೆ ಸಹಕಾರವಿಲ್ಲದೆ ಕೆಲಸ ನಡೆಯುತ್ತಿದೆ. ಉದಾಹರಣೆಗೆ ಈ ದಿವಸ ಮೈನರ್ ಇರಿಗೇಷನ್ ಇನ್‌ವೆಸ್ಟಿಗೇಷನ್‌ಗೆ 4 ಡಿವಿಜನ್ ಇವೆ, 4 ಜಿಲ್ಲೆಗಳಿಗೊಬ್ಬ ಆಫೀಸರಿದ್ದಾರೆ, ಲಿಫ್ಟ್ ಇರಿಗೇಷನ್, ಮೈನರ್ ಇರಿಗೇಷನ್ ಇನ್‌ವೆಸ್ಟಿಗೇಷನ್ ಕೆಲಸಗಳನ್ನೆಲ್ಲಾ ನೋಡಿಕೊಳ್ಳಬೇಕು. ಒಬ್ಬ ಎಷ್ಟು ಮಾಡುವುದಕ್ಕೆ ಸಾಧ್ಯ ? ಇನ್ನೊಂದು ಕಡೆ ಕೆಲಸವೇ ಇಲ್ಲ. ಇದನ್ನು ನೋಡಿ ಸರಿಯಾಗಿ ರೀಆರ್ಗನೈಜ್ ಮಾಡಬೇಕು.

10-30 A.M.

ಇನ್ನು ಟೂಲ್ಸ್ ಅಂಡ್ ಪ್ಲಾಂಟ್‌ಗಾಗಿ ಸುಮಾರು ಒಂದು ಕೋಟಿ ರೂಪಾಯಿ ಖರ್ಚಾಗುತ್ತದೆ. ಸರ್ಪ್‌ರೈಜ್ ವಿಜಿಟ್ ಕೊಟ್ಟು ಪ್ರತಿಯೊಂದು ಡಿವಿಜನ್ನಿನಲ್ಲಿ ವರ್ಕ್‌ಷಾಪ್ ಯಾವ ಪರಿಸ್ಥಿತಿಯಲ್ಲಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಕೆಲವು ವರ್ಕ್‌ಷಾಪ್‌ನಲ್ಲಿ ಮೆಷಿನರಿ ಚಲಾವಣೆಯಲ್ಲಿಲ್ಲದೆ ಹಾಳಾಗುತ್ತಿವೆ. ಆದುದರಿಂದ ಈ ಬಗ್ಗೆ ಮುಂಜಾಗ್ರತೆ ವಹಿಸಬೇಕಾದುದು ಅಗತ್ಯ. ಸರಕಾರದ ಆಸ್ತಿಗೆ ಜವಾಬ್ದಾರರು ಯಾರು ಇಲ್ಲವೇ ? ಇದಕ್ಕೆ ಪೂರ್ಣ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಟ್ರಾನ್ಸ್‌ಫರ್ಸ್ ಮತ್ತು ಪ್ರೊಮೋಷನ್ಸ್. ಈ ವಿಚಾರದಲ್ಲಿ ಮಾನ್ಯ ಸ್ನೇಹಿತರಾದ ಶ್ರೀ ಅಂದಾನಯ್ಯನವರು ಒಂದು ಪ್ರಶ್ನೆ ಕಳಿಸಿದ್ದಾರೆ. ಈ ಟ್ರಾನ್ಸ್‌ಫರ್ ವಿಚಾರದಲ್ಲಿ ಜಾತೀಯ

ವಾದ ಮಾಡುವುದು ಬೇಡ. ಒಂದು ಖಚಿತವಾದ ಪಾಲಿಸಿ ಅನುಸರಿಸಬೇಕು. ಇನ್‌ವೆಸ್ಟಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ ಯಾವ ಅಧಿಕಾರಿಯು ಎಷ್ಟು ದಿವಸ ಕೆಲಸ ಮಾಡಬೇಕು ಇದನ್ನು ಗೊತ್ತು ಮಾಡುವುದು ಒಳ್ಳೆಯದು. ಇದರಲ್ಲಿ ತಾರತಮ್ಯ ಮಾಡುವುದು ಒಳ್ಳೆಯದಲ್ಲ. ತಾರತಮ್ಯ ಇದ್ದರೆ ಕೆಲಸ ಮಾಡುವ ಅಧಿಕಾರಿಗಳಿಗೆ ಫ್ರಸ್ಟ್ರೇಷನ್ ಬರುತ್ತದೆ. ಒಂದು ಸರಿಯಾದ ನೀತಿ ನಿಯಮ ಇಲ್ಲದೆ ಟ್ರಾನ್ಸ್‌ಫರ್ಸ್ ನಡೆಯುತ್ತಿದೆ. ಇನ್‌ವೆಸ್ಟಿಗೇಷನ್ ಕೆಲಸ ಮಾಡತಕ್ಕಂಥವರಿಗೆ ಬೇರೆ ಒಂದು ವಿಂಗ್ ಮಾಡಿ ಅವರಿಗೆ ಅಲೋಯನ್ಸ್ ಕೊಡುವ ವ್ಯವಸ್ಥೆ ಮಾಡಿ. ಇಷ್ಟು ವರ್ಷ ಮಿನಿಮಂ ಸರ್ವೀಸ್ ಮಾಡಬೇಕು ಎಂದು ಇರಬೇಕು. ಇದಲ್ಲದೆ 1964ನೇ ಇಸವಿ ಹಿಂದೆ ಇನ್‌ವೆಸ್ಟಿಗೇಷನ್ ಕೆಲಸ ಮಾಡಿದ ಅಧಿಕಾರಿಗಳಿಗೆ ಮಾತ್ರ ಇನ್‌ವೆಸ್ಟಿಗೇಷನ್ ಅಲೋಯನ್ಸ್ ಕೊಡುತ್ತಾ ಇದ್ದಾರೆ. ಆದರೆ 1964 ರಿಂದ ಈಚೆಗೆ ನೇಮಕವಾದ ಅಧಿಕಾರಿಗಳಿಗೆ ಅದು ಅನ್ವಯವಾಗುವುದಿಲ್ಲ. ಈ ರೀತಿ ಒಂದು ತಾರತಮ್ಯ ಇರಬಾರದು. ಆದುದರಿಂದ ಈ ವಿಚಾರದಲ್ಲಿ ಸರಕಾರ ಪುನಃ ಆದೇಶ ಕೊಡಬೇಕು. ಯಾರಿಗೂ ಅಸಮಧಾನವಾಗದ ಹಾಗೆ ಇದನ್ನು ಮಾಡುವುದಕ್ಕೆ ಯೋಚನೆ ಮಾಡಬೇಕು. ಒಟ್ಟಿನಲ್ಲಿ ಜಾಗ್ರತೆ ಎಲ್ಲರಿಗೂ ಇದು ಅನ್ವಯವಾಗುವ ರೀತಿಯಲ್ಲಿ ಆರ್ಡರ್ ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ.

ಇನ್ನು ಪ್ರೊಮೋಷನ್ಸ್ ವಿಚಾರದಲ್ಲಿ ಸೀನಿಯಾರಿಟಿ ಕಂ ಸೆಲೆಕ್ಷನ್ ಎಂಬ ನೀತಿ ತಾವು ಇಟ್ಟು ಕೊಂಡಿರುವುದನ್ನು ನಾನು ಒಪ್ಪುತ್ತೇನೆ. ಎಲ್ಲಿ ಭ್ರಷ್ಟಾಚಾರ ಇದೆ, ಎಲ್ಲಿ ಅನಾಸಕ್ತಿ ಇದೆ, ಎಲ್ಲಿ ಅನಾದರಣೆ ಇದೆ ಅದನ್ನು ನಿವಾರಿಸುವುದಕ್ಕೆ ಒಂದು ಸರಿಯಾದ ಅಸ್ತ್ರ ಇರಬೇಕು. ಇಂಥ ವಿಚಾರದಲ್ಲಿ ಯಾರನ್ನೂ ರಾಜಕೀಯ ಒತ್ತಡಕ್ಕೆ ಬಲಿ ಕೊಡಬಾರದು. ಇದರಲ್ಲಿ ಪಾರ್ಟಿ ವಿಚಾರ ಬರ ಕೂಡದು. ಈ ಇಲಾಖೆಯಲ್ಲಿ ಭ್ರಷ್ಟಾಚಾರ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಅದು ಕಡಿಮೆಯಾಗಿರುವುದು ಸಾಧಾರಣವಾಗಿ ಹೆಮ್ಮೆ ಪಡತಕ್ಕಂಥ ವಿಷಯ. ಆದರೆ ಇದರ ಬಗ್ಗೆ ನಾನು ಹೇಳುವುದು ಇಷ್ಟೇ. ದೊಡ್ಡ ಹಂತದಲ್ಲಿ ಇದು ಕಡಿಮೆ ಯಾಗಿಲ್ಲ. ಆದರೆ ಸಣ್ಣ ಸಣ್ಣ ಹಂತದಲ್ಲಿ ಸಾಕಷ್ಟು ಗಣನೀಯವಾದ ಪ್ರಮಾಣದಲ್ಲಿ ಭ್ರಷ್ಟಾಚಾರ ಕಡಿಮೆಯಾಗಿದೆ. ಒಬ್ಬ ದೊಡ್ಡ ಅಧಿಕಾರಿಯು ಭ್ರಷ್ಟಾಚಾರದ ಅಪಾದನೆಗೆ ಒಳಗಾದರೆ ಅಂಥವರನ್ನು ಉಳಿಸಿಕೊಳ್ಳುವುದಕ್ಕಾಗಿ ಹತ್ತು ಹದಿನೈದು ಜನ ಹಿಂದೆ ಬರುತ್ತಾರೆ. ಯಾವ ಒತ್ತಡಕ್ಕೂ ಮಣಿಯದೆ, ಅಪಾದನೆಗೊಳಗಾದವನು ಯಾವ ಜಾತಿಯವನೇ ಇರಲಿ ಶಿಕ್ಷೆ ಸರಿಯಾಗಿ ಕೊಡಬೇಕು. ಸರಕಾರಿ ಅಧಿಕಾರಿಯ ಟ್ರಾನ್ಸ್‌ಫರ್ ವಿಷಯವಾಗಿರಲಿ ಅಥವಾ ಅಪಾದನೆ ವಿಷಯವಾಗಿರಲಿ ಇದರಲ್ಲಿ ಶಾಸನ ಸಭಾ ಸದಸ್ಯರು ಹಿತಾಸಕ್ತಿ ತೋರಿಸಿ ಮಂತ್ರಿಗಳ ಕಡೆ ಹೋಗದೇ ಇದ್ದರೆ ಅದು ಶ್ಲಾಘನೀಯವಾದುದು. ಅನೇಕ ಅಧಿಕಾರಿಗಳು ಶಾಸನಸಭಾ ಸದಸ್ಯರಿಗೆ ಮಿಸ್-ರಿಪ್ರೆಜೆಂಟ್ ಮಾಡತಕ್ಕಂಥಾದ್ದು ಇದೆ. ಆದುದರಿಂದ ಇಂಥ ವಿಚಾರದಲ್ಲಿ ಸದಸ್ಯರು ಹೆಚ್ಚಿನ ಆಸಕ್ತಿ ವಹಿಸ ಬಾರದು. ಅದೇ ರೀತಿ ಮಂತ್ರಿಗಳು ಕೂಡ ಹೆಚ್ಚಿನ ಆಸಕ್ತಿ ವಹಿಸಬಾರದು. ಇಲ್ಲದಿದ್ದರೆ ಆಡಳಿತ ಶುದ್ಧೀಕರಣ ಮಾಡಲು ಸಾಧ್ಯವಿಲ್ಲ.

ಕೊನೆಯದಾಗಿ ಇನ್ನೊಂದು ವಿಚಾರ ಪ್ರಸ್ತಾಪ ಮಾಡಲು ಬಯಸುತ್ತೇನೆ. ಒಂದನೆ ದರ್ಜೆಯ ಕಂಟ್ರಾಕ್ಟರ್ಸ್, ಎರಡನೇ ದರ್ಜೆಯ ಕಂಟ್ರಾಕ್ಟರ್ಸ್ ಇವರ ಬಗ್ಗೆ ಸಾಕಷ್ಟು ಅಪಾದನೆಗಳು ಇವೆ. ಇವರ ಬಗ್ಗೆ ಇರತಕ್ಕ ರಿಜಿಸ್ಟ್ರೇಷನ್ ಸಿಸ್ಟಂನಿಂದ ಬಹಳ ಅನಾಹುತವಾಗುತ್ತಿದೆ. ಹಣ ಖರ್ಚಾಗುತ್ತಿದ್ದರೂ ಕೂಡ ಕೆಲಸದ ಕ್ವಾಲಿಟಿ ಸರಿಯಾಗಿ ಇರುವುದಿಲ್ಲ. ಕೇಂದ್ರದಲ್ಲಿರುವ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅವರು ಯಾವ ರೀತಿ ಕೆಲಸ ಮಾಡುತ್ತಾರೆ ಎಂಬುದಕ್ಕೆ 1964-65ರ ವರ್ಷದ ರಿಪೋರ್ಟಿನಲ್ಲಿ ಕೊಟ್ಟಿದೆ. ಮೈಸೂರು ದೇಶದಲ್ಲಿ ಕೂಡ ದೊಡ್ಡ ದೊಡ್ಡ ಪ್ರೊಜೆಕ್ಟ್‌ಗಳ ವಿಚಾರದಲ್ಲಿ ಸೂಕ್ತ ಕ್ರಮ ಅನುಸರಿಸಬೇಕು ಎಂದು ಹೇಳುತ್ತೇನೆ. ಸರಕಾರ ಇದಕ್ಕೆ ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಕಂಟ್ರಾಕ್ಟರ್ಸ್ ರಿಜಿಸ್ಟ್ರೇಷನ್ ವಿಚಾರದಲ್ಲಿ ಬಹಳ ಗೊಂದಲವಾಗಿದೆ. ಈ ರಿಜಿಸ್ಟ್ರೇಷನ್ ಬಗ್ಗೆ ಇರತಕ್ಕ ರೂಲ್ಸ್ ಸ್ವಲ್ಪ ರಿಲ್ಯಾಕ್ಸ್ ಮಾಡುವುದು ಅಗತ್ಯವಾಗಿದೆ. ಸಾಲ್‌ವೆನ್ಸಿ ಸರ್ಟಿಫಿಕೇಟ್ ಕೊಡುವುದರಲ್ಲಿ ಅಡಚಣೆ ಉಂಟಾಗುತ್ತದೆ. ಇದನ್ನು ಪರಿಹರಿಸುವುದಕ್ಕೆ ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಕೊನೆಯದಾಗಿ ನಮ್ಮ ಹಾಸನ ಜಿಲ್ಲೆಯ ಬಗ್ಗೆ ಒಂದು ಮಾತು ಹೇಳಲು ಇಷ್ಟಪಡುತ್ತೇನೆ ನಮ್ಮ ಹಾಸನ ಜಿಲ್ಲೆಗೆ ಬಹಳ ಅನ್ಯಾಯವಾಗಿದೆ. ರೋಡ್ಸ್ ಬ್ರಿಡ್ಜಸ್, ಬಿಲ್ಡಿಂಗ್ಸ್ ವಿಚಾರದಲ್ಲಿ ಪ್ರತಿಯೊಂದು ಹೆಡ್ಸ್ ವೇರಿಫೈ ಮಾಡಿ ನೋಡಿದರೆ ಅನ್ಯಾಯವಾದುದು ಕಂಡುಬರುತ್ತದೆ. ಆದುದರಿಂದ ಅಧಿಕಾರಿಗಳಿಗೆ ಸರಿಯಾದ ಸೂಚನೆ ಕೊಟ್ಟು ನಮ್ಮ ಹಾಸನ ಜಿಲ್ಲೆಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಬಜೆಟ್ ತೆಗೆದು ಹಾಸನ ಜಿಲ್ಲೆಗೆ ಯಾವ ಯಾವ ಹೆಡ್ಡಿನಲ್ಲಿ ಎಷ್ಟೆಷ್ಟು ಹಣ ಒದಗಿಸಿದೆ ದಯವಿಟ್ಟು ನೋಡಿ.

ಶ್ರೀ ಎಚ್. ಡಿ. ದೇವೇಗೌಡ.—ಇನ್ನು ರಸ್ತೆಯ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ನಮ್ಮ ಪಾಲಿಗೆ ಬರಬೇಕಾದ ಹಣ ಸರಿಯಾಗಿ ಬಂದಿದೆಯೇ ಎಂದು ಪ್ರಶ್ನೆ ಮಾಡುತ್ತೇನೆ. ಕೇಂದ್ರ ಸರ್ಕಾರದಿಂದ ನಮಗೆ ಬರಬೇಕಾದ ಹಣ ಸರಿಯಾಗಿ ಬರುವಂತೆ ಮಾಡಬೇಕು. ಅವರ ಒಂದು ಆಶ್ವಾಸನೆಯ ಮೇಲೆ ಮಂತ್ರಿಗಳು ಕೆಲಸ ಮಾಡತಕ್ಕಂಥಾದ್ದು ಸರಿಯಲ್ಲ. ಕೇಂದ್ರ ಸರಕಾರದಿಂದ ಬರಬೇಕಾದ ಹಣದ ಬಗ್ಗೆ ಒತ್ತಾಯ ಹಾಕಿ ತರಬೇಕು. ಕೇಂದ್ರ ಸರಕಾರ ತೆಗೆದುಕೊಳ್ಳುವ ಟ್ಯಾಕ್ಸ್ ಡ್ಯೂಟಿ ಈ ಬಾಬುಗಳಲ್ಲಿ ನಮ್ಮ ರಾಜ್ಯಕ್ಕೆ ಪಾಲು ಪೂರ್ಣ ಕೊಡಲಿಕ್ಕೆ ಬೇಕು. ಕೇಂದ್ರ ಸರಕಾರ ನಮಗೆ ಈ ಹಣ ದಾನ ಕೊಡುವುದಿಲ್ಲ. ನಮ್ಮ ಮೇಲೆ ಯಾವ ಆಬ್ಲಿಗೇಷನ್ ಇಲ್ಲ. ಈ ಒಂದು ಸ್ಕೀಮ್‌ಗಳ ಹೆಡ್‌ನಲ್ಲಿ, ನಮಗೆ ಕೇಂದ್ರದಿಂದ ಬರಬೇಕಾದ ಎಲ್ಲಾ ರೀತಿಯ ಹಣವನ್ನು ಅನ್ಯಾಯವಾಗದಂತೆ ತೆಗೆದುಕೊಳ್ಳಬೇಕು. ಆ ರೀತಿ ಬಂದ ಹಣವನ್ನು ಉಪಯೋಗಿಸುವ ಕಾಲದಲ್ಲಿ ಯಾವ ಯಾವ ಬ್ರಿಡ್ಜ್‌ಗಳನ್ನು ಕಟ್ಟಬೇಕೆಂದು, ಈ ಒಂದು ಸಪ್ಲಿಮೆಂಟರಿ ಡಿಮ್ಯಾಂಡ್ ತರುತ್ತೀರೋ ಆಗ ಇಲ್ಲಿ ಮಾನ್ಯ ಸದಸ್ಯರುಗಳು ಕೊಡುವ ಸಲಹೆಗಳನ್ನು ತೆಗೆದುಕೊಂಡು ಅದರಂತೆ ನಡೆಯಬೇಕು. ಯಾವ ಪ್ರದೇಶಗಳು ಹಿಂದೆ ಬಿದ್ದಿವೆಯೋ ಅಂಥ ಪ್ರದೇಶಗಳಲ್ಲಿ ಮೊದಲು ಕೆಲಸವನ್ನು ತೆಗೆದುಕೊಳ್ಳಬೇಕು. ನನ್ನ ತಾಲ್ಲೋಕನ್ನು ತೆಗೆದುಕೊಂಡರೆ ಒಂದು ಸೇತುವೆಯನ್ನು ಕಟ್ಟಬೇಕೆಂದು ಕೇಳಿಕೊಂಡಿದ್ದರೂ, 40 ವರ್ಷದಿಂದಲೂ ಇನ್ನೂ ತೆಗೆದುಕೊಂಡಿಲ್ಲ. ಈಗ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೀರಿ. ಆದರೆ ಈಗ ನೀವು ಮಾಡಿರುವ ಲಿಸ್ಟ್‌ನಲ್ಲಿ ಕೂಡ ಅದನ್ನು ಸೇರಿಸಿಲ್ಲ. ಯಾವ ಹೆಡ್‌ನಲ್ಲಿ ಯಾದರೂ ಕೇಂದ್ರದಿಂದ ಬಂದ ಹಣವಾದರೂ ಸರಿ ರಾಜ್ಯದ ಹಣವಾದರೂ ಸರಿ ಸೇತುವೆಗಳನ್ನು ಕಟ್ಟುವಾಗ ಎಲ್ಲಾ ಕಡೆಗೂ ಸರಿಯಾದ ನ್ಯಾಯ ದೊರಕಿಸಿಕೊಡಬೇಕು. ಈ ರೀತಿಯೆಲ್ಲಾ ಅಪಾದನೆಗಳು ಬರುವುದಕ್ಕೆ ಆಸ್ಪದ ಕೊಡಬಾರದು. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ಪಿ. ಡಬ್ಲ್ಯು. ಡಿ. ಎಲೆಕ್ಟ್ರಿಸಿಟಿ ಮತ್ತು ಪಬ್ಲಿಕ್ ಹೆಲ್ತ್ ಅಂಡ್ ಸ್ಯಾನಿಟೇಷನ್ ಡಿಮ್ಯಾಂಡ್‌ಗಳ ಮೇಲೆ ನಾಲ್ಕಾರು ಮಾತುಗಳನ್ನು ಆಡಲು ಮತ್ತು ಕೆಲವು ಸೂಚನೆಗಳನ್ನು ಕೊಡುವುದಕ್ಕೆ ನಿಂತಿದ್ದೇನೆ. ಮೊದಲನೆಯದಾಗಿ ಎಲೆಕ್ಟ್ರಿಸಿಟಿ ಬೋರ್ಡ್ ಬಗ್ಗೆ ಮಾತನಾಡುತ್ತೇನೆ. ಈ ಎಲೆಕ್ಟ್ರಿಸಿಟಿ ಬೋರ್ಡ್‌ಗೂ ನನಗೂ ಬಹಳ ಹತ್ತಿರದ ಸಂಬಂಧ. ನನಗೆ ಇದರ ವಿಚಾರದಲ್ಲಿ ಬಹಳ ಮಮತೆ ಇದೆ. ನಾನು ಇಷ್ಟು ದಪ್ಪವಾಗಿ, ಇಷ್ಟು ಉದ್ದವಾಗಿ ಬೆಳೆದಿರುವುದು, ಈ ಡಿಪಾರ್ಟಮೆಂಟ್ ನಲ್ಲಿಯೇ ಕೆಲಸಮಾಡಿ, ಸಂಪಾದನೆ ಮಾಡಿರುವುದೇ ಕಾರಣ. ಅಷ್ಟೊಂದು ನಿಕಟ ಸಂಬಂಧವಿದೆ. ಇಂತಹ ಒಂದು ಇಲಾಖೆಯಲ್ಲಿ ಆಗಬಾರದಂಥ ಅನ್ಯಾಯಗಳು, ಆಗುತ್ತಿರುವುದನ್ನು ನೋಡಿದರೆ ನನಗೆ ಸಂಕಟವಾಗುತ್ತದೆ. ಸಂಬಂಧಪಟ್ಟವರು ಸರಿಯಾಗಿ ತಿದ್ದಿಕೊಂಡು ಕೆಲಸ ಮಾಡಬೇಕು.

ಶ್ರೀ ಬಿ. ಚನ್ನಬೈರೇಗೌಡ.—ಅಷ್ಟೊಂದು ಮಮತೆ ಇರುವುದಕ್ಕೆ ಕಾರಣವೇನು, ನೀವೇನಾದರು ಅಲ್ಲಿ ಕೆಲಸ ಮಾಡಿದ್ದೀರಾ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಕೆಲಸ ಮಾಡಿಲ್ಲ. ನಮ್ಮ ತಂದೆಯವರು ಅಲ್ಲಿ ಕೆಲಸದಲ್ಲಿದ್ದರು. ಅವರು ಒಂದು ಕಾಸನ್ನು ಸಹ ತಿಂದಿಲ್ಲ.

ಈ ಕರೆಂಟ್ ವಿಚಾರ ಹೇಳಬೇಕೆಂದರೆ, ಪ್ರತಿ ದಿನವೂ ಬೆಳಿಗ್ಗೆ ಟ್ರಾನ್ಸ್‌ಫಾರಮ್‌ಗಳು ಸುಟ್ಟು ಹೋಗುತ್ತಿರುತ್ತವೆ. ಮನೆಗಳಿಗೆ ಸರಿಯಾಗಿ ಕರೆಂಟ್ ಸರಬರಾಯಾಗುತ್ತಿಲ್ಲವೆಂದು ಸೂಪರಿಂಟೆಂಡಿಂಗ್ ಇಂಜನೀಯರ್‌ಗಾಗಲೀ, ಎಗ್ಸಿಕ್ಯುಟಿವ್ ಇಂಜನೀಯರ್‌ಗಾಗಲೀ ಹೇಳಿದರೆ, ಅವರು ಒಂದೊಂದು ಸಾರಿ ಎರಡು ಕಂಬಗಳ ಮಧ್ಯೆಯಿರುವ ವೈರ್‌ಗಳು ಒಂದಕ್ಕೊಂದು ತಗಲಿದಾಗ ಈ ರೀತಿಯಾಗುತ್ತದೆ ಎಂದರು. ಅಲ್ಲದೆ ಕೆಲವು ಕಡೆ ಸರಿಯಾಗಿ ಕೆಲಸಮಾಡದೆ, ಸರಿಯಾಗಿ ಸೂಪರ್ ವಿಷನ್ ಇಲ್ಲದೆ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗುತ್ತವೆ ಎಂದು ಹೇಳಿದರ . ಪಂಪ್‌ಸೆಟ್ಟುಗಳಿಗೆ ಹೊಸದಾಗಿ ಕನೆಕ್ಷನ್ ಕೊಡುವಾಗ ಬಹಳವಾಗಿ ಚಿತ್ರ ವಿಚಿತ್ರ ಹಿಂಸೆ ಕೊಡುತ್ತಾರೆ. ಕೆಳಗಿನಿಂದ ಹಿಡಿದು ಮೇಲಿನವರೆಗೂ ಇವರಿಗೆ ಸರಿಯಾಗಿ ಕೊಡದ ಹೊರತು ಕೆಲಸವಾಗುವುದಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ತಾಲ್ಲೋಕಿನಲ್ಲಿ 10-12 ಕ್ರಷರ್‌ಗಳು ಕೆಲಸ ಮಾಡುತ್ತಿವೆ. ಹೊಸದಾಗಿ ಕೆಲಸಮಾಡುವ ಕ್ರಷರ್‌ಗಳಿಗೆ ಕರೆಂಟ್ ಸರಿಯಾಗಿ ಕೊಡುವುದಿಲ್ಲ, ಸಂಬಂಧಪಟ್ಟ ಇನ್ಸ್‌ಪೆಕ್ಟರ್‌ಗೆ ಹಣ ಕೊಟ್ಟರೆ ಅವನು ಅದನ್ನು ಟ್ರೆಜರಿಗೆ ಕಟ್ಟದೆ ತಾನೇ ತಿಂದು ಕರೆಂಟ್ ಕೊಡಿಸಲು ತೊಂದರೆ ಮಾಡುತ್ತಾನೆ. ಈ ವಿಚಾರವನ್ನು ಸೂಪರಿಂಟೆಂಡಿಂಗ್ ಇಂಜ

ನೀಯರ್‌ಗೆ ಹೇಳಿದರೆ ಅವರು ಆತನನ್ನು ಬೇರೆ ಕಡೆ ಟ್ರಾನ್ಸ್‌ಫರ್ ಮಾಡುವುದಕ್ಕಾಗುವುದಿಲ್ಲ, ಆತನು ಕೆಲಸಕ್ಕೆ ಬಂದು ಕೇವಲ ಒಂದು ವರ್ಷವಾಗಿದೆ ಎಂದು ಹೇಳುತ್ತಾರೆ. ತಪ್ಪು ಮಾಡಿದವರಿಗೆ ಸರಿಯಾಗಿ ಶಿಕ್ಷೆ ಮಾಡಬೇಡವೆ ಎಂದು ನಾನು ಕೇಳುತ್ತೇನೆ. ಬೆಳಿಗ್ಗೆ ಎದ್ದರೆ ಸರಿ, ಟ್ರಾನ್ಸ್‌ಫಾರ್ಮರ್ ಕೆಟ್ಟು ಮನೆಗಳಲ್ಲಿ ಲೈಟು ಇರುವುದಿಲ್ಲ. ರೇಡಿಯೋ ಹಾಕಿಕೊಳ್ಳುವುದಕ್ಕಾಗುವುದಿಲ್ಲ ಒಂದೊಂದು ಸಾರಿ ಟ್ರಾನ್ಸ್‌ಫಾರ್ಮರ್‌ನಿಂದ ಹೆಚ್ಚು ವೋಲ್ಟೇಜ್ ಪವರ್ ಆದಾಗ ಮನೆಯಲ್ಲಿರುವ ಬಲ್ಬುಗಳು ಬರ್ನ್ ಆಗುತ್ತವೆ. ನಮ್ಮಲ್ಲಿ ಹೆಚ್ಚು ಪವರ್ ಉತ್ಪತ್ತಿಯಾಗುತ್ತದೆ. ಮನೆಗಳಲ್ಲಿ ಅಡಿಗೆ ಮಾಡಲು, ಇಸ್ತ್ರಿಮಾಡಲು ಕಡಿಮೆ ದರದಲ್ಲಿ ಮನೆಗಳಿಗೆ ಪವರನ್ನು ಸಪ್ಲೈ ಮಾಡಬೇಕು. ಎಲ್ಲದಕ್ಕೂ ಒಂದೇ ದರವಿದ್ದರೆ ಬಹಳ ತೊಂದರೆಯಾಗುತ್ತದೆ. ಈ ಬಿಲ್‌ಗಳನ್ನು ಕಳಿಸುವ ವಿಚಾರ ತೆಗೆದುಕೊಂಡರೆ, ಕೆಲವರು ದುಡ್ಡು ಕಟ್ಟಿರುತ್ತಾರೆ, ರಶೀತಿ ಪಡೆದಿರುತ್ತಾರೆ. ಅಂಥಹವರಿಗೆ ತಿರುಗಿ ತಿರುಗಿ 3–4 ಬಿಲ್‌ಗಳನ್ನು ಬಡ್ಡಿ ಸೇರಿಸಿ ಕಳಿಸುತ್ತಾರೆ. ಬಹುಶಃ ಅಲ್ಲಿನ ಕ್ಯಾಷಿಯರ್ ಹಣವನ್ನು ತನ್ನ ಉಪಯೋಗಕ್ಕೆ ಬೆಳಸಿಕೊಂಡು ಈ ರೀತಿ ಮಾಡುತ್ತಾನೋ, ಏನೋ ಗೊತ್ತಾಗುವುದಿಲ್ಲ. ಲೈನ್‌ಮನ್ ಬಂದು ನೀವು ಹಣ ಕಟ್ಟಿಲ್ಲ, ಕರೆಂಟ್ ತೆಗೆದುಬಿಡುತ್ತೇನೆ ಎಂದು ಹೇಳುತ್ತಾನೆ. ಈ ರೀತಿಯಾಗಿ ಜನಗಳಿಗೆ ಅನ್ಯಾಯವಾಗದ ರೀತಿ ನೋಡಿ ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ಪವರ್ ಉತ್ಪತ್ತಿಯಾದರೂ ಸಹ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಬೇರೆ ದೇಶಗಳಿಗೆ ಕೊಡುತ್ತಿದ್ದೀರಿ, ಇದು ಎಲ್ಲರಿಗೂ ಗೊತ್ತಿದೆ. ಈಗ ಕಾಡುಗಳಲ್ಲಿರುವ ಮರಗಳನ್ನು ಕಡಿದು ಸೌದೆಗಾಗಿ ಉಪಯೋಗಿಸುತ್ತಿದ್ದಾರೆ, ಮರಗಳು ಕಡಮೆಯಾಗಿ ಸರಿಯಾಗಿ ಮಳೆ ಬರುತ್ತಿಲ್ಲ. ಆದ್ದರಿಂದ ಕಡಿಮೆ ದರದಲ್ಲಿ ಮನೆಗಳಿಗೆ ಪವರ್‌ನ್ನು ಕೊಟ್ಟರೆ ಸೌದೆಯ ಬಳಕೆ ಕಡಮೆಯಾಗುತ್ತದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮಾನ್ ಅಗ್ನಿಹೋತ್ರಿಯವರು ನೆನ್ನೆ ಹೇಳಿದರು, ಎಲಕ್ಟ್ರಿಕಲ್ ಬ್ಯಾಕ್‌ವರ್ಡ್ ಏರಿಯಾ, ಇರಿಗೇಷನ್ ಬ್ಯಾಕ್‌ವರ್ಡ್ ಏರಿಯಾ ಎಂದು ಮಾಡಿ, ಅಂಥ ಕಡೆ ಹೆಚ್ಚಿನ ಗಮನ ಕೊಡಬೇಕು ಎಂದು. ಅದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ದೊರೆ ಕಾಲದಲ್ಲಿ, ಅವರ ಆಡಳಿತದಲ್ಲಿ ಇದ್ದಾಗ ನಮಗೆ ಎಲ್ಲಾ ಅನುಕೂಲಗಳೂ ಇದ್ದವು, ಈಗ ಇಲ್ಲ ಎಂದು ಅವರು ಹೇಳಿ, ಬ್ಯಾಕ್‌ವರ್ಡ್ ಏರಿಯಾದ ಕಡೆ ಹೆಚ್ಚಿನ ನಿಗ ಕೊಡಿ ಎಂದು ಹೇಳಿದರು. ಈಗ ನನಗೂ ಒಂದು ಕಥೆ ನೆನಪು ಬರುತ್ತದೆ. ಏನೆಂದರೆ, ನಾವು ಪಟ್ಟೆ ಸೀರೆ ಉಟ್ಟುಕೊಳ್ಳುತ್ತೇವೆ, ನೀವು ಸಹ ಪಟ್ಟೆ ಸೀರೆ ಉಟ್ಟುಕೊಳ್ಳಿ ಎಂದು ಹೇಳಿದ ಹಾಗೆ ಆಗುತ್ತದೆ. ಶಿಂಶಾದಲ್ಲಿ ಪವರ್ ಉತ್ಪತ್ತಿಯಾಗಿದ್ದನ್ನು ಕೆ. ಜಿ. ಎಫ್‌ಗೆ ಕೊಟ್ಟರು. ಹಳ್ಳಿಯವರು ತಮಗೂ ಸಿಕ್ಕುತ್ತದೆ ಎಂದು ತಿಳಿದುಕೊಂಡು, ಬಾಯಿ ಬಿಟ್ಟುಕೊಂಡು ಕುಳಿತಿದ್ದರು, ಅವರಿಗೆ ಏನೂ ಸಿಕ್ಕಲಿಲ್ಲ. ಪವರ್ ಹೆಚ್ಚಿಗೆ ಬಂದ ಮೇಲೂ ಸಹ ಹಳ್ಳಿಯವರಿಗೆ ಪವರನ್ನು ಡ್ರಾ ಮಾಡಿಕೊಳ್ಳುವುದಕ್ಕೆ ಶಕ್ತಿಯಿಲ್ಲ. ಇಲಾಖೆಯವರನ್ನು ಹೋಗಿ ಕೇಳಿಕೊಂಡರೆ ಅವರು ವೈರ್ ಇಲ್ಲ, ಟ್ರಾನ್ಸ್‌ಫಾರ್‌ಮರ್ ಇಲ್ಲ, ಕಂಬ ಇಲ್ಲ, ಜನಗಳು ಇಲ್ಲ ಎಂದು ಕಾರಣಗಳನ್ನು ಹೇಳಿಕೊಂಡು ಬರುತ್ತಿದ್ದಾರೆ. ಈ ರೀತಿಯೆಲ್ಲಾ ಮಾಡಬಾರದು. ಎಲೆಕ್ಟ್ರಿಕಲ್ ಬ್ಯಾಕ್‌ವರ್ಡ್ ಏರಿಯಾ, ಇರಿಗೇಷನ್ ಬ್ಯಾಕ್‌ವರ್ಡ್ ಏರಿಯಾ ಎಂದು ಮಾಡಿ ಆ ಏರಿಯಾಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು, ಅವುಗಳು ಮುಂದುವರೆಯುವುದಕ್ಕೆ ಅವಕಾಶಮಾಡಿಕೊಡಬೇಕು. ನಂತರ ಬೇರೆಯವನ್ನು ತೆಗೆದುಕೊಳ್ಳಬೇಕು.

ಪಿ. ಡಬ್ಲ್ಯು. ಡಿ. ವರ್ಕ್ಸ್‌ಗೆ ಬಂದರೆ, ಊಟಿಯಲ್ಲಿ ಸೆಕೆಂಡ್ ಕ್ಲಾಸ್ ಟಿ. ಬಿ. ಇದೆ. ಅಲ್ಲಿಗೆ ಬೇಕಾದಷ್ಟು ಜನ ಆಫಿಸರ್ಸ್‌ಗಳು ಬರುತ್ತಾರೆ, ಟೂರಿಸ್ಟ್‌ಗಳು ಬರುತ್ತಾರೆ, ಆದ್ದರಿಂದ ಅದನ್ನು ಫಸ್ಟ್ ಗ್ರೇಡ್ ಟಿ. ಬಿ. ಮಾಡಿ ಜಾಸ್ತಿ ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೋಕ್ ಬಹಳ ಹಿಂದುಳಿದಿದೆ. ಬಹಳ ಬಡತನದಲ್ಲಿದೆ. ಅಲ್ಲಿರುವ ಪಂಚಾಯಿತಿಯವರಿಗೆ ರಸ್ತೆಗಳನ್ನು ನೋಡಿಕೊಳ್ಳುವುದಕ್ಕೆ, ರಿಪೇರಿ ಮಾಡಿಸುವುದಕ್ಕೆ ಶಕ್ತಿಯಿಲ್ಲ. ಆದ್ದರಿಂದ ಇವುಗಳ ರಿಪೇರಿ ಕೆಲಸವನ್ನು ಪಿ. ಡಬ್ಲ್ಯು. ಡಿ. ಯವರು ತೆಗೆದುಕೊಳ್ಳಬೇಕು ಮತ್ತು ಕೆಲವು ಲಿಂಕ್ ರೋಡುಗಳನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಒಂದು ಪಟ್ಟಿಯನ್ನು ಕೊಟ್ಟಿದ್ದೇನೆ. ದಯಮಾಡಿ ಪಿ. ಡಬ್ಲ್ಯು. ಡಿ. ಇಲಾಖೆಯ ಮಂತ್ರಿಗಳು ಆ ಕೆಲಸವನ್ನು ಜಾಗ್ರತೆ ತೆಗೆದುಕೊಳ್ಳುತ್ತಾರೆ ಎಂದು ನಂಬಿದ್ದೇನೆ. ಪಿ. ಡಬ್ಲ್ಯು. ಡಿ. ಸ್ಯಾನಿಟೇಷನ್ ವಿಚಾರ ತೆಗೆದುಕೊಂಡರೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನ ಒಂದು ಸ್ಮಶಾನಕ್ಕೆ ಹೋಗಿ ನೋಡಿ ಅಲ್ಲಿರುವ ಪರಿಸ್ಥಿತಿಯನ್ನು ತಿಳಿಸಿದ್ದಾರೆ. ಅದು ಪೇಪರ್‌ನಲ್ಲಿ ಬಂದಿದೆ. ಅದನ್ನು ಓದಿದರೆ ಬಹಳ ಭಯವಾಗುತ್ತದೆ. ಸ್ವಲ್ಪ ದಿವಸಗಳ ಆದಮೇಲೆ ನಾವು ಸತ್ತಾಗ ನಮ್ಮದೇ ತಲೆ ಒಂದು ಕಡೆ, ಕೈ ಕಾಲುಗಳು ಒಂದು ಕಡೆ ಬಿದ್ದಿದ್ದರೆ ನಮಗೆ ಹೇಗೆ ಆಗುತ್ತದೆ. ಆದ್ದರಿಂದ ಇನ್ನು ಮೇಲಾದರೂ ಕರೆಂಟ್ ಉಪಯೋಗಿಸಿ ಹೆಣಗಳನ್ನು ಸುಡುವುದು ಒಳ್ಳೆಯದು. ಇದರಿಂದ ಸೌದೆಯು ಕೂಡ ಉಳಿಯುತ್ತದೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಇನ್ನು ನ್ಯಾಷನಲ್ ರೋಡ್ ಅಂಡ್ ವಾಟರ್ ಸಪ್ಲೈ ಸ್ಕೀಂಗೆ ಬಂದರೆ ಎಷ್ಟೋ ಅರ್ಜಿಗಳನ್ನು ನಮ್ಮ ತಾಲ್ಲೂಕಿನಿಂದ ಹಾಕಿ ಕೊಂಡಿದ್ದಾರೆ. ಅದನ್ನು ಮಾಡಿಕೊಡುತ್ತೇವೆಂದು ಹೇಳಿ ಒಪ್ಪಿ ಕೊಂಡು ಹೋಗುತ್ತಾರೆ. ನಿಮ್ಮ ಕಾಸ್ಟ್‌ನ 10 ಪರ್ಸೆಂಟು ಕೊಟ್ಟು, ಮೈನ್‌ಟೆನೆನ್ಸ್ ಛಾರ್ಜು ಕೊಡುತ್ತೇವೆಂದು ಒಪ್ಪಿಕೊಂಡಿದ್ದರೂ ಕೂಡ ಕೆಲಸ ಮಾತ್ರ ಆಗಿಲ್ಲ. ಮಂತ್ರಿಗಳು ದಯಮಾಡಿ ನಮ್ಮ ಏರಿಯಾಕ್ಕೆ ಬಂದು ಇದನ್ನು ವಿಚಾರಿಸಬೇಕು. ನಮ್ಮದು ಬ್ಯಾಕ್‌ವರ್ಡ್ ಏರಿಯಾ ಆಗಿರು ವುದರಿಂದ ಸ್ಪೆಷಲ್ ಕನ್‌ಸಿಡರೇಷನ್ ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಚನ್ನಬೈರೇಗೌಡ.—ಇದುವರೆಗೆ ಪ್ರತಿಪಕ್ಷದ ಬಡ್ಜೆಟ್ ಸಮಯದಲ್ಲಿ, ಎಲೆಕ್ಟ್ರಿಸಿಟಿ ಬೋರ್ಡ್ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯ ಬೇಡಿಕೆಗಳು ನಮ್ಮ ಮುಂದೆ ಬಂದಾಗ ಈ ಇಲಾಖೆಗಳು ಬಡ್ಜೆಟ್ ಹಣವನ್ನು ವಿನಿಯೋಗಿಸುವ ರೀತಿ ನೀತಿಗಳ ಬಗ್ಗೆ ಇರತಕ್ಕ ಲೋಪದೋಷಗ ಳನ್ನು ಸರ್ಕಾರದ ಗಮನಕ್ಕೆ ಮತ್ತು ಮಂತ್ರಿಗಳ ಗಮನಕ್ಕೆ ತಂದರೂ ಸಹ, ಇವೊತ್ತಿನವರೆಗೆ ಕಿಂಚಿತ್ ಆದರೂ ಅದನ್ನು ಸರಿಪಡಿಸಲಿಲ್ಲ. ನಮ್ಮ ಕಾಂಗ್ರೆಸ್ ಸದಸ್ಯರು ಸಹ ಬಡ್ಜೆಟ್ ಡಿಮ್ಯಾಂಡನ್ನು ಸ್ವಾಗತಿಸುತ್ತಾ ಒಳಗೆ ಇರತಕ್ಕ ಅನ್ಯಾಯಗಳನ್ನೂ ಅಕ್ರಮಗಳನ್ನೂ ಲೋಪದೋಷಗಳನ್ನೂ ಹೇಳಿ ಕೊನೆಗೆ ಸ್ವಾಗತಿಸುತ್ತೇವೆಂದು ಹೇಳುತ್ತಾರೆ. ಅನೇಕ ವರ್ಷಗಳಿಂದ ನೋಡಿದರೂ ನಾವು ಹೇಳಿದ ಸಲಹೆಗಳನ್ನು ಕಾರ್ಯರೂಪಕ್ಕೆ ತರಲಿಲ್ಲ. ಶ್ರೀಮತಿ ನಾಗರತ್ನಮ್ಮನವರು ಹೇಳಿದ ಹಾಗೆ ಎಲೆಕ್ಟ್ರಿಸಿಟಿ ಬೋರ್ಡ್ ಮಾರವಾಡಿ ಅಂಗಡಿ ಇದ್ದಹಾಗೆ. ವಿದ್ಯುತ್ ಸರಬರಾಜು ಮಾಡುವುದು ಅವರ ಆಬ್ಲಿಗೇಟರಿ ಡ್ಯೂಟಿ ಅಲ್ಲ ಎಂದು ತಿಳಿದುಕೊಂಡಿದ್ದಾರೆ. ಹಣ ಕೊಟ್ಟರೆ ಅದಕ್ಕೆ ತಕ್ಕಂತೆ ಕರೆಂಟ್ ಒದಗಿಸುವುದು ಅವರ ಕರ್ತವ್ಯ. ಇದನ್ನು ಸರ್ಕಾರದವರು ಮತ್ತು ಬೋರ್ಡಿನವರ ಗಮನಕ್ಕೆ ಬರವಣಿಗೆಯ ಮೂಲಕ ತಂದರೂ ಅದನ್ನು ಇನ್ನೂ ಸರಿಪಡಿಸಿಲ್ಲ. ಶ್ರೀಮತಿ ನಾಗರತ್ನಮ್ಮ ರವರು ಹೇಳಿದ ಹಾಗೆ ವೈರ್‌ಗೆ ಎಷ್ಟು ಟೆನ್‌ಷನ್ ಇರಬೇಕು, ಹೇಗೆ ಇರಬೇಕು, ಎಂದು ನೋಡಿ ಶಾಸ್ತ್ರೀಯವಾಗಿ ಮಾಡದೆ ಮನಸ್ಸು ಬಂದ ಹಾಗೆ ಒಂದು ವೈರ್ ಇನ್ನೊಂದು ವೈರ್‌ಗೆ ಟಚ್ ಆಗುವಂತೆ ಮಾಡಿದರೆ, ಲೀಕೇಜ್ ಆಗಿ ಕೋಟ್ಯಾಂತರ ರೂಪಾಯಿ ನಷ್ಟವಾಗಿ ಹೋಗಿರುವ ಉದಾ ಹರಣೆಗಳು ಬೇಕಾದಷ್ಟು ಇವೆ. ಈ ಇಲಾಖೆಯಲ್ಲಿ ಸಾಕಾದಷ್ಟು ಸೂಪರ್‌ವಿಷನ್ ಇಲ್ಲ, ಸಾಕಾ ದಷ್ಟು ವಿತರಣೆ ಇಲ್ಲ. ತಾಲ್ಲೂಕು ಮಟ್ಟದಲ್ಲಿ ಇನ್‌ಸ್ಪೆಕ್ಟರ್ಸ್ ಮತ್ತು ಆಪರೇಟರ್ಸ್ ಇರುತ್ತಾರೆ. ಅವರು ಮನಬಂದಂತೆ ಕೆಲಸ ಮಾಡಿ ಅನೇಕ ರೈತರಿಗೆ ನಷ್ಟ ಆಗಿದೆ. ಪಂಪುಗಳು ಸುಟ್ಟು ಹೋಗಿವೆ ಟ್ರಾನ್ಸ್‌ಫಾರ್‌ಮರ್ಸ್ ಸುಟ್ಟುಹೋಗಿವೆ. ಹೊಸಕೋಟೆಯಲ್ಲಿ ದಿನಕ್ಕೆ 16 ಸಾರಿ ಸುಟ್ಟು ಹೋಗು ತ್ತದೆ. ವೋಲ್ಟೇಜ್ ಬಿದ್ದುಹೋಗುವುದನ್ನು ನೋಡಿಕೊಳ್ಳಲು ಒಬ್ಬ ಆಳನ್ನೇ ರೈತರು ಪಂಪು ನಡೆಸುವ ಕಡೆ ಇಡಬೇಕಾಗುತ್ತದೆ. ಇಲ್ಲದಿದ್ದರೆ ಎಷ್ಟೊ ಸುಟ್ಟು ಹೋಗುತ್ತದೆ. ಈ ಪರಿಸ್ಥಿತಿ ಯನ್ನು ಬೋರ್ಡಿನ ಗಮನಕ್ಕೆ ತಂದಿದ್ದೇನೆ. ಅದು ಅವರ ಆಬ್ಲಿಗೇಟರಿ ಡ್ಯೂಟಿ ಎಂದು ತಿಳಿದು ಕೊಂಡಿಲ್ಲ. ದುಡ್ಡಿಗೆ ಸರಿಯಾದ ಪದಾರ್ಥ ಕೊಡಬೇಕು. ವೋಲ್ಟೇಜ್ ಇಂಪ್ರೂವ್ ಮಾಡಬೇಕು. ಶರಾವತಿಯಿಂದ ಪವರ್ ಬರುತ್ತದೆ ಎಂದು 10 ವರ್ಷ ಕಾದಿದ್ದೆವು. ಶರಾವತಿ ಪವರ್ ಬಂತು. ವೋಲ್ಟೇಜು ಡ್ರಾಪ್ ಆಗುವುದು ಪಂಪು ಸುಟ್ಟುಹೋಗುವುದು ಜಾಸ್ತಿಯಾಗಿದೆ. ಕಾರಣ ಇಲಾಖೆ ಯವರ ಉದಾಸೀನತೆ ಮತ್ತು ಕೆಲಸದಲ್ಲಿ ಎಫಿಷಿಯನ್ಸಿ ಇಲ್ಲದೆ ಇದ್ದುದು. ಹೀಗೆ ಅನೇಕ ಕಾರಣಗಳು ಇವೆ. ಇದನ್ನು ಸ್ವಲ್ಪ ಉತ್ತಮಪಡಿಸಬೇಕು ಎಂದು ಎಲೆಕ್ಟ್ರಿಕ್ ಬೋರ್ಡ್‌ನವರಿಗೆ ಸಲಹೆ ಮಾಡಬೇಕು.

ಪಿ. ಡಬ್ಲ್ಯೂ. ಡಿ.ಗೆ ಬಂದರೆ, ಇಲ್ಲಿ ಆಗತಕ್ಕ ಅನ್ಯಾಯಗಳು ಎಲ್ಲೂ ಆಗುವುದಿಲ್ಲ. ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮ ದೇಶದಲ್ಲಿ ಎಲ್ಲರೂ ಬಡ್ಡಿಮಕ್ಕಳೇ ಎಂದು ಹೇಳಿದರು. ಇದಕ್ಕೆ ಕಾರಣ, ಪಿ.ಡಬ್ಲ್ಯು.ಡಿ. ಇಲಾಖೆ. ಪಿ.ಡಬ್ಲ್ಯು.ಡಿ. ವಿತರಣೆಯಿಂದ ಕೆಲಸ ಮಾಡುತ್ತಾ ಇಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಬ್ಬ ಅಸಿಸ್ಟೆಂಟ್ ಇಂಜಿನೀಯರ್ 6 ಜನ ಓವರ್‌ಸೀಯರ್ಸ್, ಇಬ್ಬರು ಜೂನಿಯರ್ ಇಂಜನೀಯರುಗಳು ಇದ್ದಾರೆ. ಒಂದು ಎಸ್ಟಿಮೇಟ್ ಇವೊತ್ತಿಗೆ ಜೂನಿಯರ್ ಇಂಜನೀಯರ್ ಆಗಲೀ ಅಸಿಸ್ಟೆಂಟ್ ಇಂಜನೀಯರ್ ಆಗಲೀ ತಾವೇ ತಾವಾಗಿ ಮಾಡುವುದಿಲ್ಲ. ತನ್ನ ಜ್ಯೂರಿಸ್‌ಡಿಕ್ಷನ್‌ನಲ್ಲಿ ಯಾವ ಎಸ್ಟಿಮೇಟ್ ಆಗಲೀ ಸಂಬಂಧಪಟ್ಟ ಕಾಂಟ್ರಾಕ್ಟರ್‌ಗೆ ಹೋಗ ಬೇಕು, ಹೆಗಲ ಮೇಲೆ ಕೂತುಕೊಳ್ಳಬೇಕು, ಸ್ಯಾಂಕ್ಷನ್ ಮಾಡಿಸಬೇಕು. ಎಸ್ಟಿಮೇಟ್ ಸ್ಯಾಂಕ್ಷನ್ ಮಾಡುವುದಕ್ಕೆ ದುಡ್ಡು ಕೊಡಬೇಕು. ಎಸ್ಟಿಮೇಟ್ ಮಾಡಿಸುವುದಕ್ಕೆ ದುಡ್ಡು ಕೊಡಬೇಕು. ಬಿಲ್ ಪಾಸ್ ಮಾಡುವಾಗಲೂ ದುಡ್ಡು ಕೊಡಬೇಕು.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಇದು ಯಾವ ದೇಶದಲ್ಲಿ ಇದೆ ?

ಶ್ರೀ ಬಿ. ಚನ್ನಬೈರೇಗೌಡ.—ಮೈಸೂರು ದೇಶದಲ್ಲಿ. ಕಾಂಗ್ರೆಸ್ ರಾಜ್ಯದಲ್ಲಿ ಇದೆ. ಮೊದಲು ಲಂಚ ಸುಮಾರಾಗಿ ಇತ್ತು. 8 ಆಣೆ ತೆಗೆದುಕೊಳ್ಳುತ್ತಿದ್ದರು. ಈಗ ಹದಿನೈದು ರೂಪಾಯಿ ಕೊಡಬೇಕು. ದುಡ್ಡಿನ ದಾಹ ಹೆಚ್ಚಾಗಿದೆ ಎಷ್ಟು ಮನೆ ಕಟ್ಟೋಣ, ಸಿಮೆಂಟ್ ಯಾವ ಕಂಟ್ರಾಕ್ಟರ್‌ನಿಂದ ತೆಗೆದುಕೊಳ್ಳೋಣ, ಎಷ್ಟು ಸಿಮೆಂಟ್ ಸಿಕ್ಕಿದರೂ ನನಗೆ ಬೇಕು ಎಂದು ಇಂಜನೀಯರ್ ಪ್ಲಾನು ಹಾಕುತ್ತಿರುತ್ತಾರೆ. ದುಡ್ಡು ಯಾವರೀತಿ ಹಂಚಿಕೊಳ್ಳೋಣ ಎಂದು ಇರುತ್ತಾರೆ. ಇದು ಒಂದು ಜಾಡ್ಯವಾಗಿದೆ. ಕೆಲವು ವರ್ಷಗಳ ಹಿಂದೆ ಕಂಟ್ರಾಕ್ಟ್ ಸ್ಟಾರ್ಟ್ ಮಾಡಿದವರು ಇವೊತ್ತು ಲಕ್ಷಾಧೀಶರಾಗಿರುತ್ತಾರೆ, ಚೀಫ್ ಇಂಜನೀಯರ್ ಮತ್ತು ಪಿ. ಡಬ್ಲ್ಯು. ಡಿ. ಮಿನಿಸ್ಟರ್‌ಗಿಂತ ಮೇಲಿನ ಮಟ್ಟಕ್ಕೆ ಹೋಗಿದ್ದಾರೆ. ಪಿ.ಡಬ್ಲ್ಯು.ಡಿ. ನಲ್ಲಿ ಟ್ರಾನ್ಸ್‌ಫರ್ ಆಗಬೇಕಾದರೆ, ಟ್ರಾನ್ಸ್‌ಫರ್ ರದ್ದು ಆಗಬೇಕಾದರೆ ಪ್ರಮೋಷನ್ ಆಗಬೇಕಾದರೆ ಕಂಟ್ರಾಕ್ಟರ್ ಹೇಳಿದ ಹಾಗೆ ಆಗುತ್ತಾ ಇದೆಯೇ ಹೊರತು ಮಿನಿಸ್ಟರ್, ಚೀಫ್ ಇಂಜನೀಯರ್ ಹೇಳಿದ ಹಾಗೆ ಆಗುವುದಿಲ್ಲ. ಕಂಟ್ರಾಕ್ಟರ್ ಹೇಳಿದ ಜಾಗದಲ್ಲಿ ಇಂಜನೀಯರ್‌ಗಳನ್ನು ಹಾಕುತ್ತಾರೆ. ಕಂಟ್ರಾಕ್ಟರ್ ಹೇಳಿದ ಕೂಡಲೇ ಅರ್ಧ ಗಂಟೆಗೆ ಟ್ರಾನ್ಸ್‌ಫರ್ ಆಗುತ್ತದೆ. ದಾವಣಗೆರೆಗೆ ಹಾಕಬೇಕು ಎಂದರೆ ದಾವಣಗೆರೆಗೆ ಪೋಸ್ಟ್ ಮಾಡುತ್ತಾರೆ. ಇನ್‌ವೆಸ್ಟಿಗೇಷನ್ ಡಿವಿಜನ್ನಿಗೆ ಹಾಕಬೇಕು ಎಂದರೆ ಅಲ್ಲಿಗೆ ಹಾಕುತ್ತಾರೆ. ಅವರು ಕಂಟ್ರಾಕ್ಟರ್ ಕೈಗೊಂಬೆಗಳಾಗಿದ್ದಾರೆ. ಪಿ.ಡಬ್ಲ್ಯು.ಡಿ ಮಿನಿಸ್ಟರ್, ಚೀಫ್ ಇಂಜನಿಯರಿಂದ ಇಲಾಖೆಯ ಜೀಪ್ ತರಿಸಿಕೊಳ್ಳುತ್ತಾರೆ. ಇಲಾಖೆಯ ಪೆಟ್ರೋಲ್‌ನಿಂದ, ಇಲಾಖೆಯ ಜೀಪನ್ನು ಉಪಯೋಗಿಸಿಕೊಂಡು ಬಂದು ಮಿತ್ರರು 150-120 ಮೈಲಿ ಓಡಾಡುತ್ತಾರೆ. ಸುಳ್ಳು ಲೆಕ್ಕ ಮೇನ್‌ಟೇನ್ ಮಾಡಿ ಸುಳ್ಳು ಲಾಗ್ ಬುಕ್ಸ್ ಮೇನ್‌ಟೈನ್ ಮಾಡುವ ಅಭ್ಯಾಸವನ್ನು ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಕಲಿಸಿಕೊಟ್ಟಿದ್ದಾರೆ. ಚೀಫ್‌ಇಂಜನೀಯರ್ ವ್ಯಾನು ಮತ್ತು ಕಾರನ್ನೂ ಪಿ. ಡಬ್ಲ್ಯು. ಡಿ. ಮಿನಿಸ್ಟರ್ ನೆಂಟರಿಷ್ಟರು ಮತ್ತು ಬಂಧುಗಳು ಉಪಯೋಗಿಸಿದುದನ್ನು ನಾನು ನೋಡಿದ್ದೇನೆ. ಇದು ಯಾವ ಲೆಕ್ಕದಲ್ಲಿ ಬೀಳುತ್ತದೆ ? ಸ್ವಂತ ಲಾಗ್ ಮೇನ್‌ಟೆನ್ ಮಾಡುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಏನು ಮಾಡುತ್ತಿದ್ದಾರೆ ? ಯಾವ ಕಾರ್‌ನಲ್ಲಿ ನನ್ನ ಹೆಂಡರು ಮಕ್ಕಳು ಬಂಧುಗಳು, ಇಷ್ಟರು ಕುಳಿತುಕೊಂಡು ಹೋಗಿದ್ದಾರೆ ಎನ್ನುವುದಕ್ಕೆ ಸ್ವಲ್ಪ ವಿವರಗಳನ್ನು ಹೇಳಬೇಕಾಗುತ್ತದೆ. ಆ ಸ್ಥಾನದಲ್ಲಿ ಕುಳಿತು ಏನು ಮಾತನಾಡಿದರೂ ನಡೆಯುತ್ತದೆ ಎಂದು ಮಾತನಾಡಿದರೆ ಕಷ್ಟ. ನೀವು ಒಂದು ಅಪಾದನೆ ಮಾಡುತ್ತಾ ಇದ್ದೀರಿ. ಸರ್ಕಾರದವರು ಕಾರು ಕೊಟ್ಟಿದ್ದಾರೆ. ನಾವು ಎಲ್ಲಿಗೆ ಬೇಕಾದರೂ ತಿರುಗಬಹುದು. ನನ್ನ ಹೆಂಡರು ಮಕ್ಕಳು ಎಲ್ಲಿಗೆ ಹೋಗುವುದಕ್ಕೂ ಅಡ್ಡಿ ಇಲ್ಲವೆ. ನೀವು ಹೇಳುವುದು ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್ ವ್ಯಾನ್ ಮತ್ತು ಕಾರ್ಸ್ ನಾವು ಉಪಯೋಗ ಮಾಡುತ್ತೇವೆಂದು. ಅದನ್ನು ಸವಿಸ್ತಾರವಾಗಿ ಹೇಳಿ.

ಶ್ರೀ ಬಿ. ಚನ್ನಬೈರೇಗೌಡ.—ಎಷ್ಟೋ ಸಾರಿ ಅವರು ಮಿನಿಸ್ಟರ್ ಆದ ಲಾಗಾಯಿತು ಚೀಫ್ ಇಂಜನಿಯರ್‌ರವರ ವ್ಯಾನು ಉಪಯೋಗಿಸಿದ್ದಾರೆ. ಡಿಪಾರ್ಟ್‌ಮೆಂಟಿನ ವ್ಯಾನ್ ಉಪಯೋಗಿಸಿದ್ದಾರೆ. ಆದುದರಿಂದ ತಮ್ಮ ಆತ್ಮಕ್ಕೆ ಪ್ರಶ್ನೆ ಹಾಕಿಕೊಳ್ಳಲಿ. ಅದು ಸರಿಯಲ್ಲ. ತಪ್ಪು ಮುಂದಕ್ಕೆ ತಿದ್ದಿಕೊಳ್ಳಲಿ.

ಆಮೇಲೆ ಪಿ.ಡಬ್ಲ್ಯುಡಿ. ಇಲಾಖೆಯಲ್ಲಿ ಇನ್ನೊಂದು ತಪ್ಪು ಇದೆ. ಗುಲ್ಬರ್ಗ ಡಿವಿಜನ್‌ಗೆ ಬಡ್ಜೆಟ್ಟು ತೋರಿಸಿದ್ದು ನೋಡಿದರೆ ಒಂದು ಕೋಟಿ 80 ಲಕ್ಷ ರೂಪಾಯಿನಲ್ಲಿ ಗುಲ್ಬರ್ಗ ಒಂದಕ್ಕೇ 85 ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದಾರೆ. ಇನ್ನು ಉಳಿದ ಒಂದು ಕೋಟಿ ರೂಪಾಯಿಗಳನ್ನು ಮೈಸೂರು ರಾಜ್ಯದ ಇತರ ಎಲ್ಲಾ ಜಿಲ್ಲೆಗಳಿಗೂ ಒದಗಿಸಿದ್ದಾರೆ. ಪಕ್ಷಪಾತದಿಂದ ಮನಬಂದಂತೆ ಒಂದೇ ಸರ್ಕಲ್‌ಗೆ ಇಷ್ಟು ಹಣ ಹಂಚಿಕೊಳ್ಳುವುದರಲ್ಲಿ ಏನು ಅರ್ಥ ? ಜಿಲ್ಲಾವೈಸ್, ಸರ್ಕಲ್ ವೈಸ್ ಸಮವಾಗಿ ಏತಕ್ಕೆ ಭಾಗ ಮಾಡಿಲ್ಲ ? ನಮ್ಮಲ್ಲಿ ರಸ್ತೆ ಇಲ್ಲವೇ ? ಗುಲ್ಬರ್ಗದಲ್ಲಿ ಮಾತ್ರ ರಸ್ತೆ ಇರುವುದೇ ? ಯಾವ ಮಂತ್ರಿಗಳು ಯಾವ ಡಿವಿಷನ್‌ನಿಂದ ಬಂದಿದ್ದಾರೋ ಯಾವ ಡಿಸ್ಟ್ರಿಕ್ಟ್‌ನಿಂದ ಬಂದಿದ್ದಾರೋ ಯಾವ ಕಾನ್‌ಸ್ಟಿಟ್ಯೂಯೆನ್ಸಿಯಿಂದ ಬಂದಿದ್ದಾರೋ ಆ ಪ್ರದೇಶವನ್ನು ಮಾತ್ರ ಅಭಿವೃದ್ಧಿ ಮಾಡಿಕೊಳ್ಳುವುದೆಂದರೆ, ಅದು ಶುದ್ಧ ತಪ್ಪು. ಹಾಗೆ ಮಾಡಬಾರದು. ಸ್ಟೇಟ್‌ವೈಸ್ ಹಂಚಬೇಕು. ದೇಶದ ಮಂತ್ರಿಯಾಗಿ ಕೆಲಸ ಮಾಡಬೇಕಾಗಿದೆಯೇ ಹೊರತು ಜಿಲ್ಲೆಯನ್ನೂ ಕಾನ್‌ಸ್ಟಿಟ್ಯೂಯೆನ್ಸಿಯನ್ನೂ ಗಮನದಲ್ಲಿಟ್ಟುಕೊಂಡು ಹಂಚಿಕೆ ಮಾಡಬಾರದು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಶ್ರೀ ಬಿ. ಚನ್ನಭೈರೇಗೌಡ)

11 A.M.

ಆ ಮೇಲೆ 1974 ನೇ ಇಸವಿಗೆ ನಮ್ಮ ಕಾವೇರಿ ನದಿ ನೀರಿನ ಒಪ್ಪಂದವು ಮುಗಿದು ಹೋಗುತ್ತದೆ. ನಾವು ಇವತ್ತಿನ ದಿವಸ ಅದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂಬುದನ್ನು ಯೋಚನೆ ಮಾಡಬೇಕು. ಮದ್ರಾಸ್ ಸರ್ಕಾರದೊಡನೆ ಮಾಡಿಕೊಂಡ ಒಪ್ಪಂದ ಮುಗಿಯುವ ಮೊದಲೇ ನಾವು ನಮ್ಮ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಒಂದು ಏರ್ಪಾಡನ್ನು ಮಾಡಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಆ ಮೇಲೆ, ಈ ಹೌಸಿಂಗ್ ಬೋರ್ಡಿನ ಕಾರ್ಯಕ್ರಮ ಏನಿದೆ, ಅದಕ್ಕೆ ಇನ್ನೂ ಹೆಚ್ಚಿನ ಹಣ ಮಂಜೂರು ಮಾಡಬೇಕು. ಈ ಬಗ್ಗೆ ಕೆಲವು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲೂ ಸಹ ಈ ಹೌಸಿಂಗ್ ಬೋರ್ಡಿನವರು ಹೆಚ್ಚಿನ ಕೆಲಸವನ್ನು ಮಾಡಿ ಸಣ್ಣ ಸಣ್ಣ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ಎರಡರಿಂದ ನಾಲ್ಕು ಸಾವಿರದ ಮನೆಗಳನ್ನು ಕಟ್ಟಿಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕರ್ಮಾಲ).—ಮಾನ್ಯ ಸಭಾಪತಿಗಳೇ, ಈ ಪಿ.ಡಬ್ಲ್ಯು.ಡಿ. ಇಲಾಖೆಯ ವಿಚಾರವಾಗಿ ಒಂದೆರಡು ಮಾತುಗಳನ್ನು ಆಡಲಚ್ಛಿಸುತ್ತೇನೆ. ಈ ನಮ್ಮ ಮಾನ್ಯ ಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನುಳಿದವರು ನಮ್ಮ ರಾಯಚೂರು ಜಿಲ್ಲೆ ಹಾಗೂ ಇನ್ನುಳಿದ ಜಿಲ್ಲೆಗಳಲ್ಲಿ ಮಂತ್ರಿಗಳ ಜಿಲ್ಲೆಯಾದುದರಿಂದ ಎಷ್ಟೋ ಕೆಲಸಗಳು ನಡೆದಿವೆ. ಅಲ್ಲಿ ಬಹಳ ಅಭಿವೃದ್ಧಿಯಾಗಿದೆ ಇತ್ಯಾದಿ ಹೇಳಿದ್ದಾರೆ. ಆದರೆ ನಮ್ಮ ಜಿಲ್ಲೆಗಳ ಮಟ್ಟಿಗೆ ಹೇಳುವುದಾದರೆ, ಅದು ಬಹಳ ಹಿಂದುಳಿದ ಜಿಲ್ಲೆ. ನಮ್ಮ ಕಷ್ಟ ನಮಗೆ ಗೊತ್ತು, ಇನ್ನುಳಿದವರಿಗೆ ಹೇಗೆ ಗೊತ್ತಾಗುತ್ತದೆ? ನಮ್ಮ ಈ ಗುಲ್ಬರ್ಗ, ರಾಯಚೂರು, ಬಿದರೆ ಜಿಲ್ಲೆಗಳು ಬಹಳ ಹಿಂದುಳಿದಿವೆ. ಅಲ್ಲಿ ಕೆಲವು ರೋಡ್‌ಗಳನ್ನು ನೋಡಿದರೆ ಬಹಳ ಬೇಸರವಾಗುತ್ತದೆ. ಅದನ್ನೆಲ್ಲಾ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕು. ಏಕೆಂದರೆ, ನಮ್ಮ ರೈತರಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದಕ್ಕೆ, ಸಾಮಾನುಗಳನ್ನು ಸಾಗಿಸುವುದಕ್ಕೆ ಸರಿಯಾದ ರಸ್ತೆಗಳಿದ್ದರೆ ಅನುಕೂಲವಾಗುತ್ತದೆ. ಇನ್ನು ಅಲ್ಲಿ ಬೇಕಾದ ಕೆರೆ ಬಾವಿಗಳು ಏನೂ ಇಲ್ಲ. ಅದಕ್ಕೆಲ್ಲಾ ಸರಿಯಾದ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಒಂದು ಅರಜಿಂಗ್ ರೋಡ್ ಮತ್ತು ಕುಲ್ದರೋಡ್ ಎಂದು ಇದೆ. ಅದು ಬಹಳ ಕೆಟ್ಟುಹೋಗಿದೆ; ಮಳೆ ಬಂದರೆ ಅದರಲ್ಲಿ ಹೋಗಲಿಕ್ಕಾಗುವುದಿಲ್ಲ; ಇದನ್ನು ತುರ್ತಾಗಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವೆಂಕಟಾಪುರ ರೋಡ್ ಎಂದು ಇದೆ. ಅದನ್ನು ತಾಲ್ಲೂಕ್ ಬೋರ್ಡಿಗೆ ತೆಗೆದುಕೊಳ್ಳಲು ಶಕ್ತಿ ಇಲ್ಲ. ಇದನ್ನು ಪಿ.ಡಬ್ಲ್ಯು.ಡಿ.ಯವರು ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮತ್ತು ನಮ್ಮ ರಾಯಚೂರು ಜಿಲ್ಲೆಯಲ್ಲಿ ಒಂದು ದೊಡ್ಡ ಹಳ್ಳ ಇದೆ. ಅದಕ್ಕೆ ಅಣೆಕಟ್ಟು ಕಟ್ಟಬೇಕೆಂದು ಪ್ರಯತ್ನ ಮಾಡಿದ್ದಾರೆ. ಆದರೆ ಇದುವರೆಗೂ ಏನೂ ಆಗಲಿಲ್ಲ. ಅದನ್ನು ಸಮೇತ ಜಾಗ್ರತೆಯಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ರಾಯಚೂರು ಬಹಳ ಹಿಂದುಳಿದ ಭಾಗ. ಅಲ್ಲಿ ಬಾವಿಗಳನ್ನು, ಸಣ್ಣ ಸಣ್ಣ ಕೆರೆಗಳನ್ನಾದರೂ ಮಾಡಿಕೊಟ್ಟರೆ ಸ್ವಲ್ಪ ಉತ್ತಮವಾಗುತ್ತದೆ ಎಂದು ನಾನು ಹೇಳುತ್ತೇನೆ. ಹಾಗೇ ಇನ್ನೊಂದು ಸಿಂಗನೇರಿ ರೋಡ್ ಇದೆ, ಅದು ಕೂಡ ಬಹಳ ಹೀನಾವಸ್ಥೆಯಲ್ಲಿದೆ. ಅದನ್ನೂ ಕೂಡ ಗಮನಿಸಿ, ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಸುಮ್ಮನೆ ನಮ್ಮ ಜಿಲ್ಲೆಗೆ ಹಾಗೂ ಇನ್ನುಳಿದ ಎರಡು ಜಿಲ್ಲೆಗಳಿಗೆ ಮಾನ್ಯ ಮಂತ್ರಿಗಳ ಜಿಲ್ಲೆಯೆಂದು ಬಹಳ ಅನುಕೂಲ ಮಾಡುತ್ತಾರೆಂದು ಹೇಳುವುದು ಸರಿಯಲ್ಲ. ಇಷ್ಟು ಮಾತುಗಳನ್ನು ಹೇಳಿ, ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕಂತಹ ಪಬ್ಲಿಕ್ ವರ್ಕ್ಸ್ ಮತ್ತು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ಗಳ ಬೇಡಿಕೆಗಳ ಮೇಲೆ ಮಾತನಾಡಲಚ್ಛಿಸುತ್ತೇನೆ. ಇವತ್ತು ಇಲ್ಲಿರತಕ್ಕಂತಹ ಬೇಡಿಕೆಗಳಾದ ಬಿಲ್ಡಿಂಗ್ಸ್, ರೋಡ್ಸ್, ಬ್ರಿಡ್ಜಸ್, ಎಲೆಕ್ಟ್ರಿಸಿಟಿ ಪ್ರೊಡಕ್ಷನ್, ಎಲೆಕ್ಟ್ರಿಸಿಟಿ ಡಿಸ್ಟ್ರಿಬ್ಯೂಶನ್ ಮತ್ತು ಯುಟಿಲೈಜೇಶನ್ ಆಫ್ ಪವರ್, ಇದರ ಮೇಲೆ ಮಾತನಾಡಬೇಕೆಂದು ಇಚ್ಛೆಪಡುತ್ತೇನೆ.

ರಾಜ್ಯಕ್ಕೆ ಬಂದಿರತಕ್ಕ ಕಷ್ಟ ಕಾಲದಲ್ಲಿ ಸರ್ಕಾರದವರು ಬಿಲ್ಡಿಂಗ್ಸ್ ಮೇಲೆ ಹಣ ಖರ್ಚು ಮಾಡುವುದಿಲ್ಲ, ರೋಡ್ಸ್‌ಗಳಿಗೆ ಹಣ ಖರ್ಚು ಮಾಡುವುದಿಲ್ಲ, ಇತ್ಯಾದಿಗಳನ್ನು ನಮಗೆ ಪತ್ರಗಳ ಮುಖಾಂತರ, ಸಚಿವರ ಮಂಡಲಿಯಲ್ಲಿ ತೆಗೆದುಕೊಂಡಂಥ ತೀರ್ಮಾನವನ್ನು ತಿಳಿಸಿದರು. ಆದರೆ ಈ ಬಡ್ಜೆಟ್ಟಿನಲ್ಲಿ ಕೊಟ್ಟಿರತಕ್ಕಂತಹ ಅಂಕಿ ಅಂಶಗಳನ್ನು ಪುಟ 249 ರಿಂದ 297 ರವರೆಗೆ ತೆಗೆದು ನೋಡಿದರೆ ಅವರು ಹೇಳಿರತಕ್ಕ ಮಾತಿಗೆ ವಿರುದ್ಧವಾಗಿ ನಡೆಯುತ್ತಾರೆ ಎಂದು ಹೇಳದರೆ ಅದು ತಪ್ಪಾಗಲಾರದು. ಇವತ್ತು ಶ್ರೀಮಾನ್ ಚೆನ್ನಬೈರೇಗೌಡರು ಹೇಳಿದಂತೆ, ರೋಡಿಗೋಸ್ಕರ ಹಣ ಜಾಸ್ತಿ ಖರ್ಚು ಮಾಡುತ್ತಾರೆ ಇದಕ್ಕೆ ಬದಲು ಜಾಸ್ತಿ ಹಣವನ್ನು ಮೈನರ್ ಇರಿಗೇಷನ್ನಿಗೋಸ್ಕರ ಖರ್ಚು ಮಾಡಬೇಕು. ಈಗ ಬಿಲ್ಡಿಂಗ್ಸ್ ಮೇಲೆ, ಬ್ರಿಡ್ಜಸ್‌ಗಳ ಮೇಲೆ, ರೋಡ್ಸ್‌ಗಳಿಗೆ ಖರ್ಚು ಮಾಡುವಂತದ್ದನ್ನು ಸರ್ಕಾರದವರು ನಿಲ್ಲಿಸಬೇಕು. ತಾವು ಏನು ಹಣ ಇಲ್ಲ ಎಂದು '' ಗೋ ಸ್ಲೋ '' ಪಾಲಿಸಿ ಅಡಾಪ್ಟ್ ಮಾಡಿದ್ದೀರಿ, ಅದೇ ರೀತಿ ಮಾಡಬೇಕು. ಇಲ್ಲದೆ ಹೋದರೆ, ನೀವು ಮೈನರ್ ಇರಿಗೇಶನ್ನಿಗೆ ಇಂದು ಆದ್ಯತೆಯನ್ನು ಕೊಟ್ಟು ಹಣವನ್ನು ಒದಗಿಸಬೇಕು. ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕೆಂದು ನಾನಾದರೂ ಹೇಳಬಯಸುತ್ತೇನೆ. ಇವತ್ತಿನ ದಿವಸ ರಾಯಚೂರು ಗುಲ್ಬರ್ಗಗಳಲ್ಲಿ ನಾನಾ ಖರ್ಚುಗಳನ್ನು ಮಾಡುವಾಗ ಅದು ಎಲ್ಲರಿಗೂ ಅರ್ಥವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ಈ ಶಾಖ ತಾಗಿದಾಗ, ಹೇಳಿದರು, ಆ ಮಾತುಗಳನ್ನು ಮತ್ತೊಮ್ಮೆ ಆಡಬೇಡಿ ಎಂದು. ನಾವು ಎಲ್ಲಾ ಒಂದು ಸ್ನೇಹಭಾವದಿಂದ ಇರಬೇಕು. ಎಂದು ಶ್ರೀ ರಾಮಕೃಷ್ಣಹೆಗಡೆಯವರು ಹೇಳುತ್ತಾರೆ. ಆದರೆ ಇವರು ಕೊಡುವ ಅಂಕಿ ಅಂಶ, ಮಾಡುವ ರೀತಿ ನೀತಿಗಳನ್ನು ನೋಡಿದರೆ ಇವರ ಸ್ನೇಹ ಮಾಡುವುದಕ್ಕೆ ನಮಗೆ ಏಕೋ ಮನಸ್ಸು ದೂರ ದೂರ ತೆಗೆದುಕೊಂಡು ಹೋಗುತ್ತದೆ. ಇದನ್ನು ಅವರು ಯೋಚನೆ ಮಾಡಬೇಕು. ತಾವು ಡಿಸ್ಟ್ರಿಕ್ಟ್ ಬೋರ್ಡ್ ತಾಲ್ಲೂಕ್ ಬೋರ್ಡ್ ಮಾಡಿದಂತಹ ರಸ್ತೆಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ ಮೇಲೆ ಏಕೆ ದೊಡ್ಡ ದೊಡ್ಡ ಉದ್ದವಾದ ರೋಡ್‌ಗಳನ್ನು ತೆಗೆದುಕೊಳ್ಳುತ್ತೀರಿ ಎಂದು ನನಗೆ ಅರ್ಥವಾಗುವುದಿಲ್ಲ.

ಸ್ವಾಮಿ, ನಿನ್ನೆಯ ದಿನ, ಮೊನ್ನೆಯ ದಿನ, ದೊಡ್ಡ ಜಾಥಾಗಳು ಹೊರಟದ್ದು, ಉಪವಾಸ ಸತ್ಯಾಗ್ರಹ ಹೂಡಿದ್ದು ಇವೆಲ್ಲ ಜನತೆಗೆ ಆಹಾರವಿಲ್ಲದ್ದರಿಂದ. ಈ ಆಹಾರವನ್ನು ಉತ್ಪಾದನೆ ಮಾಡುವುದಕ್ಕಾಗಿ ಹೆಚ್ಚು ಹಣವನ್ನು ಮೈನರ್ ಇರಿಗೇಷನ್ನಿಗೆ ಖರ್ಚು ಮಾಡಬೇಕೆಂದು ತಮಗೆ ಹೇಳುತ್ತಿದ್ದೇನೆ.

ಕಟ್ಟಡಗಳು, ರಸ್ತೆಗಳ ಮತ್ತು ಸೇತುವೆಗಳನ್ನು ಕಟ್ಟುವ ವಿಷಯದಲ್ಲಿ ಬಹಳ ಕುಂಭಕೋಣ ನಡೆಯುತ್ತಿದೆ. ಇದನ್ನು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ತುಂಗಭದ್ರ ಸೇತುವೆಯನ್ನು ಕಟ್ಟಲು ಕರ್ಣಾಟಕ ಕನ್‌ಸ್ಟ್ರಕ್ಷನ್ ಕಂಪೆನಿಗೆ ಕೊಟ್ಟಿದ್ದಾರೆ. ಅವರಿಗೆ ಸಿಮೆಂಟಿಗೆ ಎಷ್ಟು ಮರಳು ಹಾಕಬೇಕು, ಎಷ್ಟು ಕಲ್ಲು ಹಾಕಬೇಕು, ಕಬ್ಬಿಣ ಎಷ್ಟು ಉಪಯೋಗಿಸಬೇಕು ಎನ್ನುವ ಯಾವ ವಿಷಯಗಳಲ್ಲಿಯೂ ಅನುಭವವಿಲ್ಲ. ಇಂಥ ಕಂಟ್ರಾಕ್ಟರಿಗೆ ಇವತ್ತು ಒಂದು ಭಾರಿ ಸೇತುವೆಯ ಕೆಲಸವನ್ನು ಕೊಟ್ಟು ಕೆಲಸ ಮಾಡಿಸುವುದನ್ನು ನೋಡಿದರೆ ಮಂತ್ರಿಗಳು ಯಾವ ಒತ್ತಡಕ್ಕೆ ಸಿಕ್ಕಿ ಹಾಕಿಕೊಂಡು ಅವರ ಕೈಯಲ್ಲಿ ಈ ಕೆಲಸವನ್ನು ಕೊಟ್ಟರು ಏನ್ನುವುದು ನನಗೆ ಅರ್ಥವಾಗುವುದಿಲ್ಲ. ಹರಿಹರದ ಹತ್ತಿರ ಕಟ್ಟತಕ್ಕ ತುಂಗಭದ್ರ ಸೇತುವೆಯ ವಿಚಾರವಾಗಿ ನಾನು ಮಾತನಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಇದರ ಕಡೆ ಮನಸ್ಸು ಕೊಡಬೇಕೆಂದು ಹೇಳುತ್ತೇನೆ. ಸ್ವಾಮಿ, ಎಂದೂ ಕಂಟ್ರಾಕ್ಟ್ ಕೆಲಸ ಮಾಡದೆ ಇರುವವರಿಗೆ, ಒಂದು ಸಣ್ಣ ಕಟ್ಟಡವನ್ನು ಕಟ್ಟಿಸಿದ ಅನುಭವವಿಲ್ಲದೆ ಇರುವವರಿಗೆ ಈ ಕೆಲಸವನ್ನು ಕೊಟ್ಟಿರುವುದು ಸರಿಯಲ್ಲ, ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ಆ ಕಂಟ್ರಾಕ್ಟರು ಮಾಡತಕ್ಕ ಕೆಲಸವೇನು, ಅದರ ಸ್ಪೆಸಿಫಿಕೇಷನ್ಸ್ ಏನು ಎನ್ನುವುದನ್ನೆಲ್ಲ ತಿಳಿದುಕೊಳ್ಳಬೇಕು. ಇದರ ಬಗ್ಗೆ ಎಲ್ಲ ಇಂಜಿನಿಯರುಗಳೂ ಆಶ್ಚರ್ಯ ಪಡುತ್ತಿದ್ದಾರೆ. ಅದಕ್ಕೋಸ್ಕರ ತರುಣರೂ ಮುಂದೆ ದೊಡ್ಡ ಪದವಿಗೆ ಯುವಕರೂ ಆಗಿರುವುದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಸೂಕ್ತ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಕಂಟ್ರಾಕ್ಟರುಗಳನ್ನು 'ಎ. ಕ್ಲಾಸ್',' ಬಿ. ಕ್ಲಾಸ್ ಮುಂತಾಗಿ ವಿಂಗಡಿಸಿದ್ದಾರೆ. ಶರಾವತಿಯಲ್ಲಿ ಕೆಲಸ ಮಾಡುವುದಕ್ಕೆ ಬಂದಂಥ ಒಬ್ಬ ಕಂಟ್ರಾಕ್ಟರು ಒಂದು ಪಿಕಾಸಿ ತರಲಿಲ್ಲ, ಒಂದು ಗುದ್ದಲಿ ತರಲಿಲ್ಲ ಒಂದು ಮಮ್ಟಿ ತರಲಿಲ್ಲ, ಒಂದು ತಟ್ಟಿ ತರಲಿಲ್ಲ. ಎರಡು ರೂಪಾಯಿಗಳ ದಿನಕೂಲಿ ಕೊಡುವುದಕ್ಕೆ ಅವರಿಗೆ ಶಕ್ತಿ ಇರಲಿಲ್ಲ, ಅವರಿಗೆ ಯೋಗ್ಯತೆ ಇರಲಿಲ್ಲ. ಅಂಥವರು ಇವತ್ತು ಮೂರು ಕೋಟಿ ರೂಪಾಯಿ ಖರ್ಚಾದರೂ ಸರಿ ಸರ್ಕಾರವನ್ನು ಅಲ್ಲಾಡಿಸುತ್ತೇನೆ ಎಂದು ಹೊರಟಿರಬೇಕಾದರೆ ಮಾನ್ಯ ಮಂತ್ರಿಗಳು ಸ್ವಲ್ಪ ಯೋಚನೆ ಮಾಡಬೇಕು ; ಈ ವ್ಯವಹಾರಗಳಲ್ಲಿ ಏನಾಗಿದೆ ಎಂದು. ಸರ್ಕಾರ ಕೊಡತಕ್ಕ ಸಿಮೆಂಟನ್ನು ಮಾರಿ, ಕಬ್ಬಿಣವನ್ನು ಮಾರಿ, ಇತರ ಸಾಮಾನುಗಳನ್ನು ಮಾರಿ, ಮೂರು ಕೋಟಿ ರೂಪಾಯಿಗಳಾದರೂ ಖರ್ಚು ಮಾಡುವುದಕ್ಕೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸಿದ್ಧರಾಗಿದ್ದಾರೆ. ಯಾವ ಸದಸ್ಯರಿಗಾದರೂ ಲಕ್ಷ ರೂಪಾಯಿಗಳನ್ನು ಕೊಡುತ್ತೇನೆ, ನನ್ನ ವಿಷಯದಲ್ಲಿ ಅವರು ಮಾತನಾಡಬೇಕು, ಹಾಗೆ ಮಾಡಿದರೆ ಚುನಾವಣೆಗೆ ಹಣ ಕೊಡುತ್ತೇನೆ, ಮಂತ್ರಿಗಳಿಗೆ ಹಣ ಕೊಡುತ್ತೇನೆ, ಎಂದು ಹೇಳುತ್ತಾರೆ. ರಿಸರ್ವ್ ಬ್ಯಾಂಕ್ ಗವರ್ನರ್, ಮ್ಯಾನೇಜರ್ ಮತ್ತು ಇತರರನ್ನು ಕರೆದು ಉಪಚಾರ ಮಾಡಿ ಮೈಸೂರು ಆಡಳಿತವನ್ನು ಹೊರಗೆ ಇಡುತ್ತೇವೆಂದು ಹೇಳುವ ಕಂಟ್ರಾಕ್ಟರುಗಳನ್ನು ಇವತ್ತಿನ ದಿವಸ ಸೃಷ್ಟಿ ಮಾಡುತ್ತಿದ್ದೀರಿ ಎಂದರೆ ಮೈಸೂರು ಸರ್ಕಾರಕ್ಕೆ ಮಾನ ಮರ್ಯಾದೆ ಉಳಿದೀತೆ ಎನ್ನುವುದನ್ನು ಬಹಳ ನಿಧಾನವಾಗಿ ಯೋಚನೆ ಮಾಡಬೇಕೆಂದು ಮಾತ್ರ ಹೇಳುತ್ತೇನೆ. ನಾನು ಯಾರ ವಿಷಯದಲ್ಲಿ ಮಾತನಾಡುತ್ತಿದ್ದೇನೆ ಎನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರ ಹೆಸರನ್ನು ಹೇಳಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರು ಹೇಳಬಹುದು ಎಂದರೆ ಹೇಳುತ್ತೇನೆ.

Sri G. V. GOWDA.—His name must be disclosed, Sir.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರ ಮಾತ್ರ ಹೆಸರು ಹೇಳುವುದಕ್ಕಾಗುವುದಿಲ್ಲ. ಅಧ್ಯಕ್ಷರು ಅನುಮತಿ ಕೊಟ್ಟರೆ ಹೇಳುತ್ತೇನೆ.

Mr. SPEAKER.—I am not permitting any names to be disclosed.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಂಪೆನಿಯ ಹೆಸರು......

[*Interruptions*]

Mr. SPEAKER.—I may have to ask the member to retire and members afterwards feel that I have been harsh I do not want that to happen. One member asks that it should be disclosed and another member says not to disclose, and the member says that he will disclose if the Hon'ble Speaker asks it to be disclosed. If any persons want to make a serious allegation against any individual, the procedure is there. He must intimate to the concerned Minister that he is making such and such an allegation against such and such a person. The Minister may aquiesce to give a reply. But names cannot be disclosed. It should not be disclosed. If my consent is asked, it is not given.

ಶ್ರೀ ವೀರೇಂದ್ರ ಪಾಟೀಲ್.—ಈಗ ಯಾರೋ ಒಬ್ಬ ಕಂಟ್ರಾಕ್ಟರು ಎಂದು ಹೇಳಿದ್ದಾರೆ. ಅವರ ಹೆಸರು ಹೇಳಲಿಲ್ಲ, ಆದರೂ ಯಾರೂ ಎನ್ನುವುದು ಗೊತ್ತಾಗಿದೆ. ಮಂತ್ರಿಗಳು ನನ್ನ ಜೇಬಿನಲ್ಲಿದ್ದಾರೆ, ಎಂ. ಎಲ್. ಎ. ನನ್ನ ಜೇಬಿನಲ್ಲಿದ್ದಾರೆ, ಮೂರು ಕೋಟಿ ರೂಪಾಯಿ ಉಳಿಸಿಕೊಂಡಿದ್ದೇನೆ ಎಂದು ಹೇಳುತ್ತಾರೆಂದು ತಿಳಿಸಿದರು. I do not know what reply the Hon'ble Member expects.

Mr. SPEAKER.—Officers of the Reserve Bank have been brought. It is not correct to drag the officers of the Reserve Bank also.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅನೇಕ ಸಲ ತಾವು ಕೊಟ್ಟ ಹಣ ಕಾನೂನಿಗೆ ಮೀರಿ, ಷೆಡ್ಯೂಲ್ ರೇಟಿಗೆ ಮಿತಿ ಮೀರಿ ಕೊಟ್ಟ ಲಕ್ಷಾಂತರ ರೂಪಾಯಿ ಹಣದಿಂದ ಸರ್ಕಾರವನ್ನು ನನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತೇನೆ. ಹಾಗೆ ಮಾಡುವುದಕ್ಕೆ ನನಗೆ ಶಕ್ತಿ ಇದೆ ಎಂದು ಹೇಳಿದ್ದರ ಮೇಲೆ ನಾನು ಹೇಳುತ್ತಿದ್ದೇನೆ. ಸರ್ಕಾರಿ ಕೆಲಸವನ್ನು ಪ್ರಾರಂಭ ಮಾಡುವಾಗ ಅವರಿಗೆ ಕೊಟ್ಟಂಥ ಅಡ್ವಾನ್ಸ್ ಹಣ ಕೆಲಸ ಪ್ರಾರಂಭ ಮಾಡುವಾಗ ಎರಡು ರೂಪಾಯಿ ಕೊಡಲಿಕ್ಕೆ ಶಕ್ತಿ ಇಲ್ಲದೆ ಇದ್ದದ್ದು ಇದೆಲ್ಲವನ್ನೂ ಗಮನಿಸಿದರೆ ಅವರು ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಸರ್ಕಾರದ ಮೇಲೆ ಈ ಅಪಾದನೆಗಳಿವೆ ಎಂದು ಹೇಳುತ್ತಿದ್ದೇನೆ. ಇದನ್ನು ಮಂತ್ರಿಗಳು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಅವರು ಹಣ ಮಾಡಿಕೊಂಡಿದ್ದಾರೆ ಎಂದು ಅವರ ತಲೆ ತೆಗೆಯುವುದಕ್ಕೆ ಹೇಳಲಿಲ್ಲ. ವಿಷಯ ಸರ್ಕಾರದ ಗಮನಕ್ಕೆ ತಂದೆ. ಶಂಕರನಾರಾಯಣ

ಕನ್‌ಸ್ಟ್ರಕ್ಷನ್ ಕಂಪೆನಿ ಶರಾವತಿಯಲ್ಲಿ ಹೇಗೆ ಕೆಲಸ ಮಾಡಿದೆ ಎಂದು ಹೇಳಿದೆ. ತಾವು ಕೊಟ್ಟಿರತಕ್ಕ ಅಂಕಿ ಅಂಶಗಳ ಮುಖಾಂತರ ತೆಗೆದು ನೋಡಿದರೆ ಸರ್ಕಾರದಿಂದ ಇವರಿಗೆ ಹಂತ ಹಂತದಲ್ಲಿಯೂ ಲಕ್ಷಾಂತರ ರೂಪಾಯಿ ಕೊಟ್ಟಿದೆ ಎಂದು ನಮಗಾದರೂ ಅರ್ಥವಾಗುತ್ತದೆ. ಈಗಲಾದರೂ ಮಂತ್ರಿವರ್ಯರಿಗೆ ನಾವು ಹೇಳಿದ್ದು ಅರ್ಥವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಈ ಮಾತನ್ನು ಇಷ್ಟಕ್ಕೇ ಬಿಡುತ್ತೇನೆ.

ಸೇತುವೆಗಳ ಕೆಲಸವನ್ನು ಕಂಟ್ರಾಕ್ಟರುಗಳಿಗೆ ಕೊಡುವಾಗ ಸೇಕಡ 25—30 ರಷ್ಟು ಹೆಚ್ಚಿಗೆ ದರಗಳನ್ನು ಹಾಕಿರುವ ನಿದರ್ಶನಗಳು ನನ್ನ ಹತ್ತಿರ ಇವೆ. ಮಾನ್ಯ ಮಂತ್ರಿಗಳು ಯಾವುದೇ ಪ್ರೆಷರ್‌ಗೆ, ಯಾವುದೇ ಇನ್‌ಫ್ಲುಯೆನ್ಸ್‌ಗೆ ಒಳಗಾಗುವುದಿಲ್ಲ, ಕಾನೂನು ಕಟ್ಟಳೆ ಪ್ರಕಾರ ಕೆಲಸ ಮಾಡುತ್ತೇನೆ ಎನ್ನುವ ಬರವಸೆಯನ್ನು ಕೊಟ್ಟರೆ ಅವರ ಮೇಲೆ ನನಗೆ ಏನೂ ಕೋಪವಿಲ್ಲ.

ಶರಾವತಿಯಲ್ಲಿ ಉತ್ಪಾದನೆಯಾಗತಕ್ಕ ವಿದ್ಯುಚ್ಛಕ್ತಿಯನ್ನು, ಐದಾರು ವರ್ಷಗಳ ಹಿಂದೆ, ಪ್ರಾರಂಭವಾದಾಗಿನಿಂದಲೂ, ಯಾವ ರೀತಿ ಉಪಯೋಗಿಸುತ್ತೀರಿ ಎಂದು ಕೇಳಿದರೆ ಇವರು ಹೇಳಿಕೊಂಡು ಬಂದರು, ದೇಶದಲ್ಲಿ ಉತ್ಪನ್ನವಾಗತಕ್ಕ ಪ್ರತಿಯೊಂದು ಯೂನಿಟ್ ವಿದ್ಯುತ್ತನ್ನೂ, ಪ್ರತಿಯೊಂದು ಅಂಶವನ್ನೂ ಈ ರಾಜ್ಯದಲ್ಲಿಯೇ ಉಪಯೋಗಿಸುತ್ತೇವೆಂದು. ಆದರೆ ಈಗ ಆಂಧ್ರ, ಗೋವ, ಮದ್ರಾಸ್ ರಾಜ್ಯಗಳಿಗೆ ವಿದ್ಯುತ್ತನ್ನು ಮಾರಾಟ ಮಾಡುತ್ತಿದ್ದಾರೆ. ಶರವಾತಿಯಿಂದ ಉತ್ಪತ್ತಿಯಾಗುವ ವಿದ್ಯುತ್ತನ್ನು ಉಪಯೋಗಿಸಿಕೊಳ್ಳುವುದಕ್ಕೆ ಏನಾದರೂ ಮಾಡಿದ್ದಾರೆಯೇ ಎಂದರೆ ಅವರು ಮಾಡಿರುವುದು ದೊಡ್ಡ ಸೊನ್ನೆ. ಇಲ್ಲಿ ಹತ್ತು ಜನರೇಟರುಗಳೂ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಅರ್ಧ ಜನರೇಟರಿನಲ್ಲಿ ಉತ್ಪತ್ತಿಯಾಗತಕ್ಕ ಶಕ್ತಿಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ನೂರಾರು ಕೋಟಿ ರೂಪಾಯಿ ಹಣವನ್ನು ಇದರ ಮೇಲೆ ವೆಚ್ಚ ಮಾಡಿ ವಿದ್ಯುತ್ ಕಾರಾಗಾರವನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಇದರಲ್ಲಿ ಉತ್ಪತ್ತಿಯಾಗುವ ಶಕ್ತಿಯನ್ನು ಉಪಯೋಗಿಸಿಕೊಳ್ಳಲು ಒಂದು ಕೈಗಾರಿಕೆ ತಯಾರಾಗಲಿಲ್ಲ, ಮತ್ತೊಂದು ಆಗಲಿಲ್ಲ. ಆದ್ದರಿಂದ ಇವತ್ತು ನಮ್ಮಲ್ಲಿ ಉತ್ಪತ್ತಿಯಾಗುವ ಪವರ್ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಲಕ್ಷಾಂತರ ರೂಪಾಯಿ ಬರುತ್ತದೆ ಎಂದು ಹೇಳುವುದಾದರೆ, ಮೈಸೂರು ಸರ್ಕಾರ ವಿದ್ಯುತ್ತನ್ನು ಉತ್ಪಾದನೆ ಮಾಡಿ ಮಾರಾಟ ಮಾಡುವುದಕ್ಕೆ, ಅಂಥ ಹವ್ಯಾಸಕ್ಕೆ ಕೈ ಹಾಕುವುದೇ? ಈ ಕೆಲಸವನ್ನು ಒಬ್ಬ ಸರ್ಕಾರಿ ನೌಕರ ಮಾಡುತ್ತಾನೆ. ದೇಶದಲ್ಲಿ ಉತ್ಪತ್ತಿಯಾಗುವ ವಿದ್ಯುತ್ತನ್ನು ನಮ್ಮಲ್ಲಿಯೇ ಉಪಯೋಗಿಸಿಕೊಳ್ಳುವುದಕ್ಕೆ ಬೇಕಾದ ಉದ್ಯಮಗಳನ್ನು ಸ್ಥಾಪನೆ ಮಾಡುವುದಕ್ಕೆ, ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ನಿಸ್ಸಹಾಯಕರಾಗಿದ್ದಾರೆ. ಇಂಥವರು ಆಡಳಿತದಲ್ಲಿ ಇರುವುದಕ್ಕೆ ಲಾಯಖ್ಖೆ ಎಂದು ಯೋಚನೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ.

ಸ್ವಾಮಿ, ಇದರ ಉತ್ಪಾದನೆ ಮಾಡುವ ಪವರನ್ನು ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲ. ಚೇಳು ಮಂತ್ರ ಬಾರದೆ ಹಾವಿನ ಬುಟ್ಟಿಯಲ್ಲಿ ಕೈ ಹಾಕುವುದಕ್ಕೆ ಹೋಗುತ್ತಿದ್ದಾರೆ. ಹೊಗೇನಕಲ್ ಯೋಜನೆಯನ್ನು ಕಾರ್ಯಗತ ಮಾಡಿ ಅದರಿಂದ ಉತ್ಪಾದನೆಯಾಗುವ ಜಲವಿದ್ಯುತನ್ನು ಉಪಯೋಗಿಸಿಕೊಳ್ಳಬೇಕೆಂದು ಮದ್ರಾಸ್ ಸರ್ಕಾರ ಪ್ರಯತ್ನ ಮಾಡಿದೆ. ಅದಕ್ಕೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ ಎಂದು ನಮಗೆ ಖಚಿತವಾಗಿ ಗೊತ್ತಾಗಿದೆ. ಆದರೆ ನಮ್ಮ ಸರ್ಕಾರದವರು ಹೇಳುವಂತೆ, ಇವರು ಮದ್ರಾಸ್ ಸರ್ಕಾರದೊಡನೆ ಮಾತುಕತೆ ಆಡಿದ್ದಾರೆ, ಕೇಂದ್ರ ಸರ್ಕಾರದೊಡನೆ ಮಾತನಾಡಿದ್ದಾರೆ, ಪ್ಲಾನಿಂಗ್ ಕಮಿಷನ್ ಸದಸ್ಯರುಗಳ ಜೊತೆ ಮಾತನಾಡಿದ್ದಾರೆ. ಈ ಸಭೆಯಲ್ಲಿ ಒಂದು ಪ್ರಶ್ನೆ ಬಂದಾಗ, ನಮ್ಮನ್ನು ಕೇಳದೆ ಮದ್ರಾಸ್ ಸರ್ಕಾರಕ್ಕೆ ಅನುಮತಿಯನ್ನು ಕೊಡುವುದಿಲ್ಲ ಎಂದು ಅಪ್ಪಣೆ ಕೊಡಿಸಿದರು. ಇವತ್ತಿನ ದಿವಸ ಮದ್ರಾಸ್ ಸರ್ಕಾರದವರು ಹೊಗೇನಕಲ್ ವಿಷಯದಲ್ಲಿ ಯೋಜನೆಯನ್ನು ಹಾಕಿದ್ದಾರೆ, ನಮ್ಮನ್ನು ಕೇಳದೆ ಅವರಿಗೆ ಕ್ಲಿಯರೆನ್ಸ್ ಕೊಟ್ಟಿದ್ದರೆ ಏನು ಮಾಡುತ್ತಾರೊ ಇದರ ಬಗ್ಗೆ ಮೈಸೂರು ಸರ್ಕಾರದ ನಿಲುವು ಏನು ಎನ್ನುವುದನ್ನು ಸಂಪೂರ್ಣವಾಗಿ ಮಾನ್ಯ ಸಭೆಗೆ ಮನನ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಮದ್ರಾಸ್ ಸರ್ಕಾರದವರು ಹೇಳಿರುವ ಪ್ರಕಾರ ಅವರು ಹೊಗೇನಕಲ್ ಯೋಜನೆಯನ್ನು ಕಾರ್ಯಗತ ಮಾಡುವುದಾದರೆ ಮೈಸೂರು ಸಂಸ್ಥಾನಕ್ಕೆ ಆಗತಕ್ಕ ಅನ್ಯಾಯವನ್ನು ಕೂಡ ಯೋಚನೆ ಮಾಡಬೇಕು. ಇದರಿಂದ ಷಿಂಷಾ ಮುಳುಗಿ ಹೋಗುತ್ತದೆ, ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಕಟ್ಟಿರುವ ಕಟ್ಟಡಗಳು ಮುಳುಗಿ ಹೋಗುತ್ತವೆ. ಒಂದು ಕಡೆ ಆಂಧ್ರ, ಇನ್ನೊಂದು ಕಡೆ ಮದ್ರಾಸ್ ಎನ್‌ಕ್ರೋಚ್ ಮಾಡಿಕೊಂಡು ಬಂದರೆ ಅಕ್ಕಪಕ್ಕದಲ್ಲಿರುವ ನಮ್ಮ ಆಸ್ತಿಪಾಸ್ತಿಗಳನ್ನು ಆಕ್ಯುಪೈರ್ ಮಾಡಿಕೊಳ್ಳುವುದಾದರೆ ಅದರಿಂದ ದೇಶಕ್ಕೆ ಏನು ಹಾನಿಯಾಗುತ್ತದೆ ಎನ್ನುವುದನ್ನು ನಮ್ಮ ಸರ್ಕಾರದವರು ಈಗಲಾದರೂ ಕಣ್ಣು ತೆರೆದು ನೋಡಬೇಕು ಎಂದು ಹೇಳುತ್ತೇನೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಸರ್ವಪ್ರಯತ್ನ ಪಡೆಬೇಕು. ಹೊಗೇನ್‌ಕಲ್ ಯೋಜನೆಯನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಲ್ಲವೆಂದು ಮಂತ್ರಿಗಳು ಅಪ್ಪಣೆ ಕೊಟ್ಟಿದ್ದಾರೆ. ಕಾಳಿನದಿ ಯೋಜನೆಯನ್ನು ಸೇರಿಸಿದ್ದೇವೆಂದು ಹೇಳುತ್ತಾರೆ. ನಾವು ಶರಾವತಿ ಪವರನ್ನು ಉಪಯೋಗಿಸಿಕೊಳ್ಳುವಾಗ ಕಾಳಿನದಿಯ ಯೋಜನೆಯನ್ನು 4ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿಸಿದ ಉದ್ದೇಶವೇನು, ಅಲ್ಯೂಮಿನಿಯಂ ಕಾರ್ಖಾನೆ ಬರುತ್ತದೆ, ಫರ್ಟಿಲೈಜರ್ ಕಾರ್ಖಾನೆ ಬರುತ್ತದೆ, ಸುಮಾರು 100 ಕೋಟಿ ರೂಪಾಯಿಗಳಲ್ಲಿ ಅಲ್ಯೂಮಿನಿಯಂ ಫ್ಯಾಕ್ಟರಿ ಸ್ಥಾಪನೆ ಮಾಡುತ್ತೇವೆ, ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸಬೇಕಾಗು ತ್ತದೆಂದು ಕೈಗಾರಿಕೆಯ ಸಚಿವರು ಇಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಆ ಯೋಜನೆ ಎಷ್ಟು ದೊಡ್ಡದಾಗಿ ಆಗುತ್ತದೋ ಅಥವಾ ಎಷ್ಟು ಚಿಕ್ಕದಾಗಿ ಆಗುತ್ತದೋ ನನಗೆ ಗೊತ್ತಾಗಲಿಲ್ಲ, ನನ್ನ ಸ್ನೇಹಿತರು ಈಗ ತಿಳಿಸಿದಹಾಗೆ, ಅದು 30 ಸಾವಿರ ಟನ್ನಗಳಷ್ಟು ಅಲ್ಯುಮಿನಿಯಂ ಉತ್ಪತ್ತಿ ಮಾಡತಕ್ಕ ಒಂದು ಉದ್ಯಮವೆಂದು ನನಗೆ ಕಾಣುತ್ತಿದೆ. ಇವರು ಎಷ್ಟು ಪವರನ್ನು ಈ ಯೋಜನೆ ಗಳಿಗಾಗಿ ಕರ್ನ್ಸ್ಯೂಮ್ ಮಾಡುತ್ತಾರೆಂಬುದನ್ನು ಸರಿಯಾಗಿ ತಿಳಿಸುತ್ತಾ ಇಲ್ಲ. ನಮ್ಮ ರಾಜ್ಯ ನಿಜವಾಗಿ ಅಕ್ಕಪಕ್ಕದ ರಾಜ್ಯಗಳಿಗಿಂತ ಹಿಂದುಳಿದಿದೆ. ನಾವು ಬಹಳ ಹಿಂದಿದ್ದೇವೆಂಬ ಭಾವನೆ ಅನೇಕರಲ್ಲಿ ಬಂದಿದೆ. ಮೈಸೂರು ರಾಜ್ಯದ ಜನತೆಯಲ್ಲಿ ಇದು ಹೆಚ್ಚಿನ ದುಗುಡವನ್ನುಂಟುಮಾಡಿದೆ. ಈಗ ಇಲ್ಲಿ ಮುಖ್ಯಮಂತ್ರಿಗಳೂ ಹಾಗೂ ಸಂಬಂಧಪಟ್ಟ ಮಂತ್ರಿಗಳೂ ಹಾಜರಾಗಿದ್ದಾರೆ. ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಸರ್ಕಾರದವರು ಎಲ್ಲಾ ಪ್ರಯತ್ನಗಳನ್ನು ಕೂಡಲೇ ಮಾಡ ಬೇಕು ಕಾಳೀನದಿಗೆ ಒಂದುವೇಳೆ ಕ್ಲಿಯರೆನ್ಸ್ ಬಂದರೆ ಅದರೊಳಗೇ ವಿದ್ಯುಚ್ಛಕ್ತಿ ಉತ್ಪನ್ನವನ್ನು ಪ್ರಾರಂಭಮಾಡುವ ಪಕ್ಷಕ್ಕೆ ಈ ರಾಜ್ಯದಲ್ಲಿ ಯಾವ್ಯಾವ ಕೈಗಾರಿಕೆಗಳಿಗೆ ಅದನ್ನು ಉಪಯೋಗ ಮಾಡುತ್ತಾರೆಂಬುದನ್ನು ಸರ್ಕಾರದವರು ಹೇಳಬೇಕು.

ಇನ್ನು distribution of power ವಿಷಯ. ಇದನ್ನು ಯಾವರೀತಿ ಹಂಚಬೇಕೆಂಬ ವ್ಯವಸ್ಥೆಯೇ ಇಲ್ಲ. ಇರ್ರಿಗೇಷನ್ನಿಗೆ ಎಷ್ಟು ಪವರ್ ಕೊಡಬೇಕು ಕೈಗಾರಿಕೆಗಳಿಗೆ ಎಷ್ಟು ಪವರ್ ಕೊಡಬೇಕು ಎಂಬುದನ್ನು ನಿಗದಿಮಾಡಿಲ್ಲ. ಇನ್ನಿತರ ಮೆಟೀರಿಯಲ್ಸ್ ಅಂದರೆ ಅನೇಕ ಉಪಕರಣ ಗಳು ಇಲ್ಲವೆಂದು ಕೇಳುತ್ತಾರೆ. ಕೆಲವು ಸಂದರ್ಭಗಳಲ್ಲಿ ತಂತಿಇಲ್ಲ, ಕಂಬಗಳಿಲ್ಲ, ಇನ್‌ಸ್ಯು ಲೇಟರ್ಸ್ ಇಲ್ಲವೆಂದು ಹೇಳುತ್ತಾರೆ. ಮುಖ್ಯವಾಗಿ ಇವರು ಕಷ್ಟಪಟ್ಟು ಮಾಡತಕ್ಕ ಪ್ರಾಜೆಕ್ಟುಗಳ ಸುಖವನ್ನು ಪಡೆಯುವವರು ನೆರೆಯ ರಾಜ್ಯಗಳವರು ಆಗಿದ್ದಾರೆ. ಅದಕ್ಕೆ ಒಂದೆರಡು ಉದಾಹರಣೆ ಗಳನ್ನು ಕೊಡಬಹುದು. ಯಾವನೋ ಒಬ್ಬತರೆ ಒಣಗಿದೆಯೆಂದು ತನ್ನಲ್ಲಿದ್ದ ಎಣ್ಣೆಯನ್ನು ಹಚ್ಚಿಕೊಳ್ಳುವುದನ್ನು ಬಿಟ್ಟು ಒಂದು ಕರಿಗುಂಡಕಲ್ಲಿಗೆ ಸವರುತ್ತಿದ್ದನಂತೆ, ಊಟ ಮಾಡದೇ ಇರುವವನಿಗೆ ಎಂತಹ ವ್ಯಾಪ್ಯಾನ್ನ ಭೋಜನವಿಟ್ಟರೂ ತಾನೇ ಏನು ಪ್ರಯೋಜನ ಎಂದು ಹೇಳುವ ಹಾಗೆ ಆಗಬಾರದು. ಹೀಗಾಗಿ ಮೈಸೂರಿನ ಜನ ಏನು ಸುಖ ಪಡೆಯಬೇಕಾಗಿತ್ತೋ ಅದನ್ನು ಪಡೆಯಲಿಕ್ಕಾಗಲೇ ಇಲ್ಲ. ಅವರು ಯಾವ್ಯಾವ ರೀತಿಯಲ್ಲಿ ಹೋದರೂ ಮೈಸೂರಿಗೇ ಎಲ್ಲಾ ಕ್ಷೇತ್ರ ದಲ್ಲಿಯೂ ನಿಷ್ಫಲವಾಗಿದೆಯೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ಇದನ್ನು ಏಕೆ ಹೇಳು ತ್ತಿದ್ದೇನೆಂದರೆ, ನಾವೇನು ಪರದೇಶದವರಲ್ಲ, ಬ್ರಿಟಿಷರೂ ಅಲ್ಲ, ಬೇರೆ ದೇಶಗಳಿಂದ ಬಂದು ಇಲ್ಲಿ ನೆಲೆಸಿರುವವರಲ್ಲ ನಮಗೆ ಈ ದೇಶದ ಮೇಲೆ ಎಷ್ಟು ಅಭಿಮಾನವಿದೆಯೋ, ಆಶೆ ಇದೆಯೋ ಅಷ್ಟೇ ಅಭಿಮಾನ ಮತ್ತು ಆಸೆ ಮಂತ್ರಿಗಳಲ್ಲಿರಬೇಕು, ಅಧಿಕಾರಿಗಳಲ್ಲಿಯೂ ಬರಬೇಕು. ಕೆಲವಾರು ಯೋಜನೆಯ ಕೆಲಸಗಳು ಪ್ರಾರಂಭವಾದಾಗ 'ರೀಜಿನಲಿಜಂ' ಎಂಬುದಾಗಿ ಏನಿದೆ ಅದು ಬಂದು ಆ ಭಾಗ, ಈ ಭಾಗ ಆ ಜಾತಿ, ಈ ಜಾತಿ ಎಂಬ ಭಾವನೆ ಇತ್ತೀಚೆಗೆ ಪಿ.ಡಬ್ಲ್ಯು.ಡಿಯಲ್ಲಿ ಮತ್ತು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಜಾಸ್ತಿಯಾಗುತ್ತದೆ. ಇದರಿಂದಲೇ ಅಲ್ಲಿನ ಕೆಲಸ ಕಾರ್ಯಗಳು ಕುಂಠಿತ ವಾಗುವುದಕ್ಕೆ ಕಾರಣವಾಗಿದೆ. ಈ ಪಿ.ಡಬ್ಲ್ಯು.ಡಿ. ಖಾತೆಯಲ್ಲಿ ಶ್ರೀಮಾನ್ ವೀರೇಂದ್ರಪಾಟೀಲ್ ಅವರು ಅಧಿಕಾರಕ್ಕೆ ಬಂದಮೇಲೆ ಆ ಖಾತೆಯನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಇಲ್ಲಿ ಮಂತ್ರಿಗಳೂ ಚೀಫ್‌ಸೆಕ್ರೆಟರಿ, ಡೆಪ್ಯುಟಿಸೆಕ್ರೆಟರಿ, ಅಂಡರ್ ಸೆಕ್ರೆಟರಿಗಳು, ಸೆಕ್ರೆಟರಿಗಳು ಎಲ್ಲರೂ ಇದ್ದಾರೆ. ಆದರೂ ಅವರುಗಳ ಮೇಲೆ ಇರತಕ್ಕ ಅಪವಾದಗಳನ್ನು ಇವತ್ತಿನ ದಿವಸ ದೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂಬುದಾಗಿ ನಾನು ತಿಳಿದಿದ್ದೇನೆ. ಆದರೆ ಇವರ ಕೈಕೆಳಗೆ ಕೆಲಸ ಮಾಡಿ ಕೊಂಡು ಇರತಕ್ಕವರು ಯಾರು ಇದ್ದಾರೆ ಅವರು ಕೆಲವು ಸಂದರ್ಭಗಳಲ್ಲಿ ಅನೇಕರಿಗೆ ದುಷ್ಪರಿಣಾಮ ವನ್ನುಂಟುಮಾಡಿದ್ದಾರೆ. ಅಂತಹವರಿಗೇ ಇವರು ಪ್ರೊಮೋಷನ್ ಕೊಡುತ್ತಿದ್ದಾರೆ. ಈ ಒಂದು ಅಪವಾದ ಈ ದೇಶದಲ್ಲಿ ಜನ ಜನಿತವಾಗಿ ಹಬ್ಬಿದೆ. ಸಾಮಾನ್ಯವಾಗಿ ವಿಧಾನಸೌಧದಲ್ಲಿಯೇ ಕೆಲಸ ಗಳಾಗಬೇಕಾದರೆ ಇನ್‌ಫ್ಲುಯನ್ಸ್ ಇಲ್ಲದೇ ಹೋದರೆ ವಸೂಲಿ ಬಾಜಿ ಇಲ್ಲದೇಹೋದರೆ ಏನೂ

ಕೆಲಸವಾಗುವುದಿಲ್ಲ. ಈ ವಸೋಲಿ ಬಾಜಿಯೂಸಹ ಜನಗಳ ಮೇಲೆಯೋ ಬೀಳುತ್ತದೆಯೋ ಏನೋ ಮುಂದೆ ಗೊತ್ತಾಗುತ್ತದೆ. ಆರೀತಿ ಆಗಲಾರದು ಎಂಬುದಾಗಿ ಮಂತ್ರಿಗಳು ಹೇಳಿದರೆ ಇದನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ. ಈ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಅಧಿಕಾರಿಗಳಿಗೆ ಪ್ರೊಮೋಷನ್ ಅಥವಾ ಕನ್‌ಫರ್ಮೇಷನ್ ಮಾಡುವಾಗ ಸ್ವಲ್ಪ ಯೋಗ್ಯತೆ, ಮತ್ತು ಅರ್ಹತೆಯನ್ನು ವಿಚಾರ ಮಾಡಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತೇನೆ. ಶಾಸನ ಸಭಾ ಸದಸ್ಯರು ಮಂತ್ರಿಗಳಿಗೆ ಈ ವಿಚಾರವಾಗಿ ಹೇಳುತ್ತಿರುವಾಗ ಮಂತ್ರಿಗಳಾದವರು ಅವರ ಅಧಿಕಾರಿಗಳಿಗೆ ಹೇಳಬೇಕು. ವಿಧಾನ ಮಂಡಲದ ಸದಸ್ಯರು ಚೀಫ್ ಇಂಜನಿಯರನ್ನು ನೋಡುವುದಕ್ಕೆ ಹೋದಾಗ ಎಷ್ಟರಮಟ್ಟಿಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಮುಂದೆ ಗೌರವವನ್ನು ಅವರು ತೋರಿಸಿದ್ದಾರೆಂಬುದು ಅನೇಕರಿಗೆ ಗೊತ್ತಿದೆ. ಎಷ್ಟರಮಟ್ಟಿಗೆ ಆ ಕಮಿಟಿಯ ಚೇರಮನ್ ಅವರಿಗೆ ಗೌರವ ಕೊಟ್ಟಿದ್ದಾರೆಂಬ ಬಗ್ಗೆ ಮುಖ್ಯಮಂತ್ರಿಗಳಿಗೆ ತಿಳಿಸಿದಾಗ ಅವರು ವ್ಯವಹಾರ ನಡೆಸಿ ಇಲಾಖೆಯ ಮುಖ್ಯಾಧಿಕಾರಿಗಳು ಈ ಸಭಾಸದಸ್ಯರ ವಿಷಯದಲ್ಲಿ ಗೌರವಯುತವಾಗಿ ನಡೆದುಕೊಳ್ಳದೇ ಇರುವ ಕಾರಣ ಅದನ್ನು ವಿಚಾರಿಸಿ ಸರಿಮಾಡುತ್ತೇವೆಂದು ಆಶ್ವಾಸನೆ ಕೊಟ್ಟರೂ, ಶ್ರೀಮಾನ್ ಗಾಂಜಿ ವೀರಪ್ಪನವರು ಇಲ್ಲಿ ಈಗ ಇಲ್ಲ. ಅವರೂ ಸಹ ಹೇಳಿದರು. ಅಧಿಕಾರಿಗಳಾದವರು ಈ ವಿಧಾನ ಮಂಡಲದ ಸದಸ್ಯರಿಗೆ ಸಾಕಷ್ಟು ಗೌರವ ಕೊಡದಿದ್ದರೆ ಅಂತಹ ಅಧಿಕಾರಿಗಳ ಬಗ್ಗೆ ಸರ್ಕಾರ ತಕ್ಕ ನಿಗಾ ಇಡಬೇಕು, ಸೂಕ್ತಕ್ರಮ ತೆಗೆದುಕೊಳ್ಳಬೇಕು ಎಂದು ಅವರಿಗೆ ಮೊದಲು ಈ ಸಭಾ ಸದಸ್ಯರುಗಳು ಆ ಮೇಲೆ ಮಂತ್ರಿಗಳು ಎಂಬ ಅರಿವು ಆಗಬೇಕು. ಅದಾದ ಮೇಲೆ ಮಂತ್ರಿ ಮಂಡಲಕ್ಕೆ ಗೌರವ ಕೊಡುವುದು. ಈ ಸಭಾ ಕೆಲಸ ಕಾರ್ಯಗಳ ಬಗ್ಗೆ ಸಭಾಸದಸ್ಯರಿಗೆ ಯಾವ ರೀತಿ ಗೌರವವನ್ನು ಕೊಡಬೇಕೆಂಬುದನ್ನು ಸರ್ಕಾರದವರು ಅಧಿಕಾರಿಗಳಿಗೆ ಕಲಿಸಬೇಕು. ಇಲ್ಲದಿದ್ದರೆ ಅಂತಹ ಅಧಿಕಾರಿಗಳು ಬಹಳ ದಿವಸಗಳ ಕಾಲ ಈ ರಾಜ್ಯದಲ್ಲಿ ಅಧಿಕಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ಈ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ.

ಒಂದು ಕಡೆ ಒಂದು ಜೀಪು ಸುಟ್ಟು ಹೋಯಿತು, ಅದರ ಲಕ್ಷಣವೇ ಬೇರೆ, ಸರ್ಕಾರಕ್ಕೆ ಬಂದ ವರದಿಯೇ ಬೇರೆ. ವಿಜಿಲೆನ್ಸ್ ಕಮಿಷನ್ನಿನವರು ಸರಿಯಾದ ವರದಿಯನ್ನು ಕೊಟ್ಟರು. ಆದರೆ ಅದಕ್ಕೆ ಇವತ್ತು ಬಣ್ಣ ಬಳಿದು ಏನೂ ಆಗಲಿಲ್ಲವೆಂದು ಹೇಳಿಬಿಟ್ಟರು ಒಬ್ಬ ಎಗ್ಸಿಕ್ಯೂಟಿವ್ ಇಂಜಿನಿಯರನ್ನು ಉಳಿಸಬೇಕೆಂದು ಇಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಇವತ್ತು ಅವರು ಮಂತ್ರಿಗಳಾಗಬೇಕಾಗಿತ್ತು. ಏಕೋ ಇನ್ನೂ ಎಗ್ಸಿಕ್ಯೂಟಿವ್ ಇಂಜನಿಯರ್ ಆಗಿಯೇ ಇದ್ದಾರೆ. ಅದನ್ನು ಖಾಸಗಿಯಾಗಿ ಎಷ್ಟೋ ಸಾರಿ ನಾನು ಕೂಡ ಹೇಳಿದ್ದೇನೆ. ಈ ಸಂದರ್ಭದಲ್ಲಿ ಈ ಸರಕಾರದವರು ಹಿಂದೆ ಹೇಳಿದ್ದ ವಿಚಾರವನ್ನು ನಾವು ಯೋಚನೆ ಮಾಡಬೇಕಾಗಿದೆ. ಇನ್ನುಮುಂದೆ ಯಾವ ಅಧಿಕಾರಿಯೂ ಎಲ್ಲಿಯೂ Opening Ceremony ಮಾಡಕೂಡದು, ಅಸ್ತಿಭಾರ ಶಿಲೆಗಳನ್ನು ಹಾಕುವುದಕ್ಕೆ ಹೋಗಬಾರದು, ಫೋಟೋ ಅನಾವರಣ ಮಾಡಲು ಹೋಗಬಾರದು ಎಂಬುದಾಗಿ ಸರ್ಕಾರದವರೇ ಒಂದು ಆಜ್ಞೆಯನ್ನು ಹೊರಡಿಸಿದರು. ಈಗ ಅದಕ್ಕೆ ವಿರುದ್ಧವಾಗಿ ನಡೆಯುತ್ತಿದೆ. ಎಗ್ಸಿಕ್ಯೂಟಿವ್ ಇಂಜನಿಯರ್ ಅವರೇ ಅವರ ಹೆಸರಿನಲ್ಲಿ ಫೋಟೋ ಅನಾವರಣ ಮಹೋತ್ಸವ, ಓಪನಿಂಗ್ ಸೆರಮನಿಗಳು, ಅಧ್ಯಕ್ಷತೆಗಳನ್ನು ವಹಿಸುವುದು-ಇವೆಲ್ಲಾ ನಡೆಯುತ್ತಿವೆ. ಏನಾದರೂ ಮಾಡಿ ಈ ಮಂತ್ರಿ ಮಂಡಲವನ್ನು ಪದಚ್ಯುತಿಗೊಳಿಸಬೇಕೆಂದು ಕೆಲವು ಅಧಿಕಾರಿಗಳು ಪ್ರಯತ್ನ ಪಡುತ್ತಿರುವ ಒಂದು ಭಯ ಈಗಿನ ಸರ್ಕಾರಕ್ಕೆ ಬಂದಿರುವ ಹಾಗೆ ನನಗೆ ಕಾಣುತ್ತದೆ. ಐ.ಸಿ.ಎಸ್. ಮತ್ತು ಐ.ಎ.ಎಸ್. ಆಫೀಸರುಗಳನ್ನು ಈ ರೀತಿಯಾಗಿ ಬೆಳೆಸಿದರೆ ಇವತ್ತಿನ ದಿವಸ ಅವರ ದೃಷ್ಟಿಯಲ್ಲಿರತಕ್ಕ ಯಾವುದೇ ಮುಖಂಡರ ಪದಚ್ಯುತಿಗೆ ಅವಕಾಶವಾದೀತೆಂದು ಇಂಡಿಯನ್ ಕಾಂಗ್ರೆಸ್ ಅಧ್ಯಕ್ಷರು ಒಂದು ಸಂದರ್ಭದಲ್ಲಿ ಹೇಳಿದ್ದಾರೆ. ಆದ್ದರಿಂದ ಇಂತಹ ಅಧಿಕಾರಿಗಳಮೇಲೆ ಸರಿಯಾದಂಥ ಬಿಗಿ ಇಟ್ಟುಕೊಳ್ಳದೆ ಹೋದರೆ, ನಿಜವಾಗಿ ಅಧಿಕಾರಿಗಳಾಗಿರುವವರು ರಾಜಕೀಯದಲ್ಲಿ ಕೈ ಹಾಕಿದ್ದೇ ಆದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ದೇಶಕ್ಕೂ ತುಂಬಾ ಹಾನಿಯುಂಟಾಗುತ್ತದೆ. ಪಿ.ಡಬ್ಲ್ಯುಡಿ.ಯಲ್ಲಿರತಕ್ಕ ಅನೇಕ ಅಧಿಕಾರಿಗಳು ರಾಜಕೀಯ ಕ್ಷೇತ್ರದಲ್ಲಿ ಹಸ್ತಕ್ಷೇಪವನ್ನು ಮಾಡುತ್ತಿದ್ದಾರೆ. ಅಂತಹವರು ಬಹಳ ಗಂಭೀರವಾದ ನಡೆವಳಿಕೆಯನ್ನು ಇಟ್ಟುಕೊಳ್ಳಬೇಕು. ಸರ್ಕಾರದವರು ಅಂತಹವರ ಮೇಲೆ ಹೆಚ್ಚಿನ ಹತೋಟಿಯನ್ನು ಇಟ್ಟುಕೊಳ್ಳಬೇಕೆಂದು ಹೇಳಿ, ನಾನು ಹೇಳಿದಂತಹ ವಿಷಯಗಳ ಬಗ್ಗೆ ಮಂತ್ರಿಗಳು ಉತ್ತರ ಕೊಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House has to rise by 12-30 P.M. The reply has to begin now. If the House is inclined to sit longer, I may give chances to a few others.

Sri VEERENDRA PATIL.—We can sit up to one of the clock.

11-30 A.M.

†ಶ್ರೀ ಸಂಜೀವನಾಥ ಐಕಲ (ಸುರತ್‌ಕಲ್).—ಮಾನ್ಯ ಸಭಾಪತಿಗಳೇ, ನಾನು ಪಬ್ಲಿಕ್ ವರ್ಕ್ಸ್ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುತ್ತಾ, ಮೊದಲು ಕೇಂದ್ರ ಸರ್ಕಾರ ಮತ್ತು ಪ್ರಾಂತ್ಯ ಸರ್ಕಾರ ಸೇರಿ ಸಾಧಾರಣವಾಗಿ 15-20 ಕೋಟಿ ರೂಪಾಯಿಗಳ ಅಂದಾಜು ಮಾಡಿ ಈಗ 27 ಕೋಟಿ ರೂಪಾಯಿಗಳ ಅಂದಾಜನ್ನು ಮಾಡಿರುವ ಮಂಗಳೂರಿನ ಬೃಹತ್ ಯೋಜನೆಯ ಬಗ್ಗೆ ಮಾತನಾಡುವುದಕ್ಕೆ ನಾನು ಇಚ್ಛಿಸುತ್ತೇನೆ. ಇದರ ಬಗ್ಗೆ ಸರ್ಕಾರ ಏತಕ್ಕೆ ಹೀಗೆ ಮಾಡಬೇಕಾಗಿತ್ತು ? ಮಂಗಳೂರಿನ ಬಂದರಿನ ನಿವೇಶನದ ಆಯ್ಕೆ ಒಂದು ದುರಂತದ ಕಥೆ. ಪ್ರಕೃತಿಯ ಅನುಕೂಲತೆಗಳು ಇಲ್ಲದೆ ಇರುವ ಸ್ಥಳದಲ್ಲಿ ಬಂದರು ಆಗಿದೆ. ಮಂಗಳೂರು ಪಣಂಬೂರು ಬಂದರಿಗೆ 1,200 ಎಕರೆ ಜಮೀನು ಸ್ವಾಧೀನವಾಗಿದೆ. ಆದರೆ ಆ ಬಂದರಿನ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. 1967-68ನೇ ಇಸವಿಯ ಒಳಗಾಗಿ ಈ ಬಂದರಿನ ಕೆಲಸ ಮುಗಿಯಬಹುದು ಎಂದು ಆಶ್ವಾಸನೆಯನ್ನು ಕೊಟ್ಟಿದ್ದ ಅಧಿಕಾರಿಗಳು ಈಗ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. 1971ನೇ ಇಸವಿಯ ವೇಳೆಗೆ ಆ ಕಾರ್ಯ ಆಗುತ್ತದೋ ಇಲ್ಲವೋ ಎನ್ನುವ ಅಭಿಪ್ರಾಯ ತಿಳಿದು ಬಂದಿದೆ. ಏತಕ್ಕೆ ಆರೀತಿ ಅಲ್ಲಿ ಕೆಲಸ ನಡೆಯುತ್ತದೆ ಎನ್ನುವುದು ತಿಳಿಯದೇ ಹೋಗಿದೆ. ಹಾರ್ಬರ್ ಚಾನಲ್ ಕೆಲಸ ಆಗಬೇಕಾಗಿರುವುದು ಇದುವರೆಗೂ ಪ್ರಾರಂಭವಾಗಿಲ್ಲ. ಅಲ್ಲಿ ಇನ್ನು ಕೆಲಸ ಪ್ರಾರಂಭವಾಗದೆಯೇ ಸಾಧಾರಣವಾಗಿ ಒಂದು ಕೋಟಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ. ಅಡ್ಮಿನಿಸ್ಟ್ರೇಟೀವ್ ಸ್ಟಾಫಿಗೆ ಮತ್ತು ಅಫೀಸಿಗೋಸ್ಕರ ಕೆಲವು ಕ್ವಾರ್ಟರುಗಳನ್ನು ಕಟ್ಟಿಸಿದ್ದಾರೆ. 27 ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಯೋಜನೆ ಏನಿದೆ ಅದರ ಬಗ್ಗೆ ಸಾಧಾರಣವಾಗಿ ಇಷ್ಟರವರೆಗೆ ಹಾರ್ಬರ್ ಚಾನಲ್ ಎಲ್ಲಿ ಮಾಡಬೇಕು, ಎನ್ನುವ ಬಗ್ಗೆ ಗ್ರೌಂಡಿನ ಲೇಔಟ್ 'ಏನಿದೆ ಅದು ಇನ್ನೂ ಅಖೈರು ತೀರ್ಮಾನ ಆಗಿಲ್ಲ. ಇದುವರೆಗೆ ಹಾರ್ಬರ್ ಚಾನಲ್ 3 ಕಡೆ ಬದಲಾವಣೆ ಆಯಿತು. ಇಷ್ಟೊಂದು ದೊಡ್ಡ ಬೃಹತ್ ಯೋಜನೆಯ ವಿಷಯದಲ್ಲಿ ಟೆಕ್ನಿಕಲ್ ಇಂಜಿನಿಯರ್ಸ್ ಮತ್ತು ಎಕ್ಸ್‌ಪರ್ಟುಗಳನ್ನು ಕನ್‌ಸಲ್ಟ್ ಮಾಡುವುದರಲ್ಲಿ ತಪ್ಪು ಏನಿದೆ ? ಇದು ಸಾಧಾರಣವಾಗಿ 27 ಕೋಟಿಯಿಂದ 50 ಕೋಟಿಯವರೆಗೆ ಇದು ಅಖೈರಾಗುವ ವೇಳೆಗೆ ಬರುತ್ತದೆ. ಇಂಥಾ ಬೃಹತ್ ಯೋಜನೆಯ ಹಾರ್ಬರ್ ಚಾನಲ್, ರೈಲ್ವೆ ವಾರ್ಫ್ ಲೇಔಟ್ ಮಾಡುವಾಗ ಎಕ್ಸ್‌ಪರ್ಟ್‌ಗಳ ಸಲಹೆಯನ್ನು ತೆಗೆದುಕೊಳ್ಳುವುದರಲ್ಲಿ ತಪ್ಪೇನು ಇಲ್ಲ ಎಂದು ನಾನು ಸೂಚಿಸುತ್ತೇನೆ. ಇದರಲ್ಲಿ ಏನೋ ಒಂದು ರಾಜಕೀಯ ನಡೆಯುತ್ತಿದೆ. ಎಂದು ತಿಳಿದುಬರುತ್ತದೆ. ಅಡ್ಮಿನಿಸ್ಟ್ರೇಷನ್ ಆಫೀಸರ್ರು ಚೀಫ್ ಇಂಜಿನಿಯರು ಮತ್ತು ಎಗ್ಜಿಕ್ಯುಟೀವ್ ಇಂಜನಿಯರುಗಳಲ್ಲಿ ಏನೋ ಒಂದು ರಾಜಕೀಯ ಭಿನ್ನಾಭಿಪ್ರಾಯ ಬಂದಿದೆ. ಈ ರಾಜಕೀಯ ಭಿನ್ನಾಭಿಪ್ರಾಯ ಹೋಗುವಂತೆ ಮಾಡಬೇಕು. ಈ ಬಂದರಿನ ಕೆಲಸವನ್ನು ಆದಷ್ಟು ಬೇಗ ಮಾಡುವ ಹಾಗೆ ಪ್ರಾಂತ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಹೊಸದಾಗಿ ಮಂಗಳೂರಿನಲ್ಲಿ 1,500 ಎಕರೆ ಜಮೀನನ್ನು ಏನು ಸ್ವಾಧೀನ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆಯೋ ಅದು ಅಷ್ಟು ಸಮಂಜಸವಾಗಿಲ್ಲ. ಅಲ್ಲಿ ಹೊಸ ಕೈಗಾರಿಕೆ ಎಸ್ಟೇಟನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಡುತ್ತಾರೆಂದು ತಿಳಿದುಬಂದಿದೆ. ಆ ಜಮೀನು ಕೃಷಿಗೆ ಯೋಗ್ಯವಾದ ಜಮೀನು. ಅದಕ್ಕೋಸ್ಕರ ಆ ಜಮೀನನ್ನು ಬಿಟ್ಟು ಬೇರೆ ಕಡೆ ಕೈಗಾರಿಕೆಗಳಿಗೆ ಯೋಗ್ಯವಾದ ಇಂಡಿಯಾ, ಹೊಸಪೇಟೆ, ಕಾಪೂರು, ತಳವಾರ, ಪೆರುಮೂಜೆ ಮತ್ತು ಕಟ್ಟೇಪುರ ಮುಂತಾದ 8—9 ಗ್ರಾಮಗಳಿಗೆ ಸೇರಿದಂತಹ ಸುಮಾರು 5,700 ಎಕರೆ ಜಮೀನನ್ನು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಸರ್ಕಾರದವರು ಸ್ವಾಧೀನ ಮಾಡಿಕೊಂಡಿರತಕ್ಕ ಜಮೀನು ಏನಿದೆ ಅದರಲ್ಲಿ ಸುಮಾರು 600—700 ಎಕರೆ ಜಮೀನಿನಲ್ಲಿ 3 ಬೆಳೆಗಳನ್ನು ತೆಗೆಯಬಹುದು. ಅಂಥಾ ಜಮೀನನ್ನು ಕೇಂದ್ರ ಸರ್ಕಾರದವರು ಸ್ವಾಧೀನ ಮಾಡಿಕೊಂಡಿದ್ದಾರೆ. ಈ ಬಗ್ಗೆ ಪಾರ್ಲಿಮೆಂಟಿನಲ್ಲಿ ಎಚ್. ವಿ. ಕಾಮತ್ ಅವರು ಪ್ರಶ್ನೆಯನ್ನು ಕೂಡ ಕೇಳಿದ್ದಾರೆ. ಸರ್ಕಾರದವರು ಸ್ವಾಧೀನ ಮಾಡಿಕೊಂಡಿರತಕ್ಕ ಜಮೀನಿನಲ್ಲಿ ಈಗಾಗಲೇ ರೈಲ್ವೆ ಮಾರ್ಗವನ್ನು ರಚಿಸುತ್ತಿದ್ದಾರೆ. ಅಲ್ಲಿ ಕೆಲಸ ಬಹಳ ಜೋರಾಗಿ ನಡೆಯುತ್ತದೆ. ಈಗ ಅಲ್ಲಿ ಯಾರು ಜಮೀನನ್ನು ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆಯೋ ಅವರಿಗೆ ಸೌಲಭ್ಯವನ್ನು ಒದಗಿಸಲು ಯಾವ ವ್ಯವಸ್ಥೆಯನ್ನೂ ಸರ್ಕಾರದವರು ಮಾಡಿಲ್ಲ ಎಂದು ನಾನು ಬಹಳ ವಿಷಾದದಿಂದ ತಿಳಿಸುತ್ತೇನೆ. ಆ ಬಂದರಿನ ಹತ್ತಿರ ಅನೇಕ ಜನ ಕೆಲಸಗಾರರಿಗೆ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಆದರೆ ಜಾಗವನ್ನು ಕಳೆದುಕೊಂಡವರಿಗೆ ಮಾತ್ರ ಯಾವ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಆದ್ದರಿಂದ ಸರ್ಕಾರದವರು ಅಲ್ಲಿ ಜಾಗವನ್ನು ಕಳೆದುಕೊಂಡವರಿಗೆ ಮನೆಗಳನ್ನು

ಕಟ್ಟಿಸಿಕೊಳ್ಳುವುದಕ್ಕೆ ಬೇರೆ ಕಡೆ ಜಾಗವನ್ನು ಕೊಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಪಣಂಬೂರ್ ನಿವೇಶನದ ಬಗ್ಗೆ ಮತ್ತು ಕಾಶಿಪಾಳ್ಯ ಬಂದರಿನ ನಿವೇಶನದ ಬಗ್ಗೆ ಅನೇಕ ಸಾರಿ ಪಾರ್ಲಿಮೆಂಟರಿ ಸೆಕ್ರೆಟರಿಗಳ ಹತ್ತಿರ, ಮಂತ್ರಿಗಳ ಹತ್ತಿರ ಹೇಳಿದ್ದೇನೆ. ಆ ಪ್ರದೇಶದಲ್ಲಿ ಜನಗಳಿಗೆ ಬಹಳ ಅನಾನುಕೂಲವಾಗಿದೆ. ಅವರಿಗೆ ಕುಡಿಯುವುದಕ್ಕೆ ನೀರೂ ಸಿಕ್ಕುತ್ತಾ ಇಲ್ಲ. ಅಲ್ಲಿ ದೊಡ್ಡ ದೊಡ್ಡ ಬಾವಿಗಳನ್ನೇನೋ ತೋಡಿದ್ದಾರೆ. ಆದರೆ ಆ ಬಾವಿಗಳಲ್ಲಿ ನೀರು ಮಾತ್ರ ಇಲ್ಲ. ಯಾರಾದರೂ ಬಾವಿಗೆ ನೀರು ತಂದು ಹಾಕಿದರೆ ನೀರು ಇರುತ್ತದೆ. ಮಂತ್ರಿಗಳು ಯಾರಾದರೂ ಆ ಪ್ರದೇಶಕ್ಕೆ ಬಂದಾಗ ಅವರು ಬರುವುದಕ್ಕೆ ಮುಂಚೆ ಲಾರಿಗಳಲ್ಲಿ ನೀರನ್ನು ತಂದು ಆ ಬಾವಿಗಳಿಗೆ ಹಾಕುತ್ತಾರೆ. ಮಂತ್ರಿಗಳಿಗೆ ಬಾವಿಯಲ್ಲಿ ನೀರು ಇದೆಯೆಂದು ತೋರಿಸುತ್ತಾರೆ. ಇದು ಒಂದು ವಿಚಿತ್ರವಾದ ಸಂಗತಿ.

ನಮ್ಮ ಪ್ರದೇಶದಲ್ಲಿ ಬಾವಿಗಳಿಗೆ ಎಲೆಕ್ಟ್ರಿಕ್ ಕನೆಕ್ಷನ್ ಸಿಕ್ಕದೆ ಅದು ಬಹಳ ಹಿಂದುಳಿದಿದೆ. ಅದರ ಬಗ್ಗೆ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೂಡ ಕೊಟ್ಟಿದ್ದೇನೆ. ಅದು ಅಡ್ಮಿಟ್ ಆಗಬಹುದು ಎಂದು ನಾನು ಭಾವಿಸುತ್ತೇನೆ. ನಿಜವಾಗಿಯೂ ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದೆ ಜನಗಳು ಬಹಳ ತೊಂದರೆಪಡುತ್ತಿದ್ದಾರೆ ಎನ್ನುವ ವಿಚಾರವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಪೋರ್ಟ್‌ಗೋಸ್ಕರ ಮೊದಲು ತಣ್ಣೀರು ಬಾವಿಯನ್ನು ಆರಿಸಿದ್ದರು. ಅನಂತರ ಜನಗಳು ಬೇಕಂಪಾಡಿಯ ಹತ್ತಿರ ಬೇರೆ ಜಾಗವನ್ನು ತೋರಿಸಿ ಅಲ್ಲಿಗೆ ಬದಲಾವಣೆ ಮಾಡಬೇಕೆಂದು ಕೇಳಿಕೊಂಡಿದ್ದರು. ಅಲ್ಲಿ ಬಡಜನರಿಗೆ ಸೇರಿದಂತಹ ಸುಮಾರು 60–70 ಎಕರೆ ಜಮೀನು ಹೋಗುತ್ತದೆ, ಅದಕ್ಕಾಗಿ ಆ ಜಾಗ ಬೇಡ ಎಂದು ಬಿಡಿಸಿದ್ದರು. ಈಗ ಮತ್ತೆ ತಣ್ಣೀರು ಬಾವಿಗೆ ಸ್ಥಳಾಂತರ ಮಾಡಬೇಕೆಂದು ಆಲೋಚನೆ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಈ ವಿಷಯದಲ್ಲಿ ಪ್ರೊಟೆಸ್ಟ್ ಮನವಿಗಳೂ ಸಹ ಸರ್ಕಾರಕ್ಕೆ ಬಂದಿರಬಹುದು. ಆದ್ದರಿಂದ ಸರ್ಕಾರದವರು ಈ ಬಗ್ಗೆ ಸೂಕ್ತ ರೀತಿಯಲ್ಲಿ ವ್ಯವಹರಿಸಬೇಕು. ಇನ್ನು ನಾನು ಹೇಳಬೇಕಾದರೆ ಮಂಗಳೂರು ಬಂದರಿನ ಒಂದು ಬೃಹತ್ ಯೋಜನೆಯನ್ನು ಕೈಗೊಂಡು ಅದರ ನಿವೇಶನವನ್ನು ಪುನರಾಯ್ಕೆ ಮಾಡಿದ್ದಾರೆ. ಅಲ್ಲಿ ಯಾವ ಒಂದು ಕೆಲಸ ಆಗಬೇಕಾಗಿತ್ತೋ ಅದು ಇನ್ನೂ ಆಗಿಲ್ಲ. ಯೋಜನೆಯು ತಯಾರಾಗಿದ್ದರೂ ಕೂಡ ಅಲ್ಲಿ ಅರ್ಧಂಬರ್ಧ ಕೆಲಸ ಆಗಿದೆ. ಇದೇರೀತಿನಲ್ಲಿ ಆ ಬಂದರಿನ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರೆ, ಇನ್ನು 10ವರ್ಷಗಳಾದರೂ ಆ ಬಂದರಿನ ಕೆಲಸವನ್ನು ಪೂರ್ತಿ ಮಾಡುವುದಕ್ಕಾಗುವುದಿಲ್ಲ. ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು ಎಂದು ತಾವು ಹೇಳುವುದಾದರೆ, ಹಾಗೆಯೇ ಅದಕ್ಕೆ ಪ್ರಾಂತ ಸರ್ಕಾರದವರ ಸಂಬಂಧವೂ ಇದೆ. ಪ್ರಾಮುಖ್ಯವಾಗಿ ಅಡ್ಮಿನಿಸ್ಟ್ರೇಟೀವ್ ಅನುಕೂಲತೆ ಏನಿದೆ ಅದನ್ನು ಮಾಡಿಕೊಡುವುದು ಪ್ರಾಂತ ಸರ್ಕಾರದವರ ಜವಾಬ್ದಾರಿಯಾಗಿದೆ. ಈಗ ಆ ಬಂದರಿಗಾಗಿ ಬೇಕಾಗಿರತಕ್ಕ 1,500 ಎಕರೆ ಭೂಮಿಯನ್ನು ಸಂಪೂರ್ಣವಾಗಿ ಸ್ವಾಧೀನ ಮಾಡಿಕೊಂಡಿದ್ದಾಗಿದೆ. ಮತ್ತು ಅದನ್ನು ಕೇಂದ್ರ ಸರ್ಕಾರದವರ ವಶಕ್ಕೆ ಬಿಟ್ಟು ಕೊಟ್ಟಿದ್ದಾರೆಂದು ಕಾಣುತ್ತದೆ. ಇನ್ನು ಆದಷ್ಟು ಬೇಗ ಆ ಬಂದರಿನ ಕಾರ್ಯ ಮುಂದುವರಿಯುವಂತೆ ಒತ್ತಾಯ ಮಾಡಿ ಕೇಂದ್ರ ಸರ್ಕಾರದವರಿಂದ ಆ ಕೆಲಸವನ್ನು ಮಾಡಿಸತಕ್ಕದ್ದು ಪ್ರಾಂತ ಸರ್ಕಾರದವರ ದೊಡ್ಡ ಜವಾಬ್ದಾರಿಯಾಗಿದೆ.

ಇನ್ನು ಎಲೆಕ್ಟ್ರಿಸಿಟಿ ಬಗ್ಗೆ ಮಾತನಾಡಬೇಕಾಗಿದೆ. ಹಿಂದೆ ನಮ್ಮ ಜಿಲ್ಲೆಯಮಟ್ಟಿಗೆ ಸುಮಾರು ಎರಡೂವರೆ ಕೋಟಿಯಷ್ಟು ಎಸ್ಟಿಮೇಟು ಮಾಡಿ ಇರಿಗೇಷನ್ನು ಪಂಪುಸೆಟ್ಟುಗಳನ್ನು ಕೊಡಲು ನೀರಾವರಿ ಯೋಜನೆಯ ಒಂದು ಸ್ಕೀಂ ಎಂದು ಮಾಡಿದ್ದರು. ಆದರೆ ಅದರ ಕೆಲಸ ಮಾತ್ರ ಆಗಲಿಲ್ಲ. ಇದರ ಬಗ್ಗೆ ಕೆಲಸ ಮಾಡುವುದೂ ಕೂಡ ಹಿಂದೆ ಬಿತ್ತು. ಈಗೇನೋ ನಮ್ಮಲ್ಲಿರುವ ವಿದ್ಯುಚ್ಛಕ್ತಿಯನ್ನು ನೆರೆಯ ರಾಜ್ಯಗಳಿಗೆ ಕೊಡಬೇಕೆಂದು ಹೇಳುವುದರಲ್ಲಿ ನನ್ನ ಆಕ್ಷೇಪಣೆ ಇಲ್ಲ. ಆದರೆ ಈ ರೀತಿಯಾಗಿ ನಮ್ಮಲ್ಲೇ ಉತ್ಪಾದನೆಯಾಗುತ್ತಿರುವ ವಿದ್ಯುಚ್ಛಕ್ತಿಯನ್ನು ನೆರೆ ರಾಜ್ಯಕ್ಕೆ ಕೊಡಬೇಕು ಎನ್ನುವ ಧೋರಣೆ ನೋಡಿದರೆ ನನಗೆ ನಮ್ಮ ಗ್ರಾಮದಲ್ಲಿ ಹೇಳುವ ಒಂದು ಜಾನಪದ ಗೀತೆ ಇಲ್ಲಿ ನೆನಪಿಗೆ ಬರುತ್ತಿದೆ. ಅದು ಹೀಗಿದೆ :—

ಉಡಿಸಿದರು ನೆರೆ ಮನೆಯ ಹೆಂಗಸಿಗೆ ಸೀರೆ
ತೊಡಿಸಿದರು ಅವಳ ಮೂಗಿಗೆ ನತ್ತು,
ಕೊಡಬೇಕು ಅವಳು ಹೇಳಿದಾಗ ಮುತ್ತು.

ಎನ್ನುವಂತೆ ಬಹುಶಃ ತಾವು ಇಲ್ಲಿ ಬರುವ ವಿದ್ಯುಚ್ಛಕ್ತಿಯನ್ನು ನೆರೆ ರಾಜ್ಯಗಳಿಗೆ ಕೊಡುತ್ತಾ ಹೋದರೆ ಮುಂದೆ ನೆರೆ ರಾಜ್ಯಗಳೂ ಹೆಚ್ಚು ಹೆಚ್ಚು ಕ್ರಯ ಕೊಡುತ್ತೇವೆ ಎಂದು ಹೇಳಿ ನೀವೂ

(ಶ್ರೀ ಸಂಜೀವನಾಥ ಐಕಳ)

ಕೊಡುತ್ತಾ ಹೋದರೆ ಮುಂದೆ ನಮಗೆ ಬೇಕಾದಾಗ ನಾವು ಉಪಯೋಗಿಸಿಕೊಳ್ಳಲು ಸಿಗುತ್ತೋ ಇಲ್ಲವೋ ಎನ್ನುವ ಶಂಕೆ ನನಗೆ ಬರುತ್ತಿದೆ. ನಮ್ಮಲ್ಲಿ ಉತ್ಪತ್ತಿಯಾದುದನ್ನೆಲ್ಲಾ ಬೇರೆಯವರಿಗೆ ಕೊಡಬೇಕು ಎನ್ನುವುದು ಸ್ವಾಗತಾರ್ಹವಲ್ಲ. ನೆರೆರಾಜ್ಯದವರು ಕ್ರಯ ಕೊಡುತ್ತಾರೆ, ಇದರಿಂದ ನಮಗೂ ಅನುಕೂಲವಾಗುತ್ತದೆ ಎಂದು ನೀವು ಈಗ ಕೊಡಬಹುದು. ಮುಂದೆ ಇನ್ನೂ ಹೆಚ್ಚು ಕೊಡಬೇಕೆಂದು ಕೇಳಿದರೆ ಆಗ ನಮಗೆ ಕಷ್ಟವಾಗಬಹುದು.

ಇನ್ನು ನಮ್ಮ ಕಡೆ ಬಂದರುಗಳು ಆಗಬೇಕು, ಸುರತ್ಕಲ್ ಇಂಜನೀಯರಿಂಗು ಕಾಲೇಜು ಕೆಲಸಗಳು ಹಾಗೂ ವೆಸ್ಟ್ ಕೋಸ್ಟು ರೋಡುಗಳ ಕೆಲಸ ಆಗಬೇಕೆಂದು ಹೇಳುತ್ತಲೇ ಬರುತ್ತಿದ್ದೇವೆ. ಅನೇಕ ಸಾರಿ ಹೇಳಿದರೂ ಇದರ ಬಗ್ಗೆ ಯಾವ ಕೆಲಸಗಳೂ ನಡೆದಿಲ್ಲ. ಅಲ್ಲದೆ ಕೆಲವು ಕಡೆಗಳಲ್ಲಿ ಭೂಮಿ ತೆಗೆದುಕೊಂಡು ನಿರ್ಗತಿಕರಾಗಿರುವವರಿಗೆ ಸರ್ಕಾರ ಬೇಗನೆ ಅವರಿಗೆ ತಕ್ಕ ಪರಿಹಾರ ಗಳನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಇನ್ನೂ ಯಾವ ತೀರ್ಮಾನವೂ ಆಗದೆ, ಅಲ್ಲಿರುವ ಜನಕ್ಕೆ ಬಹಳ ತೊಂದರೆಗಳಾಗುತ್ತಿವೆ. ನಮ್ಮ ಅಧಿಕಾರಿಗಳೂ ಕೂಡ ಇದರ ಬಗ್ಗೆ ಬರೆದಿದ್ದಾರೆ. ಜಾಗಗಳನ್ನು ಕಳೆದುಕೊಂಡಿರುವ ಈ ಜನರಿಗೆ ಬೇಗನೆ ಪರಿಹಾರಗಳನ್ನು ಕೊಡುವುದು ಅಗತ್ಯ. ಇಲ್ಲಿ ಸರ್ಕಾರ ತೋರಿಸುತ್ತಿರುವ ವಿಳಂಬ ಧೋರಣೆಯಿಂದಾಗಿ ಇಲ್ಲಿನ ಎಷ್ಟೋ ಕೆಲಸಕಾರ್ಯಗಳು ಕುಂಠಿತವಾಗುತ್ತಿವೆ. ಆದಷ್ಟು ಶೀಘ್ರವಾಗಿ ಇಲ್ಲಿನ ಜನಕ್ಕೆ ಪರಿಹಾರ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಇನ್ನಿತರ ಸ್ಥಳಗಳಲ್ಲಿ ಸರ್ಕಾರಿ ಆಫೀಸುಗಳಿ ಗಾಗಿ ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಂಡಿರುತ್ತಾರೆ. ಬಹುಶಃ ಸರ್ಕಾರಕ್ಕೆ ಬಹಳ ಹೆಚ್ಚು ಮೊತ್ತದಲ್ಲಿ ಬಾಡಿಗೆಯನ್ನು ವರ್ಷವರ್ಷವೂ ಕೊಡಬೇಕಾಗಿ ಬರುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸರ್ಕಾರಿ ಆಫೀಸುಗಳಿಗಾಗಿ ಸುಮಾರು 16 ಸಾವಿರ ರೂಪಾಯಿಗಳಷ್ಟು ಒಂದು ತಿಂಗಳಿಗೆ ಸರ್ಕಾರ ಬಾಡಿಗೆ ಕೊಡುತ್ತಿದೆ ಎಂದು ನಾನು ಕೇಳಿದ್ದೇನೆ. ಇದಕ್ಕಾಗಿ ಮುಖ್ಯವಾದ ಕಚೇರಿಗಳನ್ನು ಕಟ್ಟುವುದಕ್ಕಾಗಿ ಮಂಗಳೂರಿನಲ್ಲಿ ಹಾಗೂ ಇತರ ಕಡೆಗಳಲ್ಲಿಯೂ ಸರ್ಕಾರವೇ ಕಟ್ಟಡಗಳನ್ನು ಕಟ್ಟಿದ್ದರೆ ನಿಜವಾಗಿಯೂ ಸರ್ಕಾರಕ್ಕೆ ಎಷ್ಟೋ ಬಾಡಿಗೆ ಹಣ ಉಳಿಯುತ್ತದೆ. ಈಗ ಕೊಡುತ್ತಿರುವ ಬಾಡಿಗೆ ಮೊತ್ತವನ್ನೂ ಕಡಿಮೆ ಮಾಡಬಹುದು. ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ನಮ್ಮ ಬೆಂಗಳೂರಿನಲ್ಲಿರುವಂತೆ ವಿಧಾನ ಸೌಧಗಳನ್ನು ಕಟ್ಟಬೇಕು. ಇಷ್ಟು ಭಾರಿ ವೆಚ್ಚದ ವಿಧಾನಸೌಧ ವನ್ನಲ್ಲ, ಕಡಿಮೆ ಖರ್ಚಿನಲ್ಲಿ ಆಗುವಂತಹ ಸಣ್ಣ ವಿಧಾನಸೌಧಗಳನ್ನು ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಮಾಡಬೇಕೆಂದು ಇಲ್ಲಿ ಹೇಳುತ್ತೇನೆ. ಇದನ್ನು ಪರಿಶೀಲನೆ ಮಾಡುವುದು ಯೋಗ್ಯವಾಗಿದೆ.

ಇನ್ನು ಕಾಟಿಪಲ್ಲಿಯಲ್ಲಿ ನಿರ್ಗತಿಕರಾಗಿರುವವರಿಗೆ ಅವರೇ ಸೊಸೈಟಿಗಳನ್ನು ಮಾಡಿಕೊಂಡು ಬಂದರೆ ಅವರಿಗೆ ಐದು ಲಕ್ಷ ರೂಪಾಯಿಗಳಷ್ಟು ಸಹಾಯವನ್ನು ಕೊಡುತ್ತೇವೆಂದು ಸರ್ಕಾರ ಆಶ್ವಾಸನೆ ಕೊಟ್ಟಿತ್ತು. ಈ ಹಿಂದೆ ಇಲ್ಲಿಗೆ ಬಂದಿದ್ದ ಎಲ್ಲ ಮಂತ್ರಿಗಳೂ ಹಾಗೂ ಮುಖ್ಯಮಂತ್ರಿ ಗಳೂ ಕೂಡ ಇವರ ಸ್ಥಿತಿ ನೋಡಿ ಈ ಸಾಲವನ್ನು ಕೊಡಿಸುತ್ತೇವೆ ಎಂದು ಎಲ್ಲರೂ ಆಶ್ವಾಸನೆ ಕೊಟ್ಟು ಬಂದರು. ಆದರೆ ಆ ಆಶ್ವಾಸನೆ ಇನ್ನೂ ಕಾರ್ಯರೂಪಕ್ಕೆ ಬರಲಿಲ್ಲ. ಹೌಸಿಂಗ್ ಸೊಸೈಟಿ ಮಾಡಿದರೆ ಕೊಡುತ್ತೇವೆ ಎಂದು ಹೇಳಿದಂತೆ ಅವರು ಅಂ[illegible]ಕ ಸಹಕಾರ ಸಂಘಗಳನ್ನು ಮಾಡಿಕೊಂಡಿ ದ್ದರೂ ಇದುವರೆಗೂ ಸರ್ಕಾರ ಕೊಟ್ಟ ಆಶ್ವಾಸನೆಯಂತೆ ಅವರಿಗೆ ಹಣ ದೊರಕಲಿಲ್ಲ, ಈಗ ನೀವು ಹಣ ಮಂಜೂರು ಮಾಡಿದರೆ ಅದೂ ಅವರ ಕೈಗೆ ಸಿ[illegible]ದಿಲ್ಲ. ಇದರಲ್ಲಿ ಎಷ್ಟೋ technical troubles ಇವೆ. ಇವೆಲ್ಲಾ ಮುಗಿಯುವುದರೊಳಗೆ ಈ ವರ್ಷ[illegible] ಆಖೈರಾಗುತ್ತದೆ. ಆಗ ಹಣ ಮಂಜೂ ರಾದರೂ ಅದು ಲ್ಯಾಪ್ಸ್ ಆಗುತ್ತದೆ. ಇದಕ್ಕಾಗಿ ಇನ್ನೂ 5—6 ತಿಂಗಳು ಅವರು ಕಾಯಬೇಕಾಗಿ ಬರುತ್ತದೆ. ಆದುದರಿಂದ ಸರ್ಕಾರದವರು ನಿಗದಿ ಮಾಡಿರುವಂತೆ ಐದು ಲಕ್ಷದಷ್ಟು ಹಣವನ್ನು ಕಾಟೀಪಲ್ಲಿ ನಿರ್ಗತಿಕರಿಗೆ ಕೊಟ್ಟು ಸಹಾಯ ಮಾಡಬೇಕೆಂದು ಕೇಳುತ್ತೇನೆ. ಈಗ ಇವರು ವಾಸಿ ಸುವ ಷೆಡ್ಡುಗಳನ್ನು ನಮ್ಮ ಮಾನ್ಯ ಮಂತ್ರಿಗಳೂ ಕೂಡ ಹೋಗಿ ನೋಡಿಕೊಂಡು ಬಂದಿದ್ದಾರೆ. ಆದರೂ ಅವರಿಗೆ ಇನ್ನೂ ಮನಸ್ಸು ಬಂದಿಲ್ಲ. ಕೂಡಲೇ ಐದು ಲಕ್ಷದಷ್ಟು ಹಣವನ್ನು ಕೊಡಿಸ ಬೇಕೆಂದು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ಅಧ್ಯಕ್ಷರೇ, ಸಣ್ಣ ನೀರಾವರಿ ಬಾಬಿಗೆ ಹೆಚ್ಚು ಹಣ ಕೊಡಬೇಕಾಗಿತ್ತು ಎಂದು ಹೇಳುತ್ತಾ ಅದನ್ನು ಸರ್ಕಾರದವರು ಕಡಿಮೆ ಮಾಡುತ್ತಾ ಬಂದಿದ್ದಾರೆ, ಈ ರೀತಿ ಕಡಿಮೆಮಾಡುತ್ತ ಹೋದರೆ ಇದರಿಂದ ಜನಗಳಿಗೆ ತೊಂದರೆಯಾಗುವುದಿಲ್ಲವೇ ? ದೊಡ್ಡ

ನೀರಾವರಿ ಯೋಜನೆಗಳಿಗಿಂತ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ಕೊಡಬೇಕೆಂದು ಹೇಳುವುದನ್ನು ಕೈಬಿಟ್ಟಿದ್ದಾರೆ. ಇದನ್ನು ಹೆಚ್ಚಿಸಬೇಕೆಂದು ನಾನು ಸಲಹೆ ಕೊಡುತ್ತೇನೆ.

ಇನ್ನು ದೊಡ್ಡ ನೀರಾವರಿ ಯೋಜನೆಗಳು ಎಂದು ನೀವು ಮಾಡುತ್ತ ಇರುವುದರಲ್ಲಿ ಅಲ್ಲಿ ಕೆಲವು ಅಧಿಕಾರಿಗಳನ್ನಿಟ್ಟು ಅವರುಗಳಿಗೆಲ್ಲಾ ಸಂಬಳ ಕೊಡುತಿದ್ದೀರೇ ವಿನಾ ಅದರಿಂದ ಯಾವ ಪ್ರಗತಿಯೂ ಕಾಣುತ್ತಿಲ್ಲ. ಹತ್ತಾರು ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಮಾಡಬೇಕೆಂದು ಅದಕ್ಕೆ ಬೇಕಾಗುವ ಅಧಿಕಾರಿಗಳನ್ನು ನೇಮಿಸಿಕೊಂಡು ಕೆಲಸ ಮಾಡಬೇಕೆಂದು ಹೊರಟರೆ ನೀವು ಯಾವ ಕೆಲಸವನ್ನೂ ಪೂರ್ತಿ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಬದಲಾಗಿ ಸ್ವಲ್ಪವೇ ಕೆಲಸಗಳನ್ನು ತೆಗೆದುಕೊಂಡು ಅವನ್ನು ಕಾರ್ಯಗತ ಮಾಡುವಂತೆ ಮಾಡಿದರೆ ಏನೋ ದುರ್ಭಿಕ್ಷ ಕಾಲದಲ್ಲಿ ಜನ ಸ್ವಲ್ಪವಾದರೂ ಬದುಕಿಕೊಳ್ಳುತ್ತಾರೆ. ಅದರಂತೆ ಮಾಡಲು ತಕ್ಕ ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ವರ್ಷದಲ್ಲಿ ಒಂಬತ್ತು ತಿಂಗಳಲ್ಲಿ ಸಣ್ಣ ನೀರಾವರಿ ಕೆಲಸಗಳನ್ನು ಮಾಡಲು ದುಡ್ಡೇ ಇರುವುದಿಲ್ಲ. ಕಡೆಗೆ 10 ಅಥವ 11ನೇ ತಿಂಗಳಲ್ಲಿ ನೀವು ದುಡ್ಡು ಖರ್ಚುಮಾಡಿ ಎಂದು ಕೊಟ್ಟರೆ ಅದನ್ನು ಖರ್ಚು ಮಾಡುವುದಕ್ಕಾಗಲಿಲ್ಲ ಎಂದು ವರ್ಷದ ಕೊನೆಯಲ್ಲಿ ಅಧಿಕಾರಿಗಳು ಸರೆಂಡರು ಮಾಡಬೇಕೆಂದು ಇತ್ತೀಚೆಗೆ ಒಂದು ಸರ್‌ಕ್ಯುಲರನ್ನು ಕಳುಹಿಸಿದ್ದಾರೆಂದು ತಿಳಿಯಿತು. ದುಡ್ಡು ಇದ್ದರೂ ಅದನ್ನು ಸಕಾಲದಲ್ಲಿ ಕೊಡದೇ ಹೋದರೆ ಅದರಿಂದೇನು ಉಪಯೋಗವಾಗುತ್ತದೆ? ಸಣ್ಣ ನೀರಾವರಿ ಯೋಜನೆಗಳಿಗಾಗಿ ಹೆಚ್ಚು ಹಣ ಕೊಡಬೇಕೆಂದು ಏರ್ಪಾಡು ಮಾಡಿದರೂ ಅದಕ್ಕೆ ತಕ್ಕಂತೆ ಅಧಿಕಾರಿಗಳಿಗೆ ಹಣ ಕೊಡದೇ ಹೋದರೆ ಅವರು ನೀರಾವರಿ ಕೆಲಸಗಳನ್ನು ಮಾಡುವುದಾದರೂ ಹೇಗೆ ? ಹಳೆಯ ಕೆಲಸಗಳನ್ನು ಬಿಟ್ಟು ಹೊಸ ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುವುದು ಯಾವ ನ್ಯಾಯ ? ಅಧಿಕಾರಿಗಳಿಗೆ ಹೆಚ್ಚು ಹಣ ಕೊಟ್ಟು ಅವರನ್ನೇ ಎಸ್ಟಿಮೇಟುಗಳನ್ನು ತಯಾರುಮಾಡಿ ಎಂದು ಹೇಳಬಹುದು.

ಈಗ ನೀವು ಇನ್‌ವೆಸ್ಟಿಗೇಷನ್ನು ಡಿವಿಜನ್ನುಗಳು ಎಂದು ಬೇರೆ ಮಾಡಿದ್ದೀರಿ. ಇವರುಗಳು ಆಯಾ ಸ್ಥಳದಲ್ಲಿರುವ ಕೆಲಸಗಳ ಬಗ್ಗೆ ನೋಡಿ ಯಾವ ಯಾವುದಕ್ಕೆ ಅಂದಾಜುಗಳನ್ನು ತಯಾರು ಮಾಡಬಹುದು ಎಂದು ನೋಡಿ ಇವರಿಗೆ ಈ ಕೆಲಸಗಳನ್ನು ವಹಿಸಿದ್ದೀರಿ. ಈಗ ಇಲಾಖೆಯಲ್ಲಿರುವ ಜನರೇ ಬೇಕಾಗುವ ಎಸ್ಟಿಮೇಟುಗಳನ್ನು ತಯಾರು ಮಾಡುವುದಕ್ಕೆ ಆಗುವುದಿಲ್ಲವೇ ? ಇದಕ್ಕಾಗಿ ಬೇರೆ ಒಂದು ಇಲಾಖೆ ಮಾಡಿ ಆದಕ್ಕೆ ಸರ್ಕಾರದ ಹಣವನ್ನೇಕೆ ಖರ್ಚುಮಾಡಬೇಕು. ಇದು ಸರಿಯೇ ? ಈಗ ತಾವು ಮಾಡುತ್ತಿರುವ ಇನ್‌ವೆಸ್ಟಿಗೇಷನ್ನು ಸಬ್ ಡಿವಿಜನ್ನಿಗೆ ಎಂತಹ ಅಧಿಕಾರಿಗಳನ್ನು ನೇಮಿಸುತ್ತಿದ್ದೀರಿ ಎಂದರೆ, ಯಾರು ನಿಮಗೆ ಆಗುವುದಿಲ್ಲವೋ ಯಾರು ಸರಿಯಾಗಿ ಕೆಲಸ ಮಾಡುತ್ತಿಲ್ಲವೋ ಅಂತಹವರನ್ನು ರೆಗ್ಯುಲರು ಡಿವಿಜನ್ನುಗಳಿಂದ ತೆಗೆದು ಇಲ್ಲಿಗೆ ವರ್ಗಾಯಿಸುತ್ತೀರಿ. ಆದರೆ ಅಂತಹವರು ಏನು ಮಾಡುತ್ತಾರೆಂದರೆ, ಅಲ್ಲಿ ಏನೂ ಕೆಲಸಗಳನ್ನು ಮಾಡುವುದಿಲ್ಲ. ಅವರಿಗೆ ಗೊತ್ತು ಯಾವ ಮಂತ್ರಿಗಳನ್ನು ಹಿಡಿದರೆ ತಮ್ಮ ಕೆಲಸ ಆಗುತ್ತೆ ಎಂದು, ಅವರನ್ನು ಅನುಸರಿಸಿಕೊಂಡು ಪುನಃ ವರ್ಗ ಮಾಡಿಸಿಕೊಂಡು ಹೋಗಲು ಬೇಕಾದ ಪ್ರಯತ್ನಗಳನ್ನು ಮಾಡುತ್ತಾರೆ. ಆದುದರಿಂದ ನಾನು ಹೇಳುವುದು, ಇಂತಹ ಸ್ಪೆಷಲ್ ಇನ್‌ವೆಸ್ಟಿಗೇಷನ್ನು ಸಬ್ ಡಿವಿಜನ್ನುಗಳು ಎಂದು ಮಾಡುವುದಕ್ಕೆ ಹೋಗಬೇಡಿ. ಇರುವ ಡಿವಿಜನ್ನಿನಲ್ಲಿರುವ ಅಧಿಕಾರಿಗಳೇ ಈ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಾರೆ. ಈಗಿರುವ ಜನರಿಗೇ ಕೆಲಸವಿಲ್ಲ. ಇನ್ನು ಬೇರೆ ಡಿವಿಜನ್ನು ಮಾಡಿ ಅಲ್ಲಿಗೆ ಏಕೆ ಬೇರೆ ಅಧಿಕಾರಿಗಳನ್ನು ಹಾಕಬೇಕು ? ಇದನ್ನು ಬಿಟ್ಟರೆ ಇದರಿಂದ ಸರ್ಕಾರಕ್ಕೆ ಖರ್ಚೂ ಕೂಡ ಉಳಿಯುತ್ತದೆ. ಇದರ ಕಡೆಗೆ ಸರಕಾರ ಲಕ್ಷ್ಯ ಕೊಡಬೇಕು. ಅಲ್ಲದೆ ಕೆಲಸ ಮಾಡುವ ಇಂಜನೀಯರುಗಳಿಗೆ ಆಯಾ ಭಾಗದ ಕೆಲಸಗಳನ್ನು ನೋಡಿ ಅಂದಾಜುಗಳನ್ನು ತಯಾರು ಮಾಡಲು ಅವಕಾಶ ಕೊಡಬೇಕು. ಹಾಗಿಲ್ಲದೆ ಅವರು ಮಾಡಿದಂತಹ ಪಟ್ಟಿಗಳನ್ನು ಪುನಃ ಪುನಃ ಬದಲಾಯಿಸುತ್ತಾ ಹೋದರೆ ಕೆಲಸಗಳು ಸರಿಯಾಗಿ ಆಗುವುದಿಲ್ಲ. ಇದರ ಬಗ್ಗೆ ಗಮನ ಕೊಡಬೇಕು.

ಇನ್ನು ಅತಿಮುಖ್ಯವಾದ ಹಣ ಇಂಜನೀಯರಿಂಗು ಇಲಾಖೆಯಲ್ಲಿ ಪೋಲಾಗುತ್ತಿರುವುದು ಎಂದರೆ, ಈಗ ನೀವು 'ಎ' ಕ್ಲಾಸು, 'ಬಿ' ಕ್ಲಾಸು, 'ಸಿ' ಕ್ಲಾಸು ಲೈಸನ್ಸುಗಳು ಎಂದು ಮಾಡಿರುವುದರಿಂದ ಆಗುತ್ತಿದೆ. ಇದಕ್ಕೆ ಕಾರಣ ore carrying ರೋಡಿನಲ್ಲಿ ಕೆಲಸಗಳನ್ನು ಮಾಡುವಾಗ ಗೊತ್ತಾಗುತ್ತದೆ. ಅಲ್ಲಿ ಸಿಮೆಂಟು ಕಾಂಕ್ರೀಟು ಹಾಕಿಲ್ಲ. ಇಲ್ಲಿ ಇತರ ಸಾಮುಗ್ರಿಗಳನ್ನು ಸರಿಯಾಗಿ ಕೊಟ್ಟಿಲ್ಲ ಎಂದು ಕೆಲಸಗಳನ್ನು ಕಂಟ್ರಾಕ್ಟಿಗೆ ಕೊಡುವಾಗ ಅವನಿಗೆ ವಿವರಗಳು ಗೊತ್ತಿರುವುದಿಲ್ಲ. ನಾಲ್ಕೂವರೆ ಕೋಟಿ ರೂಪಾಯಿಗಳಲ್ಲಿ ಒಂದೂವರೆ ಕೋಟಿ ರೂಪಾಯಿ ಇದರಲ್ಲಿ ಹಾಳು ಮಾಡಿದ್ದೀರಿ. (ಎ) ಕ್ಲಾಸ್ ಕಂಟ್ರಾಕ್ಟರುಗಳು ಒಂದು ವರ್ಷಕ್ಕೆ ಮುಗಿಸಬೇಕೆಂದು ಇದ್ದರೂ ಕೂಡ ಮೂರು ವರ್ಷ ಟೈಂ ಕೊಟ್ಟಿದ್ದೀರಿ, ಇದಕ್ಕೆ ಕಾರಣವೇನು ? ಒಂದು ವರ್ಷ ಎಂದು ಕಂಡೀಷನ್

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಹಾಕಿದ ಮೇಲೆ ಒಂದು ವರ್ಷದಲ್ಲಿ ಮುಗಿಸಬೇಕಾಗಿತ್ತು. ಯಾರು ಆ ರೀತಿ ರಿಜಿಸ್ಟರ್ಡ್ ಕಂಟ್ರಾಕ್ಟರ್ಸ್ ಟೈಂಗೆ ಸರಿಯಾಗಿ ಕೆಲಸ ಮುಗಿಸಲಿಲ್ಲ ಅಂತಹವರ ರಿಜಿಸ್ಟ್ರೇಷನ್ ವಜಾ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ಊರಿನಲ್ಲಿ ಒಂದು ಡೀವೀಯೇಷನ್ ರೋಡ್ ಆಗಬೇಕೆಂದು ಬಹಳ ದಿವಸದಿಂದ ಪ್ರಪೋಸಲ್ ಇತ್ತು. ಕೆಲಸ ಶುರು ಮಾಡಬೇಕೆಂದು ಇದ್ದ ಸಮಯದಲ್ಲಿ ಕೆರೆ ತುಂಬ ಕಾರಣಾಂತರದಿಂದ ಕೆಲಸ ನಿಂತು ಹೋಯಿತು. ನೀವೆಲ್ಲಾ ಅಲ್ಲಿ ತಿರುಗಾಡುತ್ತೀರಿ. ಬಹಳ ಅನಾಹುತಗಳು ಅಲ್ಲಿ ಆಗುತ್ತಾ ಇವೆ. ಆದ್ದರಿಂದ ಈ ಡೀವಿಯೇಷನ್ ರೋಡ್‌ನ್ನು ತೆಗೆದುಕೊಂಡು ಮಾಡಿ ಪೂರೈಸಬೇಕೆಂದು ಚೀಫ್ ಇಂಜನಿಯರಿಗೆ ಆರ್ಡರ್ ಕೊಡಬೇಕೆಂದು ನಾನು ತಮಗೆ ಸಲಹೆ ಮಾಡುತ್ತೇನೆ. ಹಂಪ್ ಸೆಟ್ಟುಗಳನ್ನು ಬಹಳ ದುಬಾರಿ ರೇಟ್‌ನಲ್ಲಿ ಕೊಡುತ್ತಾ ಇದ್ದೀರಿ.

ತಾವು ನನಗೆ ಇನ್ನು ಹೆಚ್ಚು ಮಾತನಾಡಲು ಅವಕಾಶ ಕೊಡದೇ ಇರುವುದರಿಂದ ಇಲ್ಲಿಗೆ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಎಲ್ಲಾ ಬೇಡಿಕೆಗಳನ್ನೂ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಮಾತ್ರ ಸರ್ಕಾರದವರ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ. ಹೈದರಾಬಾದ ಕರ್ನಾಟಕದಲ್ಲಿ, ಅದರಲ್ಲೂ ರಾಯಚೂರು ಜಿಲ್ಲೆಯ ರಸ್ತೆಗಳ ವಿಚಾರ ಹೇಳಬೇಕೆಂದರೆ ತಾಲ್ಲೂಕು ಹೆಡ್‌ಕ್ವಾರ್ಟರ್ ಮತ್ತು ಹೋಬಳಿ ಹೆಡ್‌ಕ್ವಾರ್ಟರ್ ರಸ್ತೆಗಳನ್ನು ಬಿಟ್ಟರೆ ಬಾಕಿ ಯಾವ ರಸ್ತೆಗಳೂ ಕೂಡ ಚೆನ್ನಾಗಿಲ್ಲ ಎಂದು ಹೇಳಬೇಕಾಗಿದೆ. ಬರಗಾಲದ ಕಾಲದಲ್ಲಿ ಕೆಲವು ರಸ್ತೆಗಳನ್ನು ಮಾಡಿದ್ದೀರಿ, ಪ್ರತಿ ವರ್ಷ ಪ್ರತಿಯೊಂದು ತಾಲ್ಲೂಕಿನಲ್ಲೂ ಸುಮಾರು 8—10 ಮೈಲಿ taken over by the P. W. D. ಅಂತ ಹೇಳಿ ಆ ರಸ್ತೆಗಳನ್ನು ಸರಿಪಡಿಸುತ್ತಾ ಇದ್ದೀರಿ. ಈಗ ಸುಮಾರು ಐದೂವರೆ ಲಕ್ಷ ಎಕರೆ ನೀರಾವರಿ ಇದೆ. ಈ ರಸ್ತೆಗಳನ್ನು ಅಭಿವೃದ್ಧಿ ಮಾಡದೇ ಅಲ್ಲಿರತಕ್ಕ ಕೆಲಸಗಳು ಯಾವುದೇ ತರಹದ್ದೂ ಕೂಡ ಆಗಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ಅಯಕಟ್ಟಿನ ಏರಿಯಾದಲ್ಲಿ ರಸ್ತೆಗಳನ್ನು ಮಾಡಬೇಕು ಇಲ್ಲದೇ ಹೋದರೆ ಅಲ್ಲಿನ ಅಭಿವೃದ್ಧಿ ಕೆಲಸಗಳು ಮತ್ತು ಅಲ್ಲಿ ಬೆಳೆಯತಕ್ಕ ಮಾಲನ್ನೂ ಕೂಡ ಅಲ್ಲಿಂದ ಬೇರೆ ಕಡೆಗಳಿಗೆ ತೆಗೆದುಕೊಂಡು ಹೋಗಲಿಕ್ಕೆ ರೈತರಿಗೆ ತುಂಬಾ ಅನಾನುಕೂಲವಾಗುತ್ತಾ ಇದೆ. ಅಲ್ಲಿಗೆ ಬಹಳ ಜನ ಆಫೀಸರುಗಳು ಇಂಡಿಯಾ ಸರ್ಕಾರದಿಂದ ಮತ್ತು ಇತರ ಕಡೆಗಳಿಂದ ಬರುತ್ತಾ ಇದ್ದಾರೆ. ನಾವು ಮಾಡಿರತಕ್ಕ ಅಭಿವೃದ್ಧಿ ಯೋಜನೆಗಳನ್ನು ತೋರಿಸಬೇಕೆಂದರೆ ಈ ರಸ್ತೆಗಳು ಸರಿಯಾಗಿ ಇಲ್ಲದೇ ಬಹಳ ತೊಂದರೆಯಾಗುತ್ತಾ ಇದೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸೂಚಿಸುವುದೇನೆಂದರೆ, taken over by the P. W. D. ಅನ್ನುವುದರಲ್ಲಿ ಈ ರಸ್ತೆಗಳಿಗೆ ಪ್ರಯಾರಿಟಿ ಕೊಡಬೇಕು ಮತ್ತು ಅಯಕಟ್ಟಿನಲ್ಲಿರತಕ್ಕ ರಸ್ತೆಗಳನ್ನು ತೆಗೆದುಕೊಂಡು ಅವುಗಳನ್ನು ಸರಿಪಡಿಸಬೇಕು. ಇದರ ಬಗ್ಗೆ ಪ್ರತಿ ಸಲವೂ ಕೂಡ ಹೆಚ್ಚು ದುಡ್ಡು ಕೊಡಬೇಕು. ಈ ರಸ್ತೆಗಳನ್ನು ಮಾಡಲೇಬೇಕೆಂದು ಸರ್ಕಾರದವರ ಗಮನಕ್ಕೆ ತಂದಾಗ್ಯೂ ಕೂಡ ತುರ್ತುಪರಿಸ್ಥಿತಿ ಇದೆ ಆದ್ದರಿಂದ ಮಾಡುವುದಕ್ಕಾಗಲಿಲ್ಲ ಎಂದು ಹೇಳುತ್ತಾ ಇದ್ದೀರಿ. ಈ ರೀತಿ ಹೇಳದೆ ಶೀಘ್ರವಾಗಿ ಈ ಕಾರ್ಯವನ್ನು ನೆರವೇರಿಸಿಕೊಡಬೇಕೆಂದು ಹೇಳುತ್ತೇನೆ.

ಗಂಗಾವತಿ, ಸಿಂಧನೂರು ಮತ್ತು ಮಾನ್ವಿಯಲ್ಲೂ ಕೂಡ ಸರಿಯಾದ ರಸ್ತೆಗಳಿಲ್ಲದೇ ಬಹಳ ತೊಂದರೆಯಾಗುತ್ತಾ ಇದೆ, ಅದಕ್ಕೂ ಕೂಡ ಆದಷ್ಟು ಜಾಗ್ರತೆ ಗಮನ ಕೊಡಬೇಕೆಂದು ಹೇಳುತ್ತೇನೆ. ಬೆಂಗಳೂರಿನಿಂದ ಗುಲ್ಬರ್ಗಾಕ್ಕೆ ಹೋಗತಕ್ಕ ರಸ್ತೆ ಅಲ್ಪಸ್ವಲ್ಪ ಇತ್ತೀಚೆಗೆ ಮುಗಿಯುತ್ತಾ ಬಂದಿದೆ. ನವಿಲುಕೋಲು ಹಟ್ಟಿ ರಸ್ತೆ ಅಲ್ಲಲ್ಲಿ ಸರಿಯಾಗಿಲ್ಲದೇ ತೊಂದರೆಯಾಗುತ್ತಾ ಇದೆ. ಆ ರಸ್ತೆ ಕೇವಲ 22 ಮೈಲಿ ಇದೆ, ಅದನ್ನು ಟಾರ್ ಮಾಡಿಸಿಕೊಡಿ ಎಂದು ಎರಡು ಮೂರು ವರ್ಷದಿಂದ ಕೇಳುತ್ತಾ ಇದ್ದೇನೆ. ಬಜೆಟ್‌ನಲ್ಲಿ ಅದನ್ನು ಸೇರಿಸಿ ಎಂದರೆ ಎಮರ್ಜೆನ್ಸಿ ಎಂದು ಹೇಳುತ್ತಾ ಇದ್ದೀರಿ. ಈ ರಸ್ತೆ ಸರಿಯಾಗಿಲ್ಲದೇ ವಾಹನಗಳಿಗೆ ತೊಂದರೆಯಾಗಿ ಅವು ಡ್ಯಾಮೇಜ್ ಆಗುತ್ತಾ ಇವೆ, ಆದ್ದರಿಂದ ಅದನ್ನು ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರವಾಸಿ ಕೇಂದ್ರಗಳ ವಿಷಯ ಹೇಳಬೇಕೆಂದರೆ ಈಗ ಮಾನ್ವಿ ಬಹಳವಾಗಿ ಅಭಿವೃದ್ಧಿಯಾಗುತ್ತಾ ಇದೆ. ಬಹಳ ಜನ ಆಫೀಸರುಗಳು ಅಲ್ಲಿಗೆ ಬರುತ್ತಾರೆ. ಅವರನ್ನು ಅಕಾಮೋಡೇಟ್ ಮಾಡುವುದಕ್ಕೆ ಅಲ್ಲಿ ಎರಡು ರೂಮುಗಳು ಇವೆ. ಕೇವಲ ಎರಡು ಖೋಲಿಗಳು ಇದ್ದು ಅಲ್ಲಿಗೆ ಬರತಕ್ಕ ಆಫೀಸರುಗಳಿಗೆ ಇರುವುದಕ್ಕೆ ತೊಂದರೆಯಾಗಿ ಅನಾನುಕೂಲವಾಗುತ್ತಾ ಇದೆ. ಇದಕ್ಕೆ ಗಮನ

ಕೊಡಬೇಕೆಂದು ಹೇಳುತ್ತೇನೆ. ಇದೇ ರೀತಿ ಹೈವೇನಲ್ಲಿರತಕ್ಕ ಲಿಂಗಸೂಗೂರಿನಲ್ಲಿ ಅಗ್ರಿಕಲ್ಚರಲ್ ರಿಸರ್ಚ್ ಫಾರಂ ಮಾಡಬೇಕೆಂದು ಇದ್ದೀರಿ, ಅಲ್ಲಿ ಎರಡು ಚಿಕ್ಕ ಖೋಲಿ ಇರತಕ್ಕ ಪ್ರವಾಸಿ ಮಂದಿರ ಇದೆ, ಬೆಂಗಳೂರಿನಿಂದ ಗುಲ್ಬರ್ಗ, ಬಿದರೆಗೆ ಹೋಗತಕ್ಕ ಜನರಿಗೆ ಪ್ರವಾಸ ಮಾಡುವಾಗ ತುಂಬಾ ಆಯಾಸವಾಗುತ್ತದೆ. ಒಂದು ವೇಳೆ ರೆಸ್ಟ್ ತೆಗೆದುಕೊಳ್ಳಬೇಕೆಂದರೆ ಇದು ಸೆಂಟ್ರಲ್ ಪ್ಲೇಸ್ ಆಗುತ್ತದೆ. ಆದ್ದರಿಂದ ಇಲ್ಲಿ ಚಿಕ್ಕ ಇನ್ನೊಂದು ಪ್ರವಾಸಿ ಮಂದಿರವನ್ನು ಕಟ್ಟಿಸಬೇಕೆಂದು ಹೇಳುತ್ತೇನೆ.

ಇನ್ನು ವಾಟರ್ ಸಪ್ಲೈ ಸ್ಕೀಂ ವಿಷಯದಲ್ಲಿ ಒಂದು ಮಾತು ಹೇಳುವುದಾದರೆ, ನಮ್ಮ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಈಗಾಗಲೇ 10—12 ವಾಟರ್ ಸಪ್ಲೈ ಸ್ಕೀಂಗಳು ಮಂಜೂರಾಗಿವೆ. ಇನ್ನುವರೆಗೂ ಕೆಲಸ ಪ್ರಾರಂಭವಾಗಿಲ್ಲ. ಮೆಟೀರಿಯಲ್ ಸಿಕ್ಕಲಿಲ್ಲ ಎಂಬ ಕಾರಣವನ್ನು ಹೇಳುತ್ತಾ ಇದ್ದಾರೆ. ಏನೇ ಆಗಲಿ ಉತ್ತಮವಾದ ನೀರನ್ನು ತಾವು ಒದಗಿಸಲೇಬೇಕು. ಏಕೆಂದರೆ ನಮ್ಮ ಪ್ರದೇಶದಲ್ಲಿ ಜನರು ನೀರು ಹುಣ್ಣಿನಿಂದ ಕೊರಗುತ್ತಾ ಇದ್ದಾರೆ. ಆ ಗ್ರಾಮಗಳಲ್ಲಿರತಕ್ಕ ಜನರಿಗೆ ತಾವು ಸುವ್ಯವಸ್ಥಿತವಾದ ನೀರನ್ನು ಒದಗಿಸಲು ತಕ್ಕ ವ್ಯವಸ್ಥೆ ಮಾಡಲೇ ಬೇಕಾಗುತ್ತದೆ. ಈ ಬಗ್ಗೆ ಇಂಡಿಯಾ ಸರ್ಕಾರದವರಿಗೆ ಯೋಜನೆಗಳನ್ನು ಕಳುಹಿಸಿದ್ದೀರಿ. 60 ಸ್ಕೀಂಗಳ ಪೈಕಿ 10—12 ಸ್ಕೀಂಗಳು ಮಂಜೂರಾಗಿವೆ ಅವನ್ನು ತೀವ್ರಗತಿಯಿಂದ ಶುರು ಮಾಡಿಸಲೇಬೇಕೆಂದು ಹೇಳುತ್ತೇನೆ.

ವಿದ್ಯುಚ್ಛಕ್ತಿ ಬಗ್ಗೆ ಹೇಳಬೇಕೆಂದರೆ, ಬೇಕಾದಷ್ಟು ವಿದ್ಯುಚಕ್ತಿಯನ್ನು ಪೂರೈಸುತ್ತೇವೆ ಎಂದು ಹೇಳಿ ಹೋದ ಸಾರಿ ಕೂಡ ಬಡ್ಜೆಟ್‌ನಲ್ಲಿ ಹಣವನ್ನು ಒದಗಿಸಿದ್ದೀರಿ. ಪದೇ ಪದೇ ನಾವು ಕೂಡ ಹೇಳುತ್ತಲೇ ಬಂದಿದ್ದೇವೆ. ಎಲ್ಲಿ ನೋಡಿದರೂ ಕೂಡ ಅರ್ಧಂಬರ್ಧ ಕೆಲಸ ಮಾಡಿ ನಿಂತಿರುವುದಾಗಿದೆ. ಅದಕ್ಕೆ ಕಾರಣ ಮೆಟೀರಿಯಲ್ಸ್ ಇಲ್ಲ ಎಂದು ಹೇಳುತ್ತಾ ಇದ್ದಾರೆ. ಇದಕ್ಕೆ ಸೂಕ್ತ ಗಮನ ಕೊಟ್ಟು ಜಾಗ್ರತೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ತಾವು ಮಾಡತಕ್ಕ ಕೆಲಸಗಳಲ್ಲಿ ಜನರಿಗೆ ವಿಶ್ವಾಸ ಹುಟ್ಟುವಂತೆ ಕೆಲಸ ಮಾಡಬೇಕು, ಸ್ವಲ್ಪ ಹೆಚ್ಚಿನ ರೇಟ್ ಕೊಟ್ಟರೂ ಪರವಾಗಿಲ್ಲ ಕ್ವಾಲಿಟಿಮೇನಟೇನ್ ಮಾಡಬೇಕಾದ್ದು ತಮ್ಮ ಕರ್ತವ್ಯವಾಗಿದೆ. ಈಗ ತಾವು ಮಾಡುತ್ತಾ ಇರತಕ್ಕ ಕೆಲಸಗಳಲ್ಲಿ ಕ್ವಾಲಿಟಿ ಇಲ್ಲ ಎಂದು ಹೇಳಿ ನಮ್ಮ ಗಮನಕ್ಕೆ ಬಂದಿದೆ. ಉದಾಹರಣೆ ಹೇಳಬೇಕೆಂದರೆ, ಮೊನ್ನೆ ನಮ್ಮ ಮೇನ್ ಕೆನಾಲ್ ಒಡೆದು ಹೋಯಿತು, 25 ದಿವಸಗಳಾದರೂ ಕೂಡ ರಿಪೇರಿ ಆಗಲಿಲ್ಲ. ಇದಕ್ಕೆ ಯಾರು ಜವಾಬ್ದಾರರೋ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ಸುಮಾರು ನಾಲ್ಕು ಲಕ್ಷ ಎಕರೆ ಪ್ರೋಗ್ರಾಂ ಹಾಕಿಕೊಂಡು ಹೈಬ್ರಿಡ್ ಸೀಡ್ಸ್ ಹಾಕಬೇಕೆಂದು ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದರೂ ಕೂಡ ಈ ರೀತಿ ಬ್ರೀಚ್ ಆದದ್ದರಿಂದ ಹಾಕಲಾಗದೇ ತುಂಬಾ ಅನಾನುಕೂಲವಾಗಿದೆ. ಈ ಕೆಲಸ ಮಾಡಿರತಕ್ಕ ಕಂಟ್ರಾಕ್ಟರನಿಂದ ಎಕ್ಸ್‌ಪ್ಲನೇಷನ್ ಕಾಲ್‌ಫಾರ್ ಮಾಡಿ ಅವರ ಮೇಲೆ ತೀವ್ರ ಕಠಿಣವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈಗಿನ ಪರಿಸ್ಥಿತಿಯಲ್ಲಿ ಮುಖ್ಯವಾಗಿ ಕ್ವಾಲಿಟಿ ಮೇನ್‌ಟೇನ್ ಮಾಡಬೇಕಾದ್ದು ಸರ್ಕಾರದ ಕರ್ತವ್ಯ ಇಲ್ಲದೇ ಇದ್ದರೆ ತುಂಬಾ ಹಾನಿಯಾಗುತ್ತದೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

12-00 NOON.

ಶ್ರೀ ಬಿ. ಚನ್ನಬೈರೇಗೌಡ.—ಸ್ವಾಮಿ, ಕಳೆದ ನಾಲ್ಕು ವರ್ಷಗಳಿಂದ ಈ ಸಭೆಯಲ್ಲಿ ತಾವು ಗುರುಗಳು, ಹಾಗೇ ನಾವು ಶಿಷ್ಯರು ಈ ಪ್ರಕಾರವಾಗಿ ನಾವು ನಯ ಭಯ ವಿನಯದಿಂದ ನಡೆದು ಕೊಂಡು ಹೋಗುತ್ತಿದ್ದೆವು. ಈಚೆಗೆ ಮಧ್ಯ ಪ್ರದೇಶದ ವಿಧಾನಸಭೆ, ಪಂಜಾಬು ವಿಧಾನಸಭೆ ಮುಂತಾದ ಕಡೆಗಳಲ್ಲಿ ಅಧ್ಯಕ್ಷರನ್ನು ಚಪ್ಪಲಿಯಿಂದ ಹೊಡೆದರು, ಬೂಡ್ಸಿನಿಂದ ಹೊಡೆದರು ಎಂದು ಮುಂತಾಗಿ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದು ನಮಗೆ ಪ್ರಚೋದನೆಯುಂಟಾಗುವಹಾಗೆ ಬರಯುತ್ತಿದ್ದಾರೆ. ಆದುದರಿಂದ ಈ ವಿಚಾರಗಳನ್ನು ಪ್ರಕಟಿಸದ ಹಾಗೆ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸನ್ನು ಪತ್ರಿಕೆಗಳವರಮೇಲೆ ಪ್ರಯೋಗ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

(The Member was exhibiting a few papers)

MR. SPEAKER.—The Hon'ble Member is repeatedly requesting me to say something and out of sheer respect for the Member's feelings

(MR. SPEAKER)

I agreed. He refers to what is reported to have happened elsewhere and what is appearing in the Press and he wants me to direct the Government to enforce the Defence of India Rules against certain persons who are far away.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಪಬ್ಲಿಕ್ ವರ್ಕ್ಸ್ ಮತ್ತು ವಿದ್ಯುಚ್ಛಕ್ತಿ ಡಿಪಾರ್ಟ್‌ಮೆಂಟುಗಳ ಮೇಲೆ ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಒಬ್ಬರನ್ನು ಬಿಟ್ಟು ಎಲ್ಲ ಸದಸ್ಯರೂ ಕೂಡ ಈ ಇಲಾಖೆಯಲ್ಲಿರುವ ಕುಂದುಕೊರತೆಗಳನ್ನು ಸುಧಾರಿಸುವುದಕ್ಕೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಕೆಲವು ಉಪಯುಕ್ತವಾದ ಸೂಚನೆಗಳನ್ನು ಕೂಡ ಕೊಟ್ಟಿದ್ದಾರೆ. ಅವರೆಲ್ಲರಿಗೂ ಹೃತ್ಪೂರ್ವಕವಾಗಿ ಹಾರ್ದಿಕ ವಂದನೆಯನ್ನು ಸಲ್ಲಿಸುತ್ತಿದ್ದೇನೆ. ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಈ ಇಲಾಖೆಯ ಡಿಪಾರ್ಟ್‌ಮೆಂಟುಗಳ ಮೇಲೆ ಮಾತನಾಡುತ್ತಾ ಕೆಲವು ವಿಚಾರಗಳನ್ನು ಹೇಳಿದ್ದಾರೆ, ಅವು ಇವತ್ತು ಹೊಸದಾಗಿ ಹೇಳಿದ್ದಾರೆಂದು ತಿಳಿಯುವಹಾಗಿಲ್ಲ. ಪ್ರತಿ ವರ್ಷವೂ ಅವುಗಳಿಗೆ ಉತ್ತರ ಕೊಡುತ್ತಿದ್ದರೂ ಮತ್ತೆ ಹೇಳಿದ್ದಾರೆ. ಬಹುಶಃ ಅವರು ಅಷ್ಟೊಂದು ಸೀರಿಯಸ್ಸಾಗಿ, ತೀವ್ರವಾಗಿ ಹೇಳಿದ್ದಾರೆಂದು ನನಗನ್ನಿಸುವುದಿಲ್ಲ. ಈ ಸಲ ಮಾನ್ಯ ಸದಸ್ಯರು ಅನೇಕರು ಬಹಳ ಒಳ್ಳೆಯ ರೀತಿಯಿಂದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಮತ್ತು ಕಳಕಳಿಯಿಂದ ಇಲಾಖೆಯ ಕುಂದುಕೊರತೆಗಳನ್ನು ಎತ್ತಿ ತೋರಿಸಿದ್ದಾರೆ ಮತ್ತು ಅವನ್ನು ಸುಧಾರಿಸುವುದಕ್ಕೆ ಕಳಕಳಿಯಿಂದ ಸಲಹೆ ಮಾಡಿದ್ದಾರೆ. ಆದರೆ ನಾನು ಅವರು ಹೇಳಿದ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಒಬ್ಬರು ಮಾನ್ಯ ಸದಸ್ಯರು ಏನು ಕಾರಣವೋ ಏನೋ ಗೊತ್ತಿಲ್ಲ, ವೈಯಕ್ತಿಕವಾಗಿ ನನ್ನ ಮೇಲೆ ಒಂದು ಅಲಿಗೇಷನ್ ಮಾಡಿದರು, ಬಹುಶಃ ಈ ನಾಲ್ಕು ವರ್ಷಗಳಲ್ಲಿ ನಮಗೆ ಜ್ಞಾಪಕವಿರುವ ಹಾಗೆ ಇಂಥ ಒಂದು ಅಪಾದನೆಯನ್ನು ಯಾರೂ ಮಾಡಿರಲಿಲ್ಲ ಎಂದು ನನಗನ್ನಿಸುತ್ತದೆ, ನಾನು ಮತ್ತು ನನ್ನ ಬಂಧು ಬಳಗದವರು ಲೋಕೋಪಯೋಗಿ ಇಲಾಖೆಯ ವಾಹನಗಳನ್ನು ಉಪಯೋಗ ಮಾಡುತ್ತಿದ್ದೇವೆಂದು ಹೇಳಿದರು, ಅದಕ್ಕೆ ಉತ್ತರ ಹೇಳುತ್ತೇನೆ. ಅವರನ್ನು ಆಗಲೇ ಕೇಳಿದೆ, ಅನಂತರ ಕೇಳಿದರೆ ಹೇಳುವುದಕ್ಕೆ ಸಮಯವಿರುವುದಿಲ್ಲ, ಏನಾದರೂ ಇದ್ದರೆ ಸ್ಪಷ್ಟ ಮಾಡಿ ಎಂದು ಹೇಳಿದಾಗ ನಿಮ್ಮ ಮನಸ್ಸಿಗೆ ಈ ಪ್ರಶ್ನೆ ನೀವೇ ಹಾಕಿಕೊಳ್ಳಿ ಎಂದು ಹೇಳಿದರು. ಪ್ರತಿಯೊಬ್ಬರೂ ಆತ್ಮ ಶೋಧನೆ ಮಾಡಿಕೊಳ್ಳುವುದಕ್ಕೆ ಇಲ್ಲಿಗೆ ಬಂದಿಲ್ಲ. ಈ ದಿವಸ ನನಗೆ ಗೊತ್ತಿರುವ ಹಾಗೆ ಈ ರೀತಿಯ ಮಾತಗಳನ್ನಾಡಲು ಈ ಸಭೆಯ ಕಾಲ ತೆಗೆದುಕೊಳ್ಳಬಹುದೇ ಎಂದು ನೋಡಿದರೆ ಅದು ಸರಿಯೆಂದು ಕಾಣುವುದಿಲ್ಲ. ಮಂತ್ರಿಯಾಗಿ ಇಲಾಖೆಯ ವಾಹನವನ್ನು ಉಪಯೋಗ ಮಾಡುವ ಸಂಪೂರ್ಣ ಅಧಿಕಾರ ನನಗಿದೆ, ಪ್ರವಾಸ ಮಾಡುವಾಗ ನಾನು ಚೀಫ್ ಎಂಜಿನಿಯರು, ಸೂಪರಿಂಟೆಂಡಿಂಗ್ ಎಂಜಿನಿಯರು ಮುಂತಾದವರ ವಾಹನಗಳನ್ನು ತೆಗೆದುಕೊಂಡು ಹೋಗುವುದಕ್ಕೂ ಅಡ್ಡಿ ಅತಂಕವಿಲ್ಲ. ಆದರೆ ಹಾಗೆ ತೆಗೆದುಕೊಂಡು ಹೋದಾಗ, ಇಲಾಖೆಯ ವ್ಯಾನಿನಲ್ಲಿ ಹೋದಾಗ ಟಿ.ಎ., ಡಿ.ಎ. ಕ್ಲೈಂಮಾಡಿಲ್ಲ. ಇನ್ನು ನಮ್ಮ ಬಂಧುಬಳಗ ಇಲಾಖೆಯ ವ್ಯಾನನ್ನು ಉಪಯೋಗಿಸುವ ಪ್ರಶ್ನೆಗೆ ಬಂದರೆ ಬೆಂಗಳೂರು ಸಿಟಿಯಲ್ಲಾಗಲಿ, ಹಳೆಯ ಮೈಸೂರಿನಲ್ಲಾಗಲಿ ನನಗೆ ಬಂಧುವೂ ಇಲ್ಲ, ಬಳಗವೂ ಇಲ್ಲ. ನನ್ನ ಕ್ಷೇತ್ರ ಇಲ್ಲಿಗೆ 450 ಮೈಲಿ ದೂರದಲ್ಲಿದೆ, ಯಾರಾದರೂ ವರ್ಷದಲ್ಲಿ ಒಂದೆರಡು ಸಲ ಹೋಗಿ ಬರಬಹುದು. ಹೀಗಿರುವಾಗ ಒಬ್ಬರಮೇಲೊಬ್ಬರು ವೃಥಾ ಆರೋಪ ಮಾಡುವುದು ಸಮಂಜಸವಲ್ಲ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಕಳೆದ ನಾಲ್ಕು ವರ್ಷಗಳಿಂದ ಏನು ಹೇಳಿತ್ತೋ ಅದನ್ನೇ ಮತ್ತೆ ಹೇಳಬೇಕಾಗಿದೆ, ಹೊಸದಾಗಿ ಹೆಚ್ಚಿನ ಕೆಲಸ ಕಾರ್ಯ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಈಗಾಗಲೆ ಒದಗಿಸಿರುವ ಹಣ ಖರ್ಚಾಗಿದೆ. ಅನೇಕ ಮಾನ್ಯ ಸದಸ್ಯರು ಹೆಚ್ಚು ರಸ್ತೆ ಮಾಡಬೇಕು, ಹೆಚ್ಚು ಸೇತುವೆ ಕಟ್ಟಬೇಕು ಎಂಬ ಬೇಡಿಕೆಗಳನ್ನು ಸಲ್ಲಿಸಿದಾಗ ಅದನ್ನು ಒಪ್ಪಿಕೊಳ್ಳುವ ಸ್ಥಿತಿ ಇಲ್ಲ ಎಂದು ಹೇಳಿದ್ದೇನೆ. ಲೋಕೋಪಯೋಗಿ ಇಲಾಖೆ ರಸ್ತೆ ಸಾರಿಗೆ ಸಂಪರ್ಕಕ್ಕೆ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣ ಒದಗಿಸಲಾಗಿತ್ತೋ ಸುಮಾರು ಅದರ ಎರಡರಷ್ಟನ್ನು ಖರ್ಚುಮಾಡಿವೆ. ಮೂರನೆಯ ಯೋಜನೆಯಲ್ಲಿ ಒಂಭತ್ತು ಕೋಟಿ ರೂಪಾಯಿ ಇತ್ತು, ಸುಮಾರು 17 ಕೋಟಿ ರೂಪಾಯಿ ಖರ್ಚು ಮಾಡಿದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲನೆಯ ವರ್ಷ ಹೆಚ್ಚು ಕೆಲಸಕಾರ್ಯ ತೆಗೆದುಕೊಳ್ಳುವುದಕ್ಕೆ ಅವಕಾಶವಾಗಬಹುದು, ಆಗ ಪ್ರತಿಯೊಬ್ಬರಿಗೂ ಸಮಾಧಾನ ಮಾಡುವ ಅವಕಾಶ ಸಿಕ್ಕಬಹುದು ಎಂದು ನಾನು ಹೇಳುತ್ತಿದ್ದೆ. ಆದರೆ ಇವತ್ತಿನ ಬಡ್ಜೆಟ್ಟಿನ ಪ್ರಕಾರ ಆ

ರೀತಿಯ ಅವಕಾಶ ಕೂಡ ಇಲ್ಲ. ಈಗ ಹೇಳಬೇಕಾದರೆ, ನಾಲ್ಕನೆ ಯೋಜನೆಯಲ್ಲಿ 28 ಕೋಟಿ ರೂಪಾಯಿ ಸಾರಿಗೆ ಸಂಪರ್ಕಕ್ಕೆ ಒದಗಿಸಿವೆ. ಕೇಂದ್ರದವರೂ ನಾವು ಸೇರಿ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂ (Centrally sponsored scheme) ಎಂದು ಮಾಡುವುದಕ್ಕೆ ಇದರಲ್ಲಿ ನಮ್ಮ ಪಾಲು ಮೂರು ಕೋಟಿ ರೂಪಾಯಿ ಇದೆ. ಅದಲ್ಲದೆ ಇನ್ನು 25 ಕೋಟಿ ಇದೆ. ಇದರಲ್ಲಿ ಈಗಾಗಲೆ ಮೂರನೆಯ ಯೋಜನೆಯಲ್ಲಿ ಪ್ರಾರಂಭಿಸಿ ಮುಗಿಯದಿರುವ ಕೆಲಸಗಳನ್ನು ಪೂರ್ಣ ಮಾಡುವುದಕ್ಕೆ, ಸ್ಪಿಲ್ ಓವರ್ ವರ್ಕ್ (spill over works)ಗೆ ಎಂಟೂವರೆ-ಒಂಭತ್ತು ಕೋಟಿ ರೂಪಾಯಿಬೇಕು. ಹಳ್ಳಿಗಳಿಗೆ ಹೋಗುವ 13 ಸಾವಿರ ರಸ್ತೆ, ಡಿ.ಎಲ್.ಬಿ. ರಸ್ತೆ ಮುಂತಾದ ರಸ್ತೆಗಳ ಅಭಿವೃದ್ಧಿಗೆ ಎಂಟು-ಒಂಭತ್ತು ಕೋಟಿಬೇಕು. ಒಂಭತ್ತು-ಹತ್ತು ಕೋಟಿಯಲ್ಲಿ ಹೊಸ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷದಲ್ಲಿ ಅಂದರೆ, ಈ ವರ್ಷ ನಮಗೆ 250 ಲಕ್ಷ ರೂಪಾಯಿ ಸಿಕ್ಕಿದೆ. ಈ ಹಣದಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿರತಕ್ಕ ಸ್ಪಿಲ್ ಓವರ್ ವರ್ಕ್‌ಗಳಿಗೆ ಖರ್ಚುಮಾಡಬೇಕಾಗುತ್ತದೆ. ಸುಮಾರು 50 ಲಕ್ಷ ರೂಪಾಯಿ ಹೊಸ ಕೆಲಸ ಕಾರ್ಯಗಳಿಗೆ ತೆಗೆದುಕೊಳ್ಳಬಹುದು ಎಂದು ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅವಶ್ಯಕವಿರುವ ಹೊಸ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವದೇ ಹೊಸ ಕೆಲಸ ಕಾರ್ಯಗಳಿಗೆ ಸಾಕಷ್ಟು ಅವಕಾಶವಿಲ್ಲ ಎಂದು ತಮ್ಮ ಮುಂದೆ ಹೇಳುತ್ತಾ ಇಲ್ಲ. ಆದರೆ ಇವತ್ತಿನ ದಿವಸ ರೋಡ್ ಬಿಲ್ಡಿಂಗ್, ಬ್ರಿಡ್ಜ್‌ಸ್ ಇವುಗಳಿಗೆ ಏನೂ ದುಡ್ಡು ಖರ್ಚುಮಾಡುವುದು ಬೇಡ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನೀರಾವರಿ ಯೋಜನೆಗೋಸ್ಕರ ಎಲ್ಲ ಹಣ ಖರ್ಚುಮಾಡಬೇಕು ಎಂದು ಸಹ ಅವರು ಹೇಳಿದ್ದಾರೆ, ಇನ್ನು ಕೆಲವರು ಪ್ರತಿಯೊಂದು ಜಿಲ್ಲೆಯಲ್ಲಿ ವಿಧಾನ ಸೌಧದಂತಹ ಕಟ್ಟಡ ಕಟ್ಟಿಸಿರಿ ಎಂದು ಸಹ ಹೇಳಿದರು. ಟ್ರಾವಲರ್ಸ್ ಬಂಗಲೋ ಕಟ್ಟಿಸಬೇಕು ಅನೇಕ ಸೇತುವೆ ಕಟ್ಟಿಸಬೇಕು ಎಂದು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಕೆಲವು ಮಾನ್ಯ ಸದಸ್ಯರು ಇವತ್ತಿನ ದಿವಸ ಏನಾದರೂ ದುಡ್ಡು ಉಳಿದರೆ ಅದನ್ನು ನೀರಾವರಿಗಾಗಿ ಖರ್ಚುಮಾಡಬೇಕು ಎಂದು ಏನು ಸಲಹೆ ಕೊಟ್ಟಿದ್ದಾರೆಯೋ, ಅದು ಒಪ್ಪತಕ್ಕಂಥ ಮಾತು. ಸರಕಾರ ಧೋರಣೆ ಕೂಡ ಅದೇ ರೀತಿ ಇದೆ. ಇವತ್ತು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 28 ಕೋಟಿ ರೂಪಾಯಿ ಟೆಂಟೇಟಿವ್ ಪ್ರೋಪೋಜಲ್ಸ್ ಇದ್ದರೂ ಕೂಡ ನಮಗೆ 250 ಲಕ್ಷ ರೂಪಾಯಿ ಸಿಕ್ಕಿದೆ. ಇದರಲ್ಲಿ ಈ ವರ್ಷ ಎರಡು ಕೋಟಿಗೆ ಮೇಲ್ಪಟ್ಟು ಸ್ಪಿಲ್ ಓವರ್ ವರ್ಕ್ಸ್ ಬಗ್ಗೆ ಖರ್ಚುಮಾಡಬೇಕಾಗುತ್ತದೆ. ಆದುದರಿಂದ ಹೊಸದಾಗಿ ಹೆಚ್ಚು ಹೆಚ್ಚು ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಿಲ್ಲ. ರೋಡ್, ಅದಕ್ಕೆ ಸಂಬಂಧಪಟ್ಟ ಸೇತುವೆ, ಟಾರ್ ಹಾಕುವುದು ಇಂಥ ಕೆಲಸ ತೆಗೆದುಕೊಳ್ಳುತ್ತಾ ಇಲ್ಲ. ಅನೇಕ ಕಡೆ ಅದರಲ್ಲಿಯೂ ಮಲೆನಾಡು ಪ್ರದೇಶ ಹಿಂದುಳಿದ ಪ್ರದೇಶ ಇರುವುದರಿಂದ ಅಲ್ಲಿ ಕೆಲಸ ಏನೂ ಮಾಡದೇ ಇರುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಎಲ್ಲೆಲ್ಲಿ ಆವಶ್ಯಕತೆ ಇದೆ ಅಲ್ಲಿ ಅಂಥ ಕೆಲಸ ತೆಗೆದುಕೊಳ್ಳುತ್ತೇವೆ.

ಈಗ ಕೇಂದ್ರ ಸರಕಾರದ ಸಲಹೆ ಮೇರೆಗೆ ನಮ್ಮ ರಾಜ್ಯದಲ್ಲಿ ಮೈಸೂರು ಸ್ಟೇಟ್ ರೋಡ್ ಪ್ಲಾನಿಂಗ್ ಬೋರ್ಡು ಎಂದು ಮಾಡಿದ್ದೇವೆ. ರೋಡ್ ಬಗ್ಗೆ ಸರಕಾರದ ಧೋರಣೆ, ನೀತಿ ಯಾವ ರೀತಿ ಇರಬೇಕು, ಯಾವ ರೀತಿ ಹಣ ಖರ್ಚುಮಾಡಬೇಕು, ಯಾವ ಯಾವ ಕೆಲಸಕಾರ್ಯಗಳನ್ನು ಮಾಡಬೇಕು ಎಂಬುದಕ್ಕೆ ಇವರು ನೀತಿ ಹಾಕಿಕೊಡುತ್ತಾರೆ. ಅವರು ಹಾಕಿದ ನೀತಿಯ ಪ್ರಕಾರ ಇವತ್ತು ರೋಡ್ ಕೆಲಸ ಮಾಡಲಾಗುವುದು. ಆದುದರಿಂದ ಕಮ್ಯುನಿಕೇಷನ್ಸ್ ಹಾಗೂ ರೋಡ್ಸ್ ಬಗ್ಗೆ ಸರಕಾರದ ನೀತಿ ಏನು ಇದೆ ಎಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುವುದಕ್ಕೆ ಇಚ್ಛೆ ಪಡುತ್ತೇನೆ. ಈ ರೋಡ್ ಪ್ಲಾನಿಂಗ್ ಬೋರ್ಡು ತನ್ನ ಮೊದಲನೇ ಪ್ರಯಾರಿಟಿ ಇಂಟರ್ ಡಿಸ್ಟ್ರಿಕ್ಟ್ ರೋಡ್‌ಗಳಿಗೆ ಕೊಟ್ಟಿದೆ. ಅಂದರೆ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಸಂಪರ್ಕ ಬೆಳೆಸತಕ್ಕಂಥ ರಸ್ತೆಗೆ ಆದ್ಯತೆ ಕೊಡಬೇಕು ಎಂದು ಇದೆ. ಅಂಥ ರೋಡಿನಲ್ಲಿ ಬ್ರಿಜಿಸ್ ಕಲ್ವರ್ಟ್ಸ್ ಕೆಲಸ ಮಾಡಿ ಅದನ್ನು ಸರ್ವಋತು ರೋಡ್ ಆಗಿ ಮಾಡಬೇಕು ಮತ್ತು ಇದಕ್ಕೆ ಪ್ರಾಯಾರಿಟಿ ಕೊಡಬೇಕು ಎಂದು ಇದೆ. ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹಾಗೂ ತಾಲ್ಲೂಕಿನಿಂದ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸಕ್ಕೆ ಇರುವ ರೋಡ್ಸ್ ಆಲ್ ವೆದರ್ ರೋಡ್ಸ್ ಮಾಡಬೇಕು ಎಂದು ಹೇಳಿದ್ದಾರೆ. ನಮ್ಮ ಭಾರತ ದೇಶದಲ್ಲಿ ಒಂದು ಸ್ಟೇಟಿನಿಂದ ಇನ್ನೊಂದು ಸ್ಟೇಟಕ್ಕೆ ಇರತಕ್ಕ ಇಂಟರ್ ಸ್ಟೇಟ್ ರೋಡ್ಸ್ ಆಲ್ ವೆದರ್ ರೋಡ್ಸ್ ಮಾಡಬೇಕು ಎಂಬ ನೀತಿ ಸಹ ಇದೆ. ಸ್ಟೇಟ್ ಹೈ ವೇ ಅಂದರೆ ದೊಡ್ಡ ಹೆದ್ದಾರಿ ಇದನ್ನು ಆಲ್ ವೆದರ್ ರೋಡ್ ಮಾಡಬೇಕೆಂದು ಇದೆ. ಮಲೆನಾಡು ಪ್ರದೇಶದಲ್ಲಿ ಸಾಮಾನ್ಯವಾಗಿ ಮಣ್ಣಿನ ಕೆಲಸ ಮಾಡಿದ ರೋಡ್ ಇರುತ್ತವೆ. ಮಳೆಗಾಲದಲ್ಲಿ ಮಳೆ ನೀರು ಬಂದು ಮಣ್ಣನ್ನು ಕೊಚ್ಚಿಕೊಂಡು ಹೋಗುತ್ತದೆ. ಇಂಥ ರೋಡ್ಸ್ ಮೇಲೆ ಮೆಟಲ್ ಹಾಕಿದ್ದರೂ ಕೂಡ ಮಳೆಗಾಲದಲ್ಲಿ ಮಳೆ ನೀರು ಬರುವುದರಿಂದ ಅದು ಹೋಗುತ್ತದೆ.

(ಶ್ರೀ ವೀರೇಂದ್ರ ಪಾಟೀಲ್)

ಆದುರಿಂದ ಇಂಥ ರೋಡ್ಸ್ ವಿಚಾರದಲ್ಲಿ ಆದಷ್ಟು ಹೆಚ್ಚು ರೋಡ್ ಆಸ್ಫಾಲ್ಟ್ ಮಾಡಬೇಕು, ಇದಕ್ಕೆ ಪ್ರಯಾರಿಟಿ ಕೊಡಬೇಕು ಎಂದು ಹೇಳಿದ್ದಾರೆ. ಹಿಂದುಳಿದ ಪ್ರದೇಶಕ್ಕೆ ಆದ್ಯತೆ ಕೊಡಬೇಕು ಮತ್ತು ಆದ್ಯತೆ ಕೊಟ್ಟು ಹೆಚ್ಚಿನ ಮಟ್ಟಕ್ಕೆ ಬರುವ ಹಾಗೆ ರೋಡ್ ಕೆಲಸ ತೆಗೆದು ಕೊಳ್ಳಬೇಕು ಎಂದು ಹೇಳಿದಾರೆ. ಇನ್ನು ಎಲ್ಲ ಡಿಸ್ಟ್ರಿಕ್ಟ್ ಬೋರ್ಡ ರೋಡ್ಸ್ ಅವುಗಳನ್ನು ನಾವು ತೆಗೆದುಕೊಂಡು ಉತ್ತಮಗೊಳಿಸುವುದಕ್ಕೆ ಖರ್ಚುಮಾಡಬೇಕು. ಅದೇ ರೀತಿ ರೂರಲ್ ಕಮ್ಯುನಿಕೇಶನ್ ರೋಡ್ಸ್ ಅಂದರೆ ಹಳ್ಳಿಯಿಂದ ಮಾರ್ಕೆಟ್ ಪ್ಲೇಸಿಗೆ ಸಂಬಂಧ ಇರತಕ್ಕ ರೋಡಿಗೆ ಆಧ್ಯತೆ ಕೊಟ್ಟು ಇಂಪ್ರೂವ್ ಮಾಡಬೇಕು ಎಂದು ಹೇಳಿದ್ದಾರೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ಬೆಂಗಳೂರು ಹಾಗೂ ಇಂಡಸ್ಟ್ರಿಯಲ್ ಪಟ್ಟಣಗಳಲ್ಲಿ ಟ್ರಾಫಿಕ್ ಜಾಸ್ತಿ ಇರುತ್ತದೆ, ಭಾರವಾದ ವಾಹನಗಳ ಓಡಾಟ ಜಾಸ್ತಿ ಇರುವುದರಿಂದ ದೊಡ್ಡ ದೊಡ್ಡ ಪಟ್ಟಣದಲ್ಲಿ ರಿಂಗ್ ರೋಡ್ ಹಾಕಬೇಕು ಎಂದು ಎಂದು ಸಲಹೆ ಮಾಡಿದ್ದಾರೆ. ಎಲ್ಲಿಭಾರಿ ಟ್ರಾಫಿಕ್ ಇದೆಯೋ ಅಂಥಲ್ಲಿ ಇರತಕ್ಕ ರೇಲ್ವೇ ಕ್ರಾಸಿಂಗ್‌ನಲ್ಲಿ ಓವರ್ ಬ್ರಿಡ್ ಅಥವಾ ಅಂಡರ್ ಬ್ರಿಡ್ ಕಟ್ಟಿಸಬೇಕೆಂದು ಸಲಹೆ ಮಾಡಿದ್ದಾರೆ. ಕಮ್ಯುನಿಟಿ ಡೆವಲಪ್‌ಮೆಂಟ್ ಕ್ಷೇತ್ರದಲ್ಲಿ ಮೊದಲು ಸಣ್ಣ ಸಣ್ಣ ಲಾರಿಗಳು ಓಡಾಡುತ್ತಿದ್ದವು. ಈಗ ಅಲ್ಲಿ ಹೆವೀ ವೆಹಿಕಲ್ಸ್ ಓಡಾಡುತ್ತವೆ. ಭಾರವಾದ ವಾಹನಗಳ ಓಡಾಟ ತಡೆಯುವುದು ಈಗ ಇರತಕ್ಕ ರೋಡುಗಳಿಗೆ ಸಾಧ್ಯವಿಲ್ಲ. ಆದುದರಿಂದ ಇಂಥ ರೋಡ್ಸ್ ಸ್ಟ್ರೆಂಗ್‌ತನ್ ಮಾಡುವುದು ಆವಶ್ಯಕವಿದೆ. ಕಬ್ಬು ಬೆಳೆಯುತಕ್ಕ ಪ್ರದೇಶದಲ್ಲಿ ಸಕ್ಕರೆ ಕಾರಖಾನೆಗೆ ಕಬ್ಬು ತೆಗೆದುಕೊಂಡು ಹೋಗುವುದಕ್ಕೆ ರೋಡ್ ಮಾಡಬೇಕಾಗುತ್ತದೆ. ಇದಕ್ಕೆ ಆದ್ಯತೆ ಕೊಟ್ಟು ರೋಡ್ ಮಾಡಬೇಕು ಎಂದು ನಿಯಮ ಹಾಕಿಕೊಂಡಿದ್ದೇವೆ. ಈ ನಿಯಮದ ಪ್ರಕಾರ ರೋಡ್ ಮಾಡುವಾಗ್ಗೆ ಬ್ರಿಜಿಸ್ ಹಾಕುವುದು ಆಸ್ಫಾಲ್ಟ್ ಮಾಡುವುದು ಈ ಕಾರ್ಯಕ್ರಮದ ಬಗ್ಗೆ ಮುಂದೆ ತೀರ್ಮಾನ ಮಾಡುತ್ತೇವೆ. ಈ ಮಾತನ್ನು ನಾನು ಎತಕ್ಕೆ ಹೇಳುತ್ತಿದ್ದೇನೆಂದರೆ, ನನ್ನ ಕಾನಸ್ಟಿಟ್ಯುಯನ್ಸಿಯಲ್ಲಿ ಏನೂ ಕೆಲಸ ಆಗಲಿಲ್ಲ ಎಂದು ಕೆಲವು ಸದಸ್ಯರು ಹೇಳುತ್ತಾರೆ. ಇದು ಒಂದು ಜಿಲ್ಲೆಯ ಪ್ರಶ್ನೆಯಲ್ಲ. ಇದು ಇಡೀ ದೇಶದ ಪ್ರಶ್ನೆ. ಇಡೀ ಮೈಸೂರು ರಾಜ್ಯದ ಪ್ರಶ್ನೆ ಯಾಗಿರುವುದರಿಂದ ಇದನ್ನು ಸಮಗ್ರ ದೃಷ್ಟಿಯಿಂದ ನೋಡಿಕೊಂಡು ಎಲ್ಲೆಲ್ಲಿ ಏನೇನು ಕೆಲಸ ಮಾಡಬೇಕಾಗಿದೆ ಎಂಬುದನ್ನು ನೋಡಿಕೊಂಡು ಕೆಲಸ ಮಾಡಬೇಕಾಗುತ್ತದೆ.

ಇನ್ನು ಈ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಂಥ ವಿಚಾರ ಹೇಳುವುದಾದರೆ, ನಮ್ಮ ರಾಜ್ಯ ಸರಕಾರದಲ್ಲಿ ಎಲ್ಲ ಡಿಪಾರ್ಟ್‌ಮೆಂಟಿಗಿಂತಲೂ ಹೆಚ್ಚು ದುಡ್ಡು ಖರ್ಚು ಮಾಡತಕ್ಕಂಥ ಡಿಪಾರ್ಟ್‌ಮೆಂಟು ಇದು ಆಗಿದೆ. ಈ ಡಿಪಾರ್ಟ್‌ಮೆಂಟಿನಲ್ಲಿ ಕನ್‌ಸ್ಟ್ರಕ್ಷನ್ ಆಕ್ಟಿವಿಟೀಜ್, ಡೆವಲಪ್‌ಮೆಂಟ್ ವರ್ಕ್ಸ್, ಇಲೆಕ್ಟ್ರಿಸಿಟಿ, ರೋಡ್ಸ್, ಸೇತುವೆ, ದೊಡ್ಡ ದೊಡ್ಡ ಕೆರೆ ಕಟ್ಟುವುದು ಮುಂತಾದ ಅನೇಕ ಕೆಲಸಗಳ ಜವಾಬ್ದಾರಿ ಈ ಡಿಪಾರ್ಟ್‌ಮೆಂಟ್ ಮೇಲೆ ಇರುವುದರಿಂದ ಈ ಡಿಪಾರ್ಟ್‌ಮೆಂಟಿನಲ್ಲಿ ಇದ್ದು ಕೆಲಸ ಮಾಡತಕ್ಕಂಥ ಸಿಬ್ಬಂದಿ ತೃಪ್ತಿ ಹೊಂದಿರಬೇಕು. ಸಿಬ್ಬಂದಿಗೆ ತೃಪ್ತಿ ಬರುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತಾ ಇದ್ದೇವೆ ಎಂದು ಸ್ಪಷ್ಟಪಡಿಸುತ್ತೇನೆ.

ಇನ್ನು ಕೇಂದ್ರ ಸರಕಾರದವರು ಆಲ್ ಇಂಡಿಯಾ ಸರ್ವಿಸ್ ಆಫ್ ಎಂಜಿನಿಯರ್ಸ್ ಮಾಡಬೇಕೆಂದು ವಿಚಾರ ಮಾಡಿದ್ದಾರೆ. ಇದನ್ನು ಮಾಡಿದರೆ ನಮ್ಮ ಇಲಾಖೆಯಲ್ಲಿ ಇರತಕ್ಕ ಅನೇಕ ಹುದ್ದೆಗಳಿಗೆ ಅನುಕೂಲವಾಗುತ್ತದೆ. ಇವರ ಸರ್ವಿಸ್ ಕಂಡೀಷನ್ಸ್ ಬಹುಮಟ್ಟಿಗೆ ಇಂಪ್ರೂವ್ ಆಗುತ್ತವೆ. ಇದರ ರಚನೆಯ ಬಗ್ಗೆ ನಮ್ಮ ಒಪ್ಪಿಗೆ ಕೊಟ್ಟಿದ್ದೇವೆ. ಕೇಂದ್ರ ಸರಕಾರದವರು ಇದನ್ನು ಬಹು ತೀವ್ರಗತಿಯಿಂದ ವಿಚಾರ ಮಾಡುತ್ತಿದ್ದಾರೆ. ಇನ್ನೊಂದು ನಾಲ್ಕಾರು ತಿಂಗಳುಗಳಲ್ಲಿ ಏನಾದರೂ ಒಂದು ನಿರ್ಣಯ ಕೇಂದ್ರ ಸರಕಾರದವರು ತೆಗೆದುಕೊಳ್ಳಬಹುದು. ಆಲ್ ಇಂಡಿಯಾ ಸರ್ವಿಸ್ ಆಫ್ ಎಂಜಿನಿಯರ್ಸ್ ಕಾರ್ಯರೂಪದಲ್ಲಿ ಬಂದರೆ ದೊಡ್ಡ ದೊಡ್ಡ ಹುದ್ದೆಯಲ್ಲಿರತಕ್ಕ ಚೀಫ್ ಎಂಜಿನಿಯರ್ಸ್, ಸೂಪರಿಂಟೆಂಡಿಂಗ್ ಎಂಜಿನಿಯರ್ಸ್, ಎಕ್ಸಿಕ್ಯೂಟಿವ್ ಎಂಜಿನಿಯರ್ಸ್ ಇವರುಗಳಿಗೆ ಬಹಳ ಅನುಕೂಲವಾಗುತ್ತದೆ.

ಇನ್ನು ಜೂನಿಯರ್ ಎಂಜಿನಿಯರ್ಸ್ ಬಗ್ಗೆ ಹೇಳುವುದಾದರೆ ಬಹಳ ಜನರು ನೇರವಾಗಿ ಪಿ.ಡಬ್ಲ್ಯು. ಇಲಾಖೆಯಲ್ಲಿ ಜೂನಿಯರ್ ಎಂಜಿನಿಯರ್ಸ್ ಆಗಿ ಸೇರುತ್ತಾರೆ. ನಮ್ಮ ಮೈಸೂರು ರಾಜ್ಯದಲ್ಲಿ 16 ಎಂಜಿನಿಯರಿಂಗ್ ಕಾಲೇಜುಗಳು ಇವೆ. ಬಹುಶಃ ಇಷ್ಟು ದೊಡ್ಡ ಪ್ರಮಾಣದಲ್ಲಿ ಎಂಜಿನಿಯರಿಂಗ್ ಕಾಲೇಜುಗಳು ಬೇರೆ ಯಾವ ಸ್ಟೇಟಿನಲ್ಲಿಯೂ ಇಲ್ಲ. ಈ ರೀತಿಯಾಗಿ ಇದ್ದರೂ ಕೂಡ ನಮಗೆ ಬೇಕಾದಷ್ಟು ಎಂಜಿನಿಯರಿಂಗ್ ಗ್ರಾಜ್ಯುಯೇಟ್ಸ್ ನಮ್ಮಲ್ಲಿ ಬರುತ್ತಾ ಇಲ್ಲ. ಇದಕ್ಕೆ ಕಾರಣ ಇರಲಿಕ್ಕೇಬೇಕು. ಅವರು ಬಾರದೇ ಇರುವುದಕ್ಕೆ ಕಾರಣ ಅವರ ದೋಷ ಅಲ್ಲ. ನಮ್ಮ

ರಾಜ್ಯದಲ್ಲಿ ಇರತಕ್ಕ ಸಂಬಳದ ಸ್ಕೇಲ್ಸ್ ಆಕರ್ಷಣೀಯವಾಗಿಲ್ಲ. ಆದುದರಿಂದ ಅವರು ಹೊರಗಡೆ ಹೋಗುತ್ತಾರೆ. ನಾವು ಕರೆಯುತ್ತೇವೆ, ಆದರೆ ಅವರು ಬರುವುದಿಲ್ಲ. ಅದಕ್ಕಾಗಿ ಜೂನಿಯರ್ ಇಂಜಿನಿಯರ್ ಅವರ ಸ್ಕೇಲುಗಳನ್ನು ಹೆಚ್ಚು ಮಾಡಬೇಕು ಎನ್ನುವ ವಿಚಾರವನ್ನು ಮಾಡುತ್ತಿದ್ದೇವೆ. ಅಂತಿಮ ನಿರ್ಧಾರವನ್ನು ಇನ್ನೂ ತೆಗೆದುಕೊಂಡಿಲ್ಲ. ಈಗಾಗಲೇ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಜೂನಿಯರ್ ಇಂಜನಿಯರಿಗೆ 250 ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಸಿವಿಲ್ ಇಂಜನೀಯರ್‌ಗಳಿಗೆ 200 ರೂಪಾಯಿಗಳ ಸಂಬಳ ಕೊಡುತ್ತಿದ್ದಾರೆ. ಇವರು ಸಹ ಅವರ ಹಾಗೆ 4-5 ವರ್ಷ ಓದಿರುತ್ತಾರೆ. ಹೆಚ್ಚು ಹಣ ಖರ್ಚುಮಾಡಿರುತ್ತಾರೆ. ಕ್ಯಾಪಿಟೇಷನ್ ಫೀ ಕೊಡಬೇಕಾಗುತ್ತದೆ. ಮೆಡಿಕಲ್ ಗ್ರ್ಯಾಜುಯೆಟ್‌ಗಳನ್ನು ಗೆಜೆಟೆಡ್ ರ್‍ಯಾಂಕ್‌ನಲ್ಲಿ ತೆಗೆದು ಕೊಳ್ಳುತ್ತಾರೆ. ಆದರೆ ಈ ಇಂಜನೀಯರ್‌ಗಳನ್ನು ನಾನ್‌ಗೆಜೆಟೆಡ್ ರ್‍ಯಾಂಕ್‌ನಲ್ಲಿ ತೆಗೆದುಕೊಳ್ಳು ತ್ತಾರೆ. ಇದೇ ಕಾರಣಗಳಿಂದ ಸಾಕಷ್ಟು ಪ್ರಮಾಣದಲ್ಲಿ ಜೂನಿಯರ್ ಇಂಜನಿಯರ್‌ಗಳು ಬರುತ್ತಿಲ್ಲ. ಅದ್ದರಿಂದ ಇವರುಗಳನ್ನು ಗೆಜೆಟೆಡ್ ಆಗಿ ತೆಗೆದುಕೊಳ್ಳಬೇಕು, ಸಂಬಳವನ್ನು 200 ರೂಪಾಯಿ ಗಳಿಂದ 250 ರೂಪಾಯಿಗಳವರೆಗೆ ಹೆಚ್ಚಿಸಬೇಕೆಂದು ವಿಚಾರ ಮಾಡುತ್ತಿದ್ದೇವೆ. ಅಂತಿಮ ನಿರ್ಣಯ ತೆಗೆದುಕೊಂಡಿಲ್ಲ. ಇನ್ನು ಕೆಲವು ದಿವಸಗಳಲ್ಲಿ ಇದರ ನಿರ್ಣಯ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಇಲಾಖೆಯವರು ಮಾತ್ರ ಏನೂ ಕೆಲಸ ಕಾರ್ಯಗಳನ್ನು ಮಾಡಿಲ್ಲ, ದುಡ್ಡನ್ನು ತಿಂದು ಹಾಕುತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ. ನಮಗೆ ಎಷ್ಟು ಹಣ ಕೊಟ್ಟರೂ ಖರ್ಚುಮಾಡುತ್ತೇವೆ. ಮಾಡುವ ಶಕ್ತಿ ಇದೆ. ಹೆಚ್ಚು ಹಣ ಖರ್ಚುಮಾಡುವ ಪ್ರಸಂಗ ಬಂದಾಗ ಸಭೆಯ ಅನುಮತಿ ತೆಗೆದುಕೊಳ್ಳುತ್ತೇವೆ. 9 ಕೋಟಿ ರೂಪಾಯಿಗಳ ಪ್ರಾವಿಷನ್ ಇದ್ದರೆ 17 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ನಾವು ಯಾವ ರೀತಿ ನಮ್ಮ ಗುರಿಯನ್ನು ಸಾಧಿಸಿದ್ದೇವೆ ಎಂದರೆ ಫಾರ್‌ಮೇಷನ್ ಆಫ್ ರೋಡ್ಸ್ 329 ಮೈಲಿ ಮಾಡಬೇಕೆಂದು ಇದ್ದ ಗುರಿ 971 ಮೈಲಿಯವರೆಗೆ ಮಾಡಿದ್ದೇವೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ 602 ಮೈಲಿ ಮಾಡಬೇಕಾಗಿದ್ದು 2886 ಮೈಲಿ ಮಾಡಿದ್ದೇವೆ. ರೂರಲ್ ರೋಡ್ಸ್ 1500 ಮೈಲಿ ಮಾಡಬೇಕಾಗಿದ್ದು 12,040 ಮೈಲಿ ಮಾಡಿದ್ದೇವೆ. ಮಲೆನಾಡಿನಲ್ಲಿ ಹೆಚ್ಚಿಗೆ ಮಾಡದೆ ಇರಬಹುದು, ಬಯಲು ಸೀಮೆಯಲ್ಲಿ (ಶಿವಮೊಗ್ಗಾ, ತುಮಕೂರು) ಉತ್ತಮವಾದ ರೀತಿಯಲ್ಲಿ ಮಾಡಿದ್ದೇವೆ. ಅಲ್ಲಿ ಎಂ.ಎಸ್.ಆರ್.ಟಿ.ಸಿ. ಬಸ್‌ಗಳು ಈಗಾಗಲೇ ಓಡಾಡುತ್ತಿವೆ. ಡಾಂಬರ್ ರೋಡ್ಸ್ 865 ಮೈಲಿ ಮಾಡಬೇಕಾಗಿದ್ದು 3,256 ಮೈಲಿಗಳವರೆಗೆ ಮಾಡಿದ್ದೇವೆ. ಈ ರೀತಿಯಾಗಿ ಇದ್ದ ಗುರಿ ಗಿಂತಲೂ ಹೆಚ್ಚು ಕೆಲಸವನ್ನು ಸಾಧಿಸಿದ್ದೇವೆ ಎನ್ನುವುದಕ್ಕೆ ಹೇಳುತ್ತೇದ್ದೇನೆ.

ಶ್ರೀಮಾನ್ ರೇವಣ್ಣ ಸಿದ್ದಪ್ಪನವರು ಮತ್ತು ಇತರ ಅನೇಕ ಸದಸ್ಯರುಗಳು ಮತ್ತೊಂದು ಮಾತನ್ನು ಹೇಳುತ್ತಿದ್ದರು. ಕಂಟ್ರಾಕ್ಟರುಗಳಿಗೆ ನೀವು ಬಹಳ ಬಿಗಿಯಾದ ನಿರ್ಬಂಧಗಳನ್ನು ಹಾಕಿ ದ್ದೀರಿ ಎಂದು. ಎ.ಕ್ಲಾಸ್, ಬಿ.ಕ್ಲಾಸ್, ಸಿ.ಕ್ಲಾಸ್, ಡಿ.ಕ್ಲಾಸ್ ಎಂದು ಮಾಡಿ ದುಡ್ಡು ಇದ್ದವರಿಗೆ ಮಾತ್ರ ಅನುಕೂಲವಾಗುವಂತೆ ಮಾಡಿದ್ದೀರಿ, ಈ ರೂಲ್ಸನ್ನು ರಿಲ್ಯಾಕ್ಸ್ ಮಾಡಬೇಕು ಎಂದು ಸಹ ಹೇಳಿದರು. ಇದರ ಬಗ್ಗೆ ಈಗಾಗಲೆ ಒಂದು ನಿರ್ಣಯವನ್ನು ಮಾಡಿ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ, ಅದನ್ನು ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಸಾಲ್ವೆನ್ಸಿ ಸರ್ಟಿಫಿ ಕೇಟ್ ಬಗ್ಗೆ ಹೇಳುವುದಾದರೆ, ಎ.ಕ್ಲಾಸ್ ಕಂಟ್ರಾಕ್ಟರ್ 10 ಲಕ್ಷ ರೂಪಾಯಿಗಳ ಸಾಲ್ವೆನ್ಸಿ ಪತ್ರವನ್ನು ನೀಡಬೇಕಾಗಿತ್ತು, ಬಿ. ಕ್ಲಾಸ್ ಕಂಟ್ರಾಕ್ಟರ್ 5 ಲಕ್ಷ ರೂಪಾಯಿಗಳ ಸಾಲ್ವೆನ್ಸಿ ಪತ್ರ ವನ್ನು ನೀಡಬೇಕಾಗಿತ್ತು. ಇದನ್ನು ಈಗ ಬದಲಾವಣೆ ಮಾಡಿ, ಎ. ಕ್ಲಾಸ್ ಕಂಟ್ರಾಕ್ಟರ್ 10 ಲಕ್ಷಕ್ಕೆ ಬದಲು 5 ಲಕ್ಷದ ಸಾಲ್ವೆನ್ಸಿ ಪತ್ರವನ್ನು ನೀಡಿದರೆ ಸಾಕು, ಬಿ.ಕ್ಲಾಸ್ ಕಂಟ್ರಾಕ್ಟರ್ 5 ಲಕ್ಷಕ್ಕೆ ಬದಲು 2 ಲಕ್ಷದ ಸಾಲ್ವೆನ್ಸಿ ಪತ್ರವನ್ನು ನೀಡಿದರೆ ಸಾಕು ಎಂದು ಮಾಡಿದ್ದೇವೆ. ಅಲ್ಲದೆ ಹೊಸ ಬದಲಾವಣೆಯ ಪ್ರಕಾರ ಒಂದು ಲಕ್ಷದ ಸಾಲ್ವೆನ್ಸಿ ಪತ್ರವನ್ನು ನೀಡಿದರೆ ಸಿ.ಕ್ಲಾಸ್ ಕಂಟ್ರಾಕ್ಟರ್ ಆಗುತ್ತಾನೆ. 5 ರಿಂದ 2 ಸಾವಿರದವರೆಗೆ ಸಾಲ್ವೆನ್ಸಿ ಪತ್ರವನ್ನು ನೀಡಿದರೆ 4-5 ನೇ ದರ್ಜೆಯ ಕಂಟ್ರಾಕ್ಟರ್ ಆಗುತ್ತಾನೆ. ಹೆಚ್ಚಿನ ಸಂಖ್ಯೆಯಲ್ಲಿ ಕಂಟ್ರಾಕ್ಟರ್‌ಗಳು ಬರಬೇಕೆಂದು ಈ ರೀತಿ ಇಳಿ ಸಿದ್ದೇವೆ. ಹೆಚ್ಚಿನ ಸಂಖ್ಯೆಯಲ್ಲಿ ಕಂಟ್ರಾಕ್ಟರ್‌ಗಳು ಇದ್ದರೆ ಸರ್ಕಾರದವರಿಗೆ ಹೆಚ್ಚಿನ ಲಾಭ ಬರು ತ್ತದೆ. ಟೆಂಡರ್ ಕರೆದಾಗ ಪೈಪೋಟಿಯಿಂದ ರೇಟನ್ನು ಕಡಮೆ ಕೊಡುತ್ತಾರೆ. ಇದರಿಂದ ಹೆಚ್ಚು ಉಳಿದರೆ ಸರ್ಕಾರದವರು ಇನ್ನೂ ಹೆಚ್ಚಿನ ಕೆಲಸಗಳನ್ನು ಮಾಡಿಸಬಹುದು. ಕೇವಲ 8-10 ಜನ ಕಂಟ್ರಾಕ್ಟರ್‌ಗಳು ಮಾತ್ರವಿದ್ದರೆ ಅವರವರೇ ಮಾತನಾಡಿಕೊಂಡು ಹೆಚ್ಚಿನ ರೇಟನ್ನು ಹಾಕುತ್ತಾರೆ. ಇದನ್ನು ತಿಳಿದುಕೊಂಡು ಈ ರೀತಿ ಇಳಿಸಿದ್ದೇವೆ. ಮೊದಲು ಸಾಲ್ವೆನ್ಸಿ ಪತ್ರವನ್ನು ಕೊಡಬೇಕೆಂದು ಮಾಡಿದ್ದೆವು. ಈಗ 3-4ನೇ ದರ್ಜೆಯ ಕಂಟ್ರಾಕ್ಟರ್‌ಗಳು ಕನ್‌ಸರ್‌ವೆನ್ಸಿ ಪತ್ರಗಳನ್ನು ಬ್ಯಾಂಕಿ ನಿಂದ ಕೊಟ್ಟರೆ ನಡೆಯುತ್ತದೆ ಎಂದು ಮಾಡಿದ್ದೇವೆ. ಮೊದಲು ತಹಶಿಲ್‌ದಾರರಿಂದ, ಜಿಲ್ಲಾಧಿಕಾರಿ ಗಳಿಂದ ತರಬೇಕಾಗಿತ್ತು, ಈಗ ಬ್ಯಾಂಕ್‌ನಿಂದ ತಂದರೆ ಆಗುತ್ತದೆ ಎಂದು ಹೇಳಿದ್ದೇವೆ. ಸಾಲ್ವೆನ್ಸಿ

(ಶ್ರೀ ವೀರೇಂದ್ರ ಪಾಟೀಲ್)

ಪತ್ರವನ್ನು 2 ವರ್ಷಕ್ಕೆ ಒಂದು ಸಾರಿ ಕೊಡಬೇಕಾಗಿತ್ತು. ಈಗ 3 ವರ್ಷಕ್ಕೆ ಒಂದು ಸಾರಿ ಕೊಟ್ಟರೆ ಸಾಕು ಎಂದು ಹೇಳಿದ್ದೇವೆ. ಪ್ರತಿ ವರ್ಷ ರಿಜಿಸ್ಟ್ರೇಷನ್ ಮಾಡಿಸಬೇಕಾಗಿತ್ತು. ಈಗ 2 ವರ್ಷಕ್ಕೆ ಒಂದು ಸಾರಿ ಮಾಡಿಸಿದರೆ ಸಾಕು ಎಂದು ಹೇಳಿದ್ದೇವೆ. ಪ್ರತಿಯೊಂದು ಸಲ ರಿಜಿಸ್ಟ್ರೇಷನ್ ರಿನ್ಯೂಯಲ್ ಮಾಡುವಾಗ ರೆಸಿಡೆನ್ಸಿಯಲ್ ಸರ್ಟಿಫಿಕೇಟ್ ಕೊಡಬೇಕಾಗಿತ್ತು. ಈಗ 2–3 ವರ್ಷಕ್ಕೆ ಒಂದು ಸಾರಿ ತಂದು ಕೊಟ್ಟರೆ ಸಾಕು ಎಂದು ಹೇಳಿದ್ದೇವೆ. ಯಾರಾದರೂ ಕಂಟ್ರಾಕ್ಟರ್ ಕೆಲಸ ಮಾಡಬೇಕಾದರೆ ಅನುಭವ ಇರಬೇಕಾಗುತ್ತದೆ. ಎಲ್ಲಿಯಾದರೂ ಬೇರೆ ಇಲಾಖೆಯಲ್ಲಿ ಕೆಲಸಮಾಡಿದ್ದರೆ, ಅಥವ ಬೇರೆ ರಾಜ್ಯದಲ್ಲಿ ಕೆಲಸಮಾಡಿದ್ದರೆ ಸಾಕು, ಎಂದು ತೀರ್ಮಾನ ಮಾಡಿದ್ದೇವೆ.

ಫ್ರೆಷ್ ಗ್ರ್ಯಾಜುಯೆಟ್ಸ್‌ಗಳು ಸರ್ಕಾರಿ ನೌಕರಿಗೆ ಸೇರದೆ ಕಂಟ್ರಾಕ್ಟರ್ ಕೆಲಸ ಮಾಡು ತ್ತೇವೆ ಎಂದರೆ ಅವರಿಗೂ ಅನುಕೂಲ ಮಾಡಿಕೊಡುತ್ತೇವೆ. ಇಂಜನೀಯರಿಂಗ್ ಗ್ರ್ಯಾಜುಯೆಟ್ ಗಳು ಬಿ. ಕ್ಲಾಸ್ ಕಂಟ್ರಾಕ್ಟ್‌ದಾರರಾಗಿಯೂ, ಡಿಪ್ಲೋಮಾ ಹೋಲ್ಡರ್‌ಗಳು ಸಿ. ಕ್ಲಾಸ್ ಕಂಟ್ರಾಕ್ಟ್ ದಾರರಾಗಿಯೂ ಕೆಲಸ ಮಾಡಬಹುದು ಎಂದು ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದೇವೆ. ಅಲ್ಲದೆ ಗ್ರ್ಯಾಜುಯೆಟ್ ಇಂಜನೀಯರ್‌ಗಳು 5 ಲಕ್ಷದವರೆಗೆ ಕೆಲಸ ತೆಗೆದುಕೊಳ್ಳಬಹುದು ಎಂದು ಡಿಪ್ಲೋಮಾ ಹೋಲ್ಡರ್‌ಗಳು 2 ಲಕ್ಷದವರೆಗೆ ಕೆಲಸ ತೆಗೆದುಕೊಂಡು ಮಾಡಬಹುದು ಎಂದು ಮಾಡಿದ್ದೇವೆ. ಹೆಚ್ಚು ಹೆಚ್ಚು ಜನ ಕಂಟ್ರಾಕ್ಟರ್‌ಗಳು ಬರಲಿ ಎಂದು, ಹೆಚ್ಚು ಹೆಚ್ಚು ಅನುಕೂಲಗಳನ್ನು ಮಾಡಿ ಕೊಡೋಣ ಎಂದು ಈಗ ಇರುವ ನಿರ್ಭಂಧಗಳನ್ನು ಸಡಿಲಮಾಡಿದ್ದೇವೆ. ಇದರ ಬಗ್ಗೆ ವಿವರವಾಗಿ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. ಅದರ ಕಾಪಿಯನ್ನು ಮಾನ್ಯ ಸದಸ್ಯರುಗಳಿಗೆ ಕಳುಹಿಸಿ ಕೊಡುತ್ತೇನೆ.

ಈಗಾಗಲೆ ನಾನು ಹೇಳಿದಂತೆ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. 1965–66ರಲ್ಲಿ ಬಹಳಷ್ಟು ಹೊಸ ಕಾಮುಗಾರಿಗಳನ್ನು ಪ್ರಾರಂಭ ಮಾಡುವುದಕ್ಕೆ ಕೇಂದ್ರ ಸರ್ಕಾರದ ಮಂಜೂರಾತಿ ಪಡೆದಿದ್ದೇವೆ. ಅನೇಕ ದಿವಸಗಳಿಂದಲೂ ರೋಡ್‌ಗಳ ಕೆಲಸ ವಾಗಿರಲಿಲ್ಲ. ಈಗಾಗಲೇ ಐದೂವರೆ ಕೋಟಿ ರೂಪಾಯಿಗಳ ಎಸ್ಟಿಮೇಟನ್ನು ಕಳಿಸಿದ್ದೇವೆ. ಇದಕ್ಕೂ ಮೊದಲು 8 ಕೋಟಿ ರೂಪಾಯಿಗಳ ಎಸ್ಟಿಮೇಟನ್ನು ಕಳಿಸಿದ್ದೆವು. ಆದರೆ ಅವರು ಅದನ್ನು ಒಪ್ಪಿಕೊಂಡಿರಲಿಲ್ಲ. 1965–66 ರಲ್ಲಿ 809 ಲಕ್ಷ ರೂಪಾಯಿಗಳ ರಿವೈಸ್ಡ್ ಎಸ್ಟ್‌ಮೇಟನ್ನು ವೆಸ್ಟ್‌ಕೋಸ್ಟ್ ರೋಡಿಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೆವು. ಈಗಾಗಲೆ ಅವರ ಮಂಜೂರಾತಿ ಪಡೆದಿದ್ದೇವೆ. ಬೇಲ್‌ಗಾಲಿ ಜಂಕ್ಷನ್ (ಗೋವಾ ಬಾರ್ಡರ್) ರಸ್ತೆಗಾಗಿ ಮಾಡಿದ್ದ 140 ಲಕ್ಷದ ಎಸ್ಟಿಮೇಟನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಮಂಗಳೂರು ಕುಂದಾಪುರದ ರಸ್ತೆ ಮಾಡಿಸಲು ಅನೇಕ ವರ್ಷಗಳಿಂದಲೂ ಹೇಳುತ್ತಲಿದ್ದೇವೆ. ಬರೆಯುತ್ತ ಲಿದ್ದೇವೆ. ಇದರ ಮೇಲೆ ಅವರು ಸಹ ಒಪ್ಪಿಕೊಂಡು ಈ ಬಾಬಿಗಾಗಿ 8—9 ಲಕ್ಷರೂಪಾಯಿಗಳನ್ನು ಕೊಡುವುದಕ್ಕಾಗಿ ಒಪ್ಪಿಕೊಂಡಿದ್ದಾರೆ. ಇದಕ್ಕಾಗಿ ಖರ್ಚುಮಾಡುವ ಹಣವೆಲ್ಲಾ ಕೇಂದ್ರ ಸರ್ಕಾರದ್ದು, ನಮ್ಮ ರಾಜ್ಯದ ಹಣ ಸ್ವಲ್ಪವೂ ಇಲ್ಲ. ಮಂಗಳೂರು ಕುಂದಾಪುರದವರಿಗೆ ಡಬ್ಬಲ್ ಲೈನ್ ಮಾಡಬೇಕೆಂದು, 22 ಫೂಟ್ ಇರುವ ಡಾಂಬರ್ ರೋಡ್ ಮಾಡುವುದಕ್ಕೆ ಕಳಿಸಿದ್ದೇವೆ. ಅವರು ಒಪ್ಪಿಕೊಳ್ಳುತ್ತಾರೆ, ಎಂದು ತಿಳಿದು ಈಗಾಗಲೇ ಎಸ್ಟಿಮೇಟ್ ತಯಾರಿಸಿ ಟೆಂಡರ್ ಕರೆದಿದ್ದೇವೆ. ಕೆಲಸ ಜಾಗ್ರತೆ ಪ್ರಾರಂಭವಾಗಬಹುದು. ಅದೂ ಅಲ್ಲದೆ ಕಾಳೀ ಪ್ರಾಜೆಕ್ಟ್‌ನಿಂದ ಗೋವಕ್ಕೆ ನೇರವಾದ ಸಂಪರ್ಕವಾಗಬೇಕೆಂದು ಕಾರವಾರದ ಮೇಲೆ ಒಂದು ಬ್ರಿಡ್ಜ್‌ನ್ನು ಕಟ್ಟ ಬೇಕಾಗಿದೆ. ಮೊದಲು ಕೇಂದ್ರಸರ್ಕಾರದವರು ತುರ್ತುಪರಿಸ್ಥಿತಿಯ ಕಾರಣ ಒಪ್ಪುವುದಿಲ್ಲವೆಂದು ತಿಳಿದಿದ್ದೆವು. ಈಗ 59.93 ಸಾವಿರಕ್ಕೆ ಎಸ್ಟಿಮೇಟ್ ಮಾಡಿ ಕೇಂದ್ರಸರ್ಕಾರಕ್ಕೆ ಕಳಿಸಿದ್ದೆವು. ಈಗಾಗಲೇ ಕೇಂದ್ರಸರ್ಕಾರದವರು ಒಪ್ಪಿಕೊಂಡು ಇದ್ದಾರೆ. ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಿದ್ದೇವೆ. ಈಗಾಗಲೇ ಕೆಲವು ಲಕ್ಷರೂಪಾಯಿಗಳ ಕೆಲಸವಾಗಿದೆ. ಈ ಒಂದು ಸೇತುವೆ ಯಾದರೆ ಗೋವಕ್ಕೆ ನೇರವಾದ ಸಂಪರ್ಕ ಕಾರವಾರದ ಮೂಲಕ ಆಗುತ್ತದೆಯೆಂದು ಹೇಳುತ್ತೇನೆ. ಗೋವಾದವರು ಸಹ ಈ ಕೆಲಸಕ್ಕೆ ಸಹಾಯ ಮಾಡುತ್ತಿದ್ದಾರೆ.

12-30 P.M.

ಮಂಗಳೂರು ಹಾಸನ ರೋಡ್ ಓರ್ ಕ್ಯಾರೀಯಿಂಗ್ ರೋಡ್, ಅದನ್ನು ಮಾಡಿರಿ ಎಂದು ಕೇಂಧ್ರ ಸರ್ಕಾರದವರು ಹೇಳಿದರು. ಆ ರೀತಿ ಮಾಡಿರಿ ಎಂದು ಹೇಳಿದಮೇಲೆ ಕೆಲಸ ಪ್ರಾರಂಭ ಮಾಡಿದೆವು. ಅಲ್ಲಿ ಎರಡು ಮಿಲಿಯನ್ ಟನ್ ಅದುರು ಸಾಗಿಸಬೇಕಾಗುತ್ತದೆ. ಅದರ ಸಲುವಾಗಿ

ಪಕ್ಕ ಡಂಬರ್ ರೋಡು ಮಾಡುವುದಕ್ಕೆ ರಿವೈಸ್ಡ್ ಎಸ್ಟಿಮೇಟ್ಸ್ 4 ಕೋಟಿ 29 ಲಕ್ಷ ಆಗಿದೆ. ಅದರಲ್ಲಿ 50 ಪರ್ಸೆಂಟು ಕೊಡುತ್ತೇವೆ ಎಂದು ಹೇಳಿದರು, ಅದು ಬಂದಿಲ್ಲ. ತಕರಾರಿನಲ್ಲಿ ಇದೆ. ಮೇಲಿಂದ ಮೇಲೆ ಒತ್ತಾಯ ಮಾಡುತ್ತಿದ್ದೇವೆ. ಶ್ರೀ ದೇವೇಗೌಡರು ಹೇಳಿದ್ದರಲ್ಲಿ ಸತ್ಯಾಂಶಗಳ ಇವೆ. ನಮಗೆ ಎಷ್ಟು ಬರಬೇಕಾಗಿತ್ತೋ ಅಷ್ಟು ಬಂದಿಲ್ಲ. ನಮ್ಮ ಪ್ರಯತ್ನಗಳು ನಡೆಯುತ್ತಾ ಇವೆ. ಈಗ ಬರಬಹುದು ಎನ್ನುವ ಆಸೆ ಕೂಡ ಇದೆ. ದುಡ್ಡು ತರುವುದಕ್ಕೆ ಏನು ಪ್ರಯತ್ನಗಳನ್ನು ಮಾಡ ಬೇಕೋ, ಆ ಪ್ರಯತ್ನಗಳನ್ನು ಮಾಡುವುದಕ್ಕೆ ಸರ್ಕಾರ ಹಿಂತಗೆಯುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟಪಡಿಸಬೇಕಾಗುತ್ತದೆ. 39 ಲಕ್ಷ ರೂಪಾಯಿ ಅಂದಾಜಿನ ತುಂಗಭದ್ರಾ ಹೊಸಪೇಟೆಯ ನ್ಯಾಷನಲ್ ಹೈವೇಸ್‌ನ್ನು 1965-66ರಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದೇವೆ. 72 ಲಕ್ಷ ರೂಪಾಯಿನ ಬಿಜಾಪುರ ಹಿತ್ತನಹಳ್ಳಿ ರಸ್ತೆಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಬಂದಿದೆ. ಅದು 30 ಮೈಲಿ ಅದೇ ರೀತಿ 23,24,600 ರೂಪಾಯಿನ ತುಂಗಭದ್ರ ಹರಿಹರ ರಸ್ತೆ ಕೆಲಸ ಈಗಾಗಲೇ ಜೋರಾಗಿ ನಡೆಯುತ್ತಾ ಇದೆ. ಕೆಲವು ದಿವಸದಲ್ಲಿ ಮುಗಿಯುವುದು. ಚಿತ್ರದುರ್ಗಾದಿಂದ ಷೋಲ್ಲಾಪುರಕ್ಕೆ ಹೋಗುವ ನ್ಯಾಷನಲ್ ಹೈವೇ ಇದೆ. ಮೈಸೂರು ಸಂಸ್ಥಾನದಿಂದ ಲಿಂಕ್ ರಸ್ತೆ ಮಾಡಬೇಕಾಗಿದೆ. ಇದಕ್ಕೆ ಕೇಂದ್ರ ಸರ್ಕಾರದವರು 75 ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ಅಲ್ಲಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಾ ಇದ್ದೇವೆ. ಅದೇ ರೀತಿ ನ್ಯಾಷನಲ್ ಹೈವೇಸ್, ಕೋಲಾರ, ತುಮಕೂರು, ಹರಿಹರ, ಬೆಳಗಾಂ ಮತ್ತು ನಿಪ್ಪಾಣಿ ಊರ ಹೊರಗೆ ಬೈಪಾಸ್ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಕೆಲಸ ಇಷ್ಟರಲ್ಲೇ ಪ್ರಾರಂಭ ಮಾಡುತ್ತೇವೆ. ಈ ರೀತಿ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಅನೇಕ ಕೆಲಸಕಾರ್ಯಗಳು ಈಗಾಗಲೇ ನಡೆಯುತ್ತಾ ಇವೆ.

ಶ್ರೀ ಸಂಜೀವನಾಥ ಐಕಳ.—ಗಂಗೋಲಿ ಹೊನ್ನಾವರ ಬ್ರಿಡ್ಜು ಅರ್ಧಕ್ಕೆ ನಿಂತಿದೆ.

ಶ್ರೀ ವೀರೇಂದ್ರಪಾಟೀಲ್.—ಗಂಗೋಲಿ ಬ್ರಿಜ್ ನಿಂತಿಲ್ಲ. ಕೆಲಸ ನಿಧಾನವಾಗಿ ನಡೆಯುತ್ತಾ ಇದೆ. ಕಂಟ್ರಾಕ್ಟರನ್ನು ಕರೆಸಿ ಹೇಳಿದ್ದೇವೆ. ಟೈಂ ನಿಗದಿ ಮಾಡಿ ಟೈಂನಲ್ಲಿ ಮುಗಿಸಬೇಕು ಎಂದು ಮಾಡಿದ್ದೇವೆ. ಬಹುಶಃ ಟೈಂನಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಿಧಾನವಾಗ ತಕ್ಕಂಥಾದ್ದು ಗೊತ್ತಿದೆ. ಸಭೆಯಲ್ಲಿ ಏತಕ್ಕೆ ನಿಧಾನವಾಗಿದೆ ಎಂದು ಹೇಳುವುದು ಕಷ್ಟವಾಗಿದೆ. ಗ್ಯಾಮನ್ಸ್ ಬಹಳ ದೊಡ್ಡ ಕಂಟ್ರಾಕ್ಟರ್, ಇಂಟರ್ ನ್ಯಾಷನಲ್ ಕಂಟ್ರಾಕ್ಟಿಂಗ್ ಫರ್ಮ್‌ನವರು ಕೆಲಸ ಮಾಡುತ್ತಾ ಇದ್ದಾರೆ. ಕಷ್ಟಗಳು ಬಂದಿವೆ. ಸಾಧ್ಯವಾದಮಟ್ಟಿಗೆ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದಷ್ಟು ತೀವ್ರವಾಗಿ ಮಾಡುತ್ತಾರೆ ಎನ್ನುವ ಭರವಸೆ ನನಗೆ ಇದೆ. ಈಗ ಮಂಗಳೂರು ಪೋರ್ಟಿನ ಬಗ್ಗೆ ಹೇಳಬೇಕಾದರೆ, ಪೋರ್ಟ್ ಕೆಲಸ, ರೋಡ್ಸ್, ಬಿಲ್ಡಿಂಗ್ಸ್ ಮಾಡಿರುವಂಥಾದ್ದು ಬಿಟ್ಟರೆ ಮತ್ತೆ ಹೆಚ್ಚಿನದೇನೂ ಮಾಡಿಲ್ಲ. ಕೆಲಸ ಕಾರ್ಯಗಳು ಆಗಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಅವರು ಹೇಳಿದಂತೆ ಎಸ್ಟಿಮೇಟ್ ರಿವೈಸ್ ಆಗಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇವೆ. 27 ಕೋಟಿ ರಿವೈಸ್ಡ್ ಎಸ್ಟಿಮೇಟ್ ಆಗಿದೆ. ಕೇಂದ್ರ ಸರ್ಕಾರದವರು ರಿವೈಸ್ಡ್ ಎಸ್ಟಿಮೇಟ್ಸ್ ಒಪ್ಪಿಲ್ಲ ಎಂದು ಕೆಲಸಕಾರ್ಯಗಳು ನಿಂತಿಲ್ಲ. ಕೆಲಸ ನಡೆಯುತ್ತಾ ಇದೆ. 4 ಕೋಟಿ 50 ಲಕ್ಷ ರೂಪಾಯಿ ಕೆಲಸಕಾರ್ಯಗಳನ್ನು ಕೇಂದ್ರ ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ. ಕೆಲಸಕಾರ್ಯಗಳನ್ನು ಪ್ರಾರಂಭಿಸಿ ಜನವರಿ 1966ರ ವರೆಗೆ ನಾವು ಖರ್ಚು ಮಾಡಿದಂತಾದ್ದು 3 ಕೋಟಿ 40 ಲಕ್ಷ ರೂಪಾಯಿ. ಮೊದಲು 1059 ಎಕರೆ ಪೋರ್ಟ್‌ಗೆ ಬೇಕು ಎಂದು ಹೇಳಿದ್ದರಲ್ಲಿ 1,011 ಎಕರೆ ಅಕ್ವೈರ್ ಮಾಡಿಕೊಟ್ಟಿದ್ದೇವೆ. ಅಕ್ವಿಸಿಷನ್ ಕಾಂಪೆನ್‌ಸೇಷನ್‌ಗೆ ಸುಮಾರು 105 ಲಕ್ಷ ಕೊಟ್ಟಿದ್ದೇವೆ. ಈ ರೀತಿಯಿಂದ ಕೆಲಸ ನಡೆಯುತ್ತಾ ಇದೆ. ಅವರು ಹೇಳಿದಂತೆ ಏನೂ ಕೆಲಸಕಾರ್ಯಗಳು ನಡೆದಿಲ್ಲ ಎಂದರೆ ನಿಜವಲ್ಲ ಟರ್ನಿಂಗ್ ಬೇಸಿನ್ ಎಕ್ಸ್‌ಪೆನ್ಷನ್ನಿಗೆ 88 ಲಕ್ಷ ಇದೆ. ಮೊನ್ನೆ ಡೆಲ್ಲಿಗೆ ಹೋದಾಗ, ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ತೀವ್ರವಾಗಿ ಮಂಜೂರು ಮಾಡಿ ಕಳುಹಿಸಿಕೊಡುವುದಾಗಿ ಭರವಸೆ ಕೊಟ್ಟಿದ್ದಾರೆ. ಅದೇ ರೀತಿ ಒಂದೂವರೆ ಕೋಟಿ ರೂಪಾಯಿನ ಡ್ರೆಜ್ ಹೊರಗಿನಿಂದ ತರಿಸಿಕೊಳ್ಳಬೇಕಾಗುತ್ತದೆ. ಇಷ್ಟರಲ್ಲೇ ಡ್ರೆಜರ್ ಸಲುವಾಗಿ ಗ್ಲೋಬಲ್ ಟೆಂಡರ್ ಕಾಲ್‌ಫಾರ್ ಮಾಡುತ್ತೇವೆಂದು ಹೇಳಿದ್ದಾರೆ. ಬ್ಯಾಕ್‌ವಾಟರ್ ಡ್ರೆಜಿಂಗ್‌ಗೆ ಎಸ್ಟಿಮೇಟ್ ತಯಾರಾಗುತ್ತಿದೆ. ಕೆಲಸ ನಿಲ್ಲುವ ಹಾಗಿಲ್ಲ. ತೀವ್ರಗತಿಯಿಂದ ನಡೆಯುತ್ತಾ ಇದೆ. ಕೇಂದ್ರ ಸರ್ಕಾರದವರು ನಾಲ್ಕೂವರೆ ಕೋಟಿ ಖರ್ಚು ಮಾಡಿದ್ದಾರೆ. ಆದ್ದರಿಂದ ಕೆಲಸ ತೆಗೆದುಕೊಳ್ಳಬೇಕು. ನಿಲ್ಲಿಸುವ ಪ್ರಶ್ನೆ ಇಲ್ಲ. ಕೆಲಸ ಮುಂದುವರೆಸುತ್ತಲೇ ಇದೆ ಎಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಪುನರ್‌ವಸತಿ ಪ್ರಶ್ನೆ ಇತ್ಯರ್ಥವಾಗಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ತಮಗೆ ಗೊತ್ತಿದೆ. ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಏನು ಪರಿಸ್ಥಿತಿ ಇದೆ ಎಂದು ನೋಡಿಕೊಂಡು ಪುನರ್ವಸತಿ ಕ್ರಮ ಹಾಕಿಕೊಂಡಿ

(ಶ್ರೀ ವೀರೇಂದ್ರ ಪಾಟೀರ್)

ದ್ದೇವೆ. ನೀರು ಇಲ್ಲ ಎಂದು ಗೊತ್ತಿದೆ. ಅದಕ್ಕೋಸ್ಕರ ಭಾಗಗಳನ್ನು ಡೀಪನ್ ಮಾಡಿ ಎಂದು ಹೇಳಿದ್ದೇವೆ, ಎಲೆಕ್ಟ್ರಿಸಿಟಿ ಬೋರ್ಡಿನವರು ತೀವ್ರವಾಗಿ ಎಲೆಕ್ಟ್ರಿಸಿಟಿ ಸಪ್ಲೈ ಮಾಡಬೇಕು ಎಂದು ಹೇಳಿದ್ದೇವೆ. ಕೆಲಸಕಾರ್ಯಗಳು ಆಗುತ್ತಿವೆ. ಅಂಥಾದ್ದು ಕುಂದುಕೊರತೆಗಳು ಇದ್ದರೆ ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಹೇಳಿದರೆ ಯೋಗ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡು ತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ (ಕೌಪ್).—ಪೋರ್ಟಿನ ಕೆಲಸ ಯಾವಾಗ ಮುಗಿಯುತ್ತದೆ?

ಶ್ರೀ ವೀರೇಂದ್ರ ಪಾಟೀರ್.—ಯಾವಾಗ ಮುಗಿಯುತ್ತದೆ ಎಂದು ಹೇಳುವುದಕ್ಕೆ ಕಷ್ಟವಾಗು ತ್ತದೆ. ಅದು ಕೇಂದ್ರ ಸರ್ಕಾರಕ್ಕೆ ಸೇರಿದ್ದು? ಇಲ್ಲಿಯವರೆಗೆ ಪ್ರೋಗ್ರೆಸ್ ಮಾತ್ರ ಹೇಳಿದ್ದೇನೆ. ಏನು ಆಗಿದೆ, ಎಷ್ಟು ದುಡ್ಡು ಖರ್ಚು ಆಗಿದೆ, ಏನೇನು ಕೆಲಸ ಮಾಡಿದ್ದಾರೆ, ಮುಂದೆ ಏನೇನು ಕೆಲಸ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂದು ಹೇಳಬಹುದೇ ಹೊರತು ಇಷ್ಟು ದಿವಸದಲ್ಲಿ ಮುಗಿಯುತ್ತದೆ ಎಂದು ನಾನೇನು ಖಚಿತವಾಗಿ ಹೇಳುವುದಕ್ಕೆ ಆಗುವುದಿಲ್ಲ. ಟ್ಯೂಟಿಕಾರಿನ್ ಕೆಲಸ ಯಾವ ರೀತಿಯಿಂದ ನಡೆಯುತ್ತಿದೆಯೋ ಅದೇರೀತಿ ಇಲ್ಲಿಯೂ ನಡೆಯುತ್ತಿದೆ. ಮಾನ್ಯ ಸದಸ್ಯರಿಗೆ ಒಂದು ಸಂಶಯ ಇದೆ, ಟ್ಯೂಟಿಕಾರಿನ್ ಮದ್ರಾಸಿನಲ್ಲಿ ಇದೆ, ಮದ್ರಾಸಿಗೆ ಸೆಂಟರ್‌ನಲ್ಲಿ ಪುಲ್ ಇದೆ, ಅವರ ಕೆಲಸ ತೀವ್ರವಾಗಿ ಮಾಡಿ ಮುಗಿಸಬಹುದು ಮತ್ತು ಮಂಗಳೂರಿನ ಕೆಲಸ ನಿಂತು ಹೋಗಬಹುದು ಎಂದು. ಅದಕ್ಕೆ ಯಾವ ತರಹಕಾರಣವೂ ಇಲ್ಲ, ಟ್ಯೂಟಿಕಾರಿನ್ ಮಂಗಳೂರಿನ ಪೋರ್ಟ್ಸ್ ಎರಡು ಒಮ್ಮೆಯೇ ಮುಗಿಸುತ್ತಾರೆ ಎಂದು ಭರವಸೆ ಇದೆ. ಅದೇ ರೀತಿ ಕಾರ್ಯಕ್ರಮ ಹಾಕಿಕೊಂಡು ಮುಂದೆ ಹೋಗುತ್ತಾ ಇದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಟ್ಯೂಟಿಕಾರನ್ನಿಗೆ ಎಷ್ಟು ಕೋಟಿ ಖರ್ಚು ಮಾಡುತ್ತಾರೆ.

ಶ್ರೀ ವೀರೇಂದ್ರ ಪಾಟೀರ್.—ಬಹುಶಃ ಮಂಗಳೂರಿನಷ್ಟೇ ಹೆಚ್ಚು ಕಡಿಮೆ ಖರ್ಚು ಮಾಡಬಹುದು. ನನ್ನಲ್ಲಿ ಸಂಪೂರ್ಣವಾದ ಮಾಹಿತಿ ಇಲ್ಲ. ಕೆಲವು ಮಾನ್ಯ ಸದಸ್ಯರು ಒಂದು ಗಹನವಾದ ವಿಚಾರ ಸಭೆಯ ಮುಂದೆ ಇಟ್ಟಿದ್ದಾರೆ. ಅದು ಎಲ್ಲರೂ ವಿಚಾರ ಮಾಡತಕ್ಕಂಥಾದ್ದು. ಶರಾವತಿ ಎರಡು ಯೂನಿಟ್ಟುಗಳಿಂದ ಪವರ್ ಬರುತ್ತಾ ಇದೆ. ಬಹುಶಃ ಇನ್ನು 7-8 ಯೂನಿಟ್ಟುಗಳ ಪವರ್ ಬರ ಬಹುದು. ಅದರ ಸಲುವಾಗಿ ಪ್ರಾವಿಷನ್ ಮಾಡಿದ್ದೇವೆ. ದುಡ್ಡು ಒದಗಿಸಿಕೊಂಡಿದ್ದೇವೆ. ಮೆಷಿನರಿ ಎಲ್ಲಾ ಬಂದಿದೆ. ಶರಾವತಿಯಿಂದ ಹೆಚ್ಚು ವಿದ್ಯುಚ್ಛಕ್ತಿ ಉತ್ಪನ್ನ ಮಾಡಲಿಕ್ಕೆ ಸಾಧ್ಯ. ವಿದ್ಯುಚ್ಛಕ್ತಿ ಶಾರ್ಟೇಜ್ ಇದೆ ಎನ್ನುವ ಪ್ರಶ್ನೆಯೇ ಇಲ್ಲ. ಶರಾವತಿ ಬಂದಮೇಲೆ 7-8 ವರ್ಷ ನಾವು ತಡೆಯ ಬಹುದು, ನಮ್ಮ ಕಾಲ ಮೇಲೆ ನಿಲ್ಲಬಹುದು. ಒಂದು ಕಿಲೋವಾಟ್ ಕೂಡ ಎರಡನೇ ಸ್ಟೇಟಿಗೆ ಹೋಗಿ ಬೇಡುವ ಪರಿಸ್ಥಿತಿ ಇಲ್ಲ. ಕಾಳಿನದಿ ವಾರಾಹಿ ಇದರ ಮೇಲೆ ದುಡ್ಡು ಸುರಿಯಲಾರದೆ ಇರ್ರಿಗೇಷನ್ ಕಡೆಗೆ ಹಾಕಬೇಕು, ಡೈವರ್ಟ್ ಮಾಡಬೇಕು ಎಂದು ಸಲಹೆ ಬಂದಿದೆ. ಅದನ್ನು ನಾನು ಒಪ್ಪುತ್ತೇನೆ.

ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಇರ್ರಿಗೇಷನ್ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಅದನ್ನು ಹೇಳಿರಬಹುದು ಎಂದು ಅನಿಸುತ್ತದೆ. ನಾವು ಇವೊತ್ತು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪವರ್‌ಗೆ 122 ಕೋಟಿ ಪ್ರೊವೈಡ್ ಮಾಡಿದ್ದೇವೆ. 80-82 ಕೋಟಿ ರೂಪಾಯಿ ಗಳನ್ನು ಇರ್ರಿಗೇಷನ್‌ಗೆ ಪ್ರೊವೈಡ್ ಮಾಡಿದ್ದೇವೆ. ಅದಕ್ಕೆ ಒಂದು ವಿಚಾರ ಸರ್ಕಾರದಲ್ಲಿ ಬರುತ್ತಾ ಇದೆ. ಅಂತಿಮ ನಿರ್ಣಯ ತೆಗೆದುಕೊಂಡಿಲ್ಲ. ಪವರ್ ಸಾಕಷ್ಟು ಇರುವಾಗ, ಸುಮಾರು 20 ಕೋಟಿ ರೂಪಾಯಿಗಳನ್ನು ಇರ್ರಿಗೇಷನ್‌ಗೆ ಡೈವರ್ಟ್ ಮಾಡಬೇಕು ಎನ್ನುವ ಪ್ರಪೋಸಲ್ ಸರ್ಕಾರದ ಮುಂದೆ ಇದೆ. ಇರ್ರಿಗೇಷನ್‌ನಲ್ಲಿ ನಾವು ಬಹಳ ಕೆಳಮಟ್ಟದಲ್ಲಿ ಇದ್ದೇವೆ. ಅದಕ್ಕಾಗಿ ಶರಾವತಿ ಪವರ್ ಮೇಲೆ ಇರ್ರಿಗೇಷನ್‌ಗೆ ದುಡ್ಡು ಡೈವರ್ಟ್ ಮಾಡಬೇಕು ಎನ್ನುವ ವಿಚಾರ ಸರ್ಕಾರದಲ್ಲಿ ಇದೆ.

ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಳಿ, ವಾರಾಹಿ ಯೋಜನೆಯಲ್ಲಿ ಮುಂದು ವರಿಯಬೇಕಾದರೆ ಕೇಂದ್ರ ಸರ್ಕಾರದವರು ಸ್ವಲ್ಪ ಮಟ್ಟಿಗಾದರೂ ಸಹಾಯ ಮಾಡಬೇಕು. ಇದನ್ನು ನಾವು ಕೇಂದ್ರ ಸರ್ಕಾರಕ್ಕೆ ಸ್ಪಷ್ಟಪಡಿಸಿದ್ದೇವೆ. ಅದನ್ನು ನಾನು ಈ ಸಭೆಯಲ್ಲಿ ಕೂಡ ತಮಗೆಲ್ಲಾ ಸ್ಪಷ್ಟಪಡಿಸಿದ್ದೇನೆ. ಅದನ್ನು ನಾಲ್ಕನೆಯ ಯೋಜನೆಯಲ್ಲಿ ಸೇರಿಸಬೇಕೆಂದರೆ ನಮ್ಮ ಹತ್ತಿರ ದುಡ್ಡು ಬೇಕು. ಯಾವುದಕ್ಕೂ ಕೇಂದ್ರದ ನೆರವು ಇಲ್ಲದಿದ್ದರೆ ಧೈರ್ಯವಾಗಿ ಮುಂದುವರಿಯಲಾಗುವುದಿಲ್ಲ. ಅವರ ಹತ್ತಿರ ಕೊಡಿ ಎಂದು ಕೇಳಿದರೆ, ದುಡುಕಬೇಡಿ ಎಂದು ಹೇಳುತ್ತಿದ್ದಾರೆ. ಅದೇ ಧೋರಣೆ ಯನ್ನು ಇನ್ನು ಮುಂದೆ ಕೂಡ ಇಟ್ಟುಕೊಂಡು ಬರುತ್ತೇವೆಂದು ನಾನು ಸ್ಪಷ್ಟಪಡಿಸುತ್ತೇನೆ.

ಅದೇ ರೀತಿ ಹೊಗೇನಕಲ್ ಪ್ರಾಜೆಕ್ಟ್ ಸದ್ಯಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏನಾದರೂ ತೆಗೆದುಕೊಳ್ಳಬೇಕು ಎಂಬ ಅವಕಾಶ ಇದ್ದರೆ ಅದು ಕಾಳಿ ಮತ್ತು ವಾರಾಹಿ ಪ್ರಾಜೆಕ್ಟ್. ಇದರಿಂದ ಎಲ್ಲ ಪವರ್ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಯಾವುದಾದರೂ ಯೋಜನೆಯನ್ನು ತೆಗೆದುಕೊಳ್ಳುವುದಾದರೂ, ಅದರಲ್ಲಿ ಈ ಎರಡು ಯೋಜನೆಗಳಿಗೆ ಆದ್ಯತೆ ಕೊಡಬೇಕೇ ಹೊರತು ಹೊಗೇನಕಲ್‌ಗೆ ಅಲ್ಲ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಕೆಲವು ಮಾನ್ಯ ಸದಸ್ಯರುಗಳು ಹೇಳಿದರು, ನೀವು ತೆಗೆದುಕೊಳ್ಳದಿದ್ದರೆ ಮದ್ರಾಸಿನವರು ತೆಗೆದುಕೊಂಡರೆ ನೀವು ಏನು ಮಾಡುತ್ತೀರಿ ! ಎಂದು ಅದನ್ನು ನಾನು ಅನೇಕ ಸಲ ಸ್ಪಷ್ಟಪಡಿಸಿದ್ದೇನೆ. ಇದು ಎರಡು ರಾಜ್ಯಗಳಿಗೂ ಸಂಬಂಧ ಪಟ್ಟದ್ದು ಮತ್ತು ನೀರನ್ನು ಉಪಯೋಗಿಸಿಕೊಳ್ಳುವುದು ಕೂಡ ಎರಡೂ ರಾಜ್ಯಗಳಿಗೂ ಸಂಬಂಧಪಟ್ಟದ್ದರಿಂದ, ನಮ್ಮ ರಾಜ್ಯದ ಒಪ್ಪಿಗೆ ಇಲ್ಲದೆ ಅವರು ಆ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈಗ ಯಾವ ರೀತಿ ಮದ್ರಾಸ್ ಸರ್ಕಾರದವರು ಪ್ರಾಜೆಕ್ಟ್ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದಾರೋ ಅದೇ ರೀತಿ ನಾವು ಕೂಡ ನಮ್ಮ ಪ್ರಾಂತ್ಯದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕೆಂದು ವಿಚಾರ ಮಾಡಿದ್ದೇವೆ. ಮತ್ತು ಅದಕ್ಕೆ ಬೇಕಾದಂತಹ ಎಲ್ಲಾ ವಿಷಯ ಸಂಗ್ರಹ ಮಾಡಿದ್ದೇವೆ; ಅಂಕಿಅಂಶಗಳನ್ನು ಶೇಖರಿಸಿದ್ದೇನೆ. ಇನ್ನು ಪ್ರಾಜೆಕ್ಟ್ ರಿಪೋರ್ಟ್ ಬರೆಯುವುದೊಂದೇ ಬಾಕಿ ಉಳಿದಿದೆ. ಆದರೆ ನಮಗೆ ಈಗ ಬಂದಂಥ ಸಮಸ್ಯೆ ಎಂದರೆ, ಮದ್ರಾಸಿನವರು ಯಾವ ರೀತಿ ವಿಚಾರ ಮಾಡಿ ರಿಪೋರ್ಟ್ ತಯಾರು ಮಾಡಿದ್ದಾರೆ, ಇವತ್ತು ಕಾವೇರಿ ನದಿಯ ನೀರನ್ನು ಯಾವ ತರಹ ತೆಗೆದುಕೊಂಡಿದ್ದಾರೆ ಎಂಬುದು ನೋಡಬೇಕಾಗಿದೆ. ನಾವು ನಮಗೆ ಬೇಕಾದ ನೀರನ್ನು ಮೇಲ್ಭಾಗದ ಕಾವೇರಿಯಿಂದ ತೆಗೆದುಕೊಂಡಮೇಲೆ ಅಲ್ಲಿ ಕೆಳಗೆ ಅವರಿಗೆ ಹೆಚ್ಚಿಗೆ ನೀರು ಉಳಿಯುವುದಿಲ್ಲ. ಇದಕ್ಕಾಗಿ ಅವರು ಯಾವ ತರಹ ಈ ವಿಷಯದಲ್ಲಿ ಲೆಕ್ಕ ಮಾಡಿದ್ದಾರೆ ಎಂಬುದನ್ನು ನಾವು ಕೇಳುತ್ತಿದ್ದೇವೆ. ಆದರೆ ನಮಗೆ ಬೇಕಾದ ಮಾಹಿತಿಗಳನ್ನು ಅವರು ಇನ್ನೂ ಕೊಟ್ಟಿಲ್ಲ. ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಬರೆದು ತಿಳಿಸಿದರೂ ಅವರು ಉತ್ತರ ಕೊಟ್ಟಿಲ್ಲ. ಅದರಿಂದ ಎಲ್ಲಿಯವರೆಗೆ ನಮಗೆ ಬೇಕಾದಂತಹ ಮಾಹಿತಿಗಳು ಸಿಗುವುದಿಲ್ಲವೋ, ಅಲ್ಲಿಯವರೆಗೆ ನಮಗೆ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡುವುದು ಸಾಧ್ಯವಿಲ್ಲ. ನಾವು ಊಹಿಸಬಹುದು ಪ್ರಾಜೆಕ್ಟ್ ರಿಪೋರ್ಟ್ ತಯಾರುಮಾಡದೆ, ನಮ್ಮ ರಾಜ್ಯಕ್ಕೆ ಅದರಿಂದ ಧಕ್ಕೆ ಉಂಟಾಗುತ್ತದೆ. ಮತ್ತು ನಮ್ಮ ಆಫೀಸರುಗಳು ಸರಿಯಾಗಿ ಏನೂ ಮಾಡುತ್ತಿಲ್ಲ ಎಂದು. ಆದರೆ ಈ ತರಹ ಊಹೆಮಾಡುವುದು ಸರಿಯಲ್ಲ. ಇದು ಎರಡು ರಾಜ್ಯಗಳಿಗೂ ಸಂಬಂಧಪಟ್ಟ ನದಿ, ಆದರೆ ನೀರು ಎರಡು ರಾಜ್ಯಗಳಿಗೂ ಸಂಬಂಧಪಟ್ಟದ್ದು. ಮುಖ್ಯವಾಗಿ ಈಗ ಇರ್ರಿಗೇಶನಿಗೆ ನೀರು ಎಷ್ಟು ಬೇಕೋ, ಅದನ್ನು ಉಪಯೋಗಿಸಬೇಕಾದ್ದು ನಮ್ಮ ಕರ್ತವ್ಯ. ಮೊನ್ನೆ ಪ್ರೊಫೆಸರ್ ಥ್ಯಾಕರ್ ಅವರು ಬಂದಾಗ ಅವರೊಡನೆಯೂ ಈ ವಿಚಾರ ಪ್ರಸ್ತಾಪಿಸಿದ್ದೇವೆ. ಮದ್ರಾಸಿನವರು ಮಾಡುತ್ತಿರುವುದು ನಿಜವೇ ಎಂದು ಕೇಳಿದ್ದೇವೆ. ಅದಕ್ಕೆ ಅವರು ಹಾಗೇನೂ ಇಲ್ಲ, ನಿಮ್ಮ ಅನುಮತಿ ಇಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದರು.

ಅವರು ಚೀಫ್ ಮಿನಿಷ್ಟರನ್ನು ಕೂಡ ಬೇಟಿ ಮಾಡಿ, ಅದು joint venture ನಲ್ಲಿ ಮಾಡಬೇಕಾದುದು. ಎರಡು ರಾಜ್ಯಗಳಿಗೂ ಸಂಬಂಧಪಟ್ಟದ್ದು. ಇದರಲ್ಲಿ ಎರಡೂ ರಾಜ್ಯಗಳೊಡನೆ ಮಾತುಕತೆ ನಡೆಯದೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಭರವಸೆ ಕೊಟ್ಟಿದ್ದಾರೆ. ತಮಗೆಲ್ಲರಿಗೂ ಹೇಳುವುದಾದರೆ, ಇದರಲ್ಲಿ ಏನೂ ಲೋಪದೋಷಗಳಾಗುತ್ತದೆ ಎಂದು ಕಾಣುವುದಿಲ್ಲ. ಮೈಸೂರು ರಾಜ್ಯಕ್ಕೆ ಏನೂ ಹೆಚ್ಚು ಕಡಿಮೆ ಮಾಡುವುದಕ್ಕಿಲ್ಲ, ಮಾಡಬೇಕಾದ್ದನ್ನು ಈಗಾಗಲೇ ಮಾಡಿದ್ದೇವೆ. ಅದನ್ನು ಮುಂದೆ ಕೂಡ ಮಾಡುತ್ತೇವೆ ಎಂಬ ಭರವಸೆಯನ್ನು ತಮಗೆಲ್ಲರಿಗೂ ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Without the consent of the State of Mysore! ಅವರು ನಿಮಗೆ ಬರಹ ಮೂಲಕ ಕೊಟ್ಟಿದ್ದಾರೆಯೆ !

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಮಾಡಬೇಕಾದರೆ ಎಂದೋ ಮಾಡಬೇಕಾಗಿತ್ತು. ಇದರ ವಿಷಯವಾಗಿ ಮೊನ್ನೆ ಕೂಡ ನಾನು ಡೆಲ್ಲಿಗೆ ಹೋದಾಗ ಸೆಂಟ್ರಲ್ ಯೂನಿಯನ್ ಪವರ್ ಮಂತ್ರಿಯವರೊಡನೆ ಮಾತನಾಡಿದ್ದೇನೆ. ಅವರೂ ಮದ್ರಾಸಿನವರಿಗೆ ಒಂದು ಕಾಗದವನ್ನು ಕಳಿಸಿ ಕೊಟ್ಟಿದ್ದಾರೆ. ಮತ್ತು ಪ್ರೊಜೆಕ್ಟ್ ರಿಪೋರ್ಟು ತಡವಾದರೆ ಜವಾಬ್ದಾರಿ ನಮ್ಮ ಮೇಲೆ ಹಾಕಬಾರದು. ಎಂದು ಹೇಳಿದ್ದೇನೆ. ಆದ್ದರಿಂದ ನಮ್ಮ ಹಿತಕ್ಕೆ ಧಕ್ಕೆ ಬರುತ್ತದೆ, ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ ಎಂದು ಹೇಳುವುದಕ್ಕೆ ಯಾವ ತರದ ಅವಕಾಶವಿಲ್ಲವೆಂದು ನಾನು ತಮಗೆ ಹೇಳುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ನ್ಯಾಷನಲ್ ಹೈವೇ ನಂ. 13 ಮೇಲೆ ಕೆಲಸಕಾರ್ಯಗಳು ಚುರುಕಾಗಿ ನಡೆಯುತ್ತಿಲ್ಲ, ನಿಧಾನವಾಗುತ್ತಿದೆ ಎಂದು ಹೇಳಿದರು. ನಾನು ಬಹುಶಃ ಹೋದ

(ಶ್ರೀ ವೀರೇಂದ್ರ ಪಾಟೀಲ್)

ಸಲ ಕೂಡ ಹೇಳಿದ್ದೇನೆ. ಇದಕ್ಕೆ ಮೊದಲು ಕೇಂದ್ರ ಸರ್ಕಾರದವರು ಒಪ್ಪಿರಲಿಲ್ಲ. ಅವರು ಪ್ಲಾನ್ ಹಾಕಿದರೂ ಕೂಡ 1962-63ರಲ್ಲಿ ಇದನ್ನು ಕೈ ಬಿಡುವಂತಹ ಪರಿಸ್ಥಿತಿ ಬಂದಿತ್ತು. ಸುಮಾರು ಮೂರು ವರ್ಷದವರಿಗೆ ಪ್ರಯತ್ನ ಮಾಡಿ ಮಂಜೂರು ಮಾಡಿಸಿ ತಂದಿದ್ದೇವೆ, ಮತ್ತು ಈಗ ಕೆಲಸ ಕಾರ್ಯಗಳು ನಡೆಯುತ್ತಿವೆ. ಈಗಾಗಲೇ ಸುಮಾರು 75 ಲಕ್ಷದ ಕೆಲಸ ಕಾರ್ಯಗಳನ್ನು ಮಂಜೂರು ಮಾಡಿದ್ದಾರೆ. ಈಗಾಗಲೇ 23 ಲಕ್ಷದ 57 ಸಾವಿರ ರೂಪಾಯಿಯನ್ನು ಬ್ರಿಡ್ಜ್‌ಗಳಿಗೆ ಮತ್ತು ರಸ್ತೆ ಅಗಲ ಮಾಡುವ ಕೆಲಸಗಳಿಗೆ ಖರ್ಚು ಮಾಡುತ್ತಿದ್ದೇವೆ. ಆದರೆ ಇದು ಮೂರು ವರ್ಷದ ನಂತರ ಮಂಜೂರಾದ್ದರಿಂದ ನಿಧಾನವಾಗಿದೆ. ನಾಲ್ಕನೇ ಯೋಜನೆಯಲ್ಲಿ ಬರುತ್ತದೆ. ನಾವು ಯಾವುದೂ ನಿಧಾನ ಮಾಡಿಲ್ಲ. ಅದಲ್ಲದೆ. ಇದನ್ನು ಡ್ರಾಪ್ ಮಾಡದೆ ಉಳಿಸುವಂತೆ ಮಾಡಿದ್ದಕ್ಕೆ ಅದರ ಶ್ರೇಯಸ್ಸು ಇಲಾಖೆಗೆ ಬರಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಕೆಲವು ಮಾನ್ಯ ಸದಸ್ಯರುಗಳು ಬಿಜಾಪುರ ಜಿಲ್ಲೆಯಲ್ಲಿ ಹೆಚ್ಚು ಮಟ್ಟಿಗೆ ಎಲೆಕ್ಟ್ರಿಫಿಕೇಶನ್ ಆಗಿಲ್ಲ ಎಂದು ಹೇಳಿದರು. ನನಗೆ ತಿಳಿದ ಹಾಗೆ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಬಾಗೇವಾಡಿಯ ಕೆಲಸ ಕಾರ್ಯಗಳು ಆಗುತ್ತಿದೆ, ಮೊನ್ನೆ ಬಾಗಲಕೋಟೆಯ ಲೈನು ಮಾಡಿಕೊಟ್ಟಿದ್ದಾರೆ. ಹೈಡ್ರೋ ಎಲೆಕ್ಟ್ರಿಕ್ ಪವರ್ ದೊರಕದಿರುವುದರಿಂದ ಹೆಚ್ಚಿನ ಕೆಲಸ ಮಾಡುವುದಕ್ಕಾಗಲಿಲ್ಲ. ಮೂರು ನಾಲ್ಕು ಜಿಲ್ಲೆಗಳಲ್ಲಿ ಹೆಚ್ಚಿನ ಕೆಲಸ ಮಾಡಲಿಕ್ಕಾಗಲಿಲ್ಲ. ಅದಕ್ಕೆಲ್ಲಾ ಗಮನ ಕೊಟ್ಟು ಮುಂದೆ 110-66-33 ಕೆ. ವಿ. ಲೈನು ಎಳೆದು ಕೆಲಸ ಪ್ರಾರಂಭ ಮಾಡುತ್ತೇವೆ. ಇದರಿಂದಾಗಿ ಹೆಚ್ಚು ಹೆಚ್ಚು ಕೆಲಸ ಮಾಡಲು ಅನುಕೂಲವಾಗಲಿಲ್ಲ. ಇನ್ನು ಮುಂದೆ ಎಲ್ಲಾ ಅವಕಾಶ ಇದೆ. ಎಷ್ಟು ಮಟ್ಟಿಗೆ ಲೈನ ಮೆಟೀರಿಯಲ್ಸ್ ಒದಗಿಸುವುದಕ್ಕೆ ಸಾಧ್ಯವೋ ಅಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತೇವೆ.

ಇನ್ನು ಶ್ರೀಮತಿ ಸುಶೀಲಬಾಯಿವರು ಕೇಳಿದರು ಬಿಜಾಪುರ ಜಿಲ್ಲೆಯಲ್ಲಿ ಉರಿಯುತ್ತಿರುವ ದೀಪಗಳು, ಕ್ಯಾಂಡ್ಲಿನದ್ದೋ ಅಥವಾ ಸೀಮೆಎಣ್ಣೆಯದೋ ಎಂದು. ಅದಕ್ಕೆ ಕಾರಣವೇನೆಂದರೆ, ಇವತ್ತು ಅಲ್ಲಿ ಡಿಸಿಲ್ ಆಯಿಲ್‌ನಿಂದ ಇಂಜಿನ್ ನಡೆಸುವುದರಿಂದ ಆ ರೀತಿ ಕಾಣುತ್ತದೆ. ಆದಷ್ಟು ತೀವ್ರವಾಗಿ ಹೈಡ್ರೊ ಇಲೆಕ್ಟ್ರಿಕ್ ಪವರ್ ಒದಗಿಸುತ್ತೇವೆ. ಬಹುಶಃ ಸೆಪ್ಟಂಬರ್ ಅಕ್ಟೋಬರ್ ತಿಂಗಳಿಗೆ ಬಿಜಾಪುರ ಜಿಲ್ಲೆಗೆ ಹೈಡ್ರೋ ಇಲೆಕ್ಟ್ರಿಸಿಟಿ ಹೋಗುವಂತೆ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ.

ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಚರ್ಚೆ ಪ್ರತ್ಯೇಕವಾಗಿ ಆಗುತ್ತದೆಂದೆನ್ನಿಸುತ್ತದೆ. ಆಗ ಎಲ್ಲ ವಿವರಗಳನ್ನೂ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಧಾರವಾಡದಿಂದ ಪಂಜಂ ಮತ್ತು ಗೋವಾಕ್ಕೆ ಹೋಗುವ ರಸ್ತೆಯನ್ನು ಉತ್ತಮಗೊಳಿಸಬೇಕೆಂದು ಶ್ರೀ ಅಗ್ನಿಹೋತ್ರಿ ಅವರು ಹೇಳಿದರು. ಆ ಕೆಲಸ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಬೆಳಗಾವಿಯಿಂದ ಗೋವವರೆಗೂ ರಸ್ತೆ ಮಾಡಿ ಡಾಮ್ಬರು ರಸ್ತೆ ಮಾಡಿದ್ದೇವೆ 18 ಲಕ್ಷ ರೂಪಾಯಿ ವೆಚ್ಚದಲ್ಲಿ. ಅದೇ ರೀತಿ ಧಾರವಾಡದಿಂದ ಡಾಮ್ಬರು ರಸ್ತೆ ಮಾಡಬೇಕೆಂದು ಕೆಲಸ ಪ್ರಾರಂಭ ಮಾಡಿದ್ದೇವೆ. 15 ಮೈಲಿಯಷ್ಟು ಡಾಮ್ಬರು ರಸ್ತೆಯನ್ನು ಮಾಡಿದ್ದೇವೆ. ಇನ್ನು 15 ಮೈಲಿ ಉಳಿದಿದೆ. ಅದನ್ನು ಕೂಡ ಕಾರ್ಯಕ್ರಮದಲ್ಲಿ ಇಟ್ಟುಕೊಂಡಿದ್ದೇವೆ. ಆ ಕೆಲಸ ಆದಷ್ಟು ತೀವ್ರವಾಗಿ ಪ್ರಾರಂಭವಾಗಿ ಮುಗಿಯುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್. ಎಸ್. ಹೆಗ್ಗಡೆಯವರು ಒಂದು ಮಾತನ್ನು ಹೇಳಿದ್ದಾರೆ. ಶರಾವತಿ ನೀರಿನಿಂದ ಇವತ್ತು ನೀರಾವರಿಯಾಗುವುದಕ್ಕೆ ಸಾಧ್ಯವೇ ಎನ್ನುವುದನ್ನು ವಿಚಾರ ಮಾಡಬೇಕು ಎಂದು ಹೇಳಿದ್ದಾರೆ. ಆ ವಿಚಾರ ಸರ್ಕಾರ ಈಗಾಗಲೇ ಮಾಡುತ್ತಿದೆ. ಅದಕ್ಕೆ ಸಂಬಂಧಪಟ್ಟ ಚೀಫ್ ಇಂಜಿನಿಯರಿಗೆ ಹೇಳಿದ್ದೇವೆ. ಶರಾವತಿ ಬರೀ ವಿದ್ಯುಚ್ಛಕ್ತಿ ಯೋಜನೆಯಾಗಿದೆ, ನೀರಾವರಿಗೆ ಅನುಕೂಲವಾಗಿಲ್ಲ ಎನ್ನುವ ವಿಚಾರ ಮೊದಲು ಇತ್ತು. ಅದರಿಂದಲೂ ನೀರಾವರಿ ಮಾಡಲು ಸಾಧ್ಯವಿದೆ ಎಂದು ಕೆಲವರು ತಿಳಿಸಿದಮೇಲೆ ಆ ನೀರನ್ನು ಉಪಯೋಗ ಮಾಡಿಕೊಂಡು ನೀರಾವರಿ ಮಾಡುವುದಕ್ಕೆ ಸಾಧ್ಯವೇ ಎಂದು ನೋಡಿರಿ ಎಂದು ಹೇಳಿದ್ದೇವೆ. ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಶರಾವತಿ ನೀರನ್ನು ನೀರಾವರಿಗೆ ಉಪಯೋಗಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆ.

ಶ್ರೀ ಮುಕ್ಕಣ್ಣಪ್ಪನವರು ಒಂದು ಮಾತು ಹೇಳಿದರು. ತುಂಗಭದ್ರ ಸೇತುವೆ ಕೆಲಸವನ್ನು ಹರಿಹರದ ಹತ್ತಿರ ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿದ್ದಾರೆ. ಅವರಿಗೆ ಏನೂ ಕೆಲಸ ಗೊತ್ತಿಲ್ಲ, ಏನೂ ಕೆಲಸ ಮಾಡಿಲ್ಲ, ಅನುಭವವಿಲ್ಲ, ಇಂಥ ಕಂಟ್ರಾಕ್ಟರನ್ನು ಹಿಡಿದು ಈ ಕೆಲಸವನ್ನು ಕೊಟ್ಟಿದ್ದಾರೆ, ಫೇವರ್ ಮಾಡಿದ್ದಾರೆ ಎಂದು ಹೇಳಿದರು. ತುಂಗಭದ್ರ ಸೇತುವೆಗೆ ನಾವು ಟೆಂಡರನ್ನು ಕರೆದೆವು. ಆಗ ಅನೇಕ ಜನ ಟೆಂಡರನ್ನು ಹಾಕಿದರು. ಸರ್ಕಾರದ ಅಕ್ಸೆಪ್ಟೆಡ್ ಪ್ರಿನ್ಸಿಪಲ್ ಪ್ರಕಾರ ಲೋಯೆಸ್ಟ್ ಟೆಂಡರರ್ ಯಾರಿರುತ್ತಾರೆ ಅವರಿಗೆ ಕೆಲಸವನ್ನು ಕೊಡಬೇಕು. ಅದರ ಪ್ರಕಾರವಾಗಿ ಲೋಯೆಸ್ಟ್ ಟೆಂಡರರ್‌ಗೆ ಕೊಟ್ಟಿದೆ. ಇದು ಕೇಂದ್ರ ಸರ್ಕಾರದ ಕೆಲಸ. ಅದಕ್ಕೆ ಅವರು ಮಂಜೂರಾತಿಯನ್ನು ಕೊಡಬೇಕು. ಅವರ ಮಂಜೂರಾತಿಯ ಪ್ರಕಾರ ಲೋಯೆಸ್ಟ್ ರೇಟ್ ಕೊಟ್ಟಿದ್ದವರಿಗೆ ಕೆಲಸವನ್ನು ಕೊಡಬೇಕಾಯಿತು. ಅವರಿಗೆ ಏನೂ ಕೆಲಸ ಬರುವುದಿಲ್ಲ, ಈ ವ್ಯವಹಾರದಲ್ಲಿ ಅನುಭವವಿಲ್ಲ ಎಂದು ಹೇಳುವಂಥ ಮಾತು ಸತ್ಯಕ್ಕೆ ದೂರವಾದುದು. ನಾನು ಈ ಶಾಖೆಯ ಮಂತ್ರಿಯಾಗುವುದಕ್ಕೆ ಮೊದಲೂ ಅವರು ಕಂಟ್ರಾಕ್ಟ್ ಕೆಲಸವನ್ನು ಮಾಡುತ್ತಿದ್ದರು. 'ಎ' ವರ್ಗದ ಕಂಟ್ರಾಕ್ಟರಾಗಿದ್ದರು. ಅವರು ಸಣ್ಣಪುಟ್ಟ ಕೆರೆಕಟ್ಟೆಗಳ ಕೆಲಸ ಮಾಡಿದ್ದಾರೆ, ಇನ್ನೂ ಅನೇಕ ತರಹ ಕೆಲಸಗಳನ್ನು ಮಾಡಿದ್ದಾರೆ. ಮಾನ್ಯ ಸದಸ್ಯರು ಬೇಕಾದರೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ. ಯಾರೋ ಒಬ್ಬ ಕಂಟ್ರಾಕ್ಟರಿದ್ದಾರೆ, ಅವರಿಗೆ ಕೆಲಸವನ್ನು ಕೊಟ್ಟರು, ಅದರಿಂದ ಅವರಿಗೆ ಫೇವರ್ ಮಾಡಿದ ಹಾಗೆ ಆಯಿತು ಎಂದು ಮಾತನಾಡಿದರೆ ತಪ್ಪಾಗುತ್ತದೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ರೂಲ್ಸ್ ಪ್ರಕಾರ ಲೋಯೆಸ್ಟ್ ಟೆಂಡರರ್ ಯಾರಿದ್ದಾರೆ ಅವರಿಗೆ ಕೊಡಬೇಕು. ಅವರಿಗೆ ಆ ಕೆಲಸ ಮಾಡುವ ಶಕ್ತಿ ಇಲ್ಲದೆ ಹೋದರೆ ಆಗ ವಿಚಾರ ಮಾಡಬೇಕು. ಆದ್ದರಿಂದ ಈ ಕಂಟ್ರಾಕ್ಟರಿಗೆ ಕೆಲಸವನ್ನು ಕೊಡಲಾಗಿದೆ. ಇವರು ಇನ್ನೂ ಅನೇಕ ಕೆಲಸ ಕಾರ್ಯಗಳಿಗೆ ಟೆಂಡರ್ ಹಾಕಿದ್ದರು. ಮುನೀರಾಬಾದ್ ಹತ್ತಿರ ಕಟ್ಟುವ ತುಂಗಭದ್ರ ಸೇತುವೆಗೂ ಟೆಂಡರ್ ಹಾಕಿದ್ದರು. ಅವರದು ಲೋಯೆಸ್ಟ್ ಇರಲಿಲ್ಲ ವಾದುದರಿಂದ ಅವರಿಗೆ ಕೊಡಲಿಲ್ಲ. ಅವರು ಟೆಂಡರ್ ಹಾಕಿದಂಥ ಎಲ್ಲ ಕೆಲಸಗಳಿಗೂ ಕಣ್ಣು ಮುಚ್ಚಿ ಕೆಲಸ ಕೊಡುತ್ತಿದ್ದೇವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಅವರ ಬಗ್ಗೆ ಕೆಲವು ವಿಚಾರ ಗಳನ್ನು ಏನು ಹೇಳಿದ್ದಾರೆ ಅವು ಯಾವುದೂ ನಿಜವಾದ ವಿಚಾರಗಳಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

ಕೊನೆಯದಾಗಿ, ಹೋದ ಸಲ ಹೇಳಿದುದನ್ನೇ ಈ ಸಲವೂ ಹೇಳಿದ್ದಾರೆ. ನಾನು ಈ ಡಿಪಾರ್ಟ್‌ಮೆಂಟಿಗೆ ಬಂದಮೇಲೆ ಅದನ್ನು ನ್ಯಾಷನಲೈಸ್ ಮಾಡಿದ್ದೇನೆ ಎಂದು. ಶ್ರೀಮಾನ್ ಮುಕ್ಕಣ್ಣಪ್ಪನವರ ಅಭಿಪ್ರಾಯದಲ್ಲಿ ಈ ಇಲಾಖೆಯಲ್ಲಿ ಎಲ್ಲ ನನ್ನ ಕುಲದವರಿದ್ದಾರೆ, ಸಂಬಂಧ ಪಟ್ಟ ಎಲ್ಲ ಅಧಿಕಾರಿಗಳೂ ನನ್ನ ಕುಲದವರೇ ಇದ್ದಾರೆ ಎನ್ನುವಮಾತನ್ನು ಹೇಳಿದ್ದಾರೆ. ಈ ಬಗ್ಗೆ ನಾನು ಅನೇಕ ಸಲ ಹೇಳಿದ್ದೇನೆ. ಇಲಾಖೆಯಲ್ಲಿ ನೌಕರರನ್ನು ನೇಮಕ ಮಾಡುವಾಗ ಯಾವ ಕುಲದ ಮಂತ್ರಿಗಳಿರುತ್ತಾರೆ ಎನ್ನುವ ದೃಷ್ಟಿಯಿಂದೇನೂ ಮಾಡುವಂಥದ್ದಲ್ಲ. ಪ್ರತಿ ಯೊಂದು ಇಲಾಖೆಯಲ್ಲಿಯೂ ಸರ್ವಿಸ್ ರೂಲ್ಸ್ ಇರುತ್ತವೆ, ಕೇಡರ್ ಅಂಡ್ ರಿಕ್ರೂಟ್ ಮೆಂಟ್ ರೂಲ್ಸ್ ಇರುತ್ತವೆ. ಪ್ರಮೋಷನ್ ಯಾವ ರೀತಿ ಕೊಡಬೇಕು, ಯಾರಿಗೆ ಕೊಡ ಬೇಕು, ಯಾರಿಗೆ ಅರ್ಹತೆ ಇರುತ್ತದೆ ಎನ್ನುವುದಕ್ಕೆ ಪ್ರೊಸೀಜರ್ ಇರುತ್ತದೆ. ಅದನ್ನು ನೋಡಿ ಕೊಂಡು, ಅಧಿಕಾರಿಗಳ ಸೀನಿಯಾರಿಟಿ ನೋಡಿಕೊಂಡು ಅವರ ಮೆರಿಟ್ ನೋಡಿ, ಕಾನ್‌ಫಿಡೆನ್ಸಿ ಯಲ್ ರಿಕಾರ್ಡ್‌ಗಳನ್ನು ನೋಡಿಕೊಂಡು ಕೊಡಲಾಗುತ್ತದೆ. ಇದರಲ್ಲಿ ನಾನು ಒಬ್ಬನೇ ಏನೂ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಆ ವಿಷಯ ಜನರಲ್ ಅಡ್ಮಿನಿಸ್ಟ್ರೇಷನ್ ಇಲಾಖೆಗೆ ಹೋಗ ಬೇಕು, ಆವಶ್ಯಕವಿದ್ದರೆ ನ್ಯಾಯ ಇಲಾಖೆಗೂ ಹೋಗಬೇಕು. ಎಲ್ಲ ವಿಚಾರಗಳನ್ನೂ ಸಮಗ್ರ ದೃಷ್ಟಿಯಿಂದ ಕೂಲಂಕುಷವಾಗಿ ವಿಚಾರ ಮಾಡಿ ಯಾರು ಯಾರು ಪ್ರಮೋಷನ್ ಪಡೆಯುವುದಕ್ಕೆ ಅರ್ಹರು ಎಂದು ನೋಡಿಕೊಂಡು ಪ್ರಮೋಷನ್‌ಗಳನ್ನು ಕೊಟ್ಟಿದೆ. ಯಾರಾದರೂ ನಮ್ಮ ಕಡೆಯವರು, ನಮ್ಮ ಬಳಗ, ನಮ್ಮ ಕುಲ ಎನ್ನುವ ಯಾವ ದೃಷ್ಟಿಯೂ ಇದುವರೆಗೆ ಇಲ್ಲ. ಈ ದೃಷ್ಟಿಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ ಎನ್ನುವ ಮಾತನ್ನು ಈ ಸಭೆಗೆ ನಾನು ಸ್ಪಷ್ಟ ಪಡಿಸಬೇಕಾಗಿದೆ.

ಕೆಲವರಿಗೆ ಪ್ರಮೋಷನ್ ಸಿಕ್ಕದೆ, ಇರುವಾಗ ಆ ಅಧಿಕಾರಿಗೆ ಪ್ರಮೋಷನ್ ಸಿಕ್ಕಲಿಲ್ಲ ಎಂದು ಸಾಧ್ಯವಿದ್ದರೆ ತಮ್ಮ ಜಾತಿಯವರ ಹತ್ತಿರ, ನೆಂಟರಿದ್ದರೆ ಅವರ ಹತ್ತಿರ ಹೋಗುತ್ತಾರೆ; ಅಥವಾ ಯಾವ ಕ್ಷೇತ್ರದಿಂದ ಬಂದಿರುತ್ತಾರೆ ಎಂದು ನೋಡಿಕೊಂಡು ಬೊಂಬಾಯಿ ಕರ್ಣಾಟಕದವರಾದರೆ ಅವರ ಹತ್ತಿರ ಹೋಗಿ ಈ ಮಂತ್ರಿಗಳು ಹೈದರಾಬಾದಿನವರಿದ್ದಾರೆ, ಇವರು ಬೊಂಬಾಯಿ ಕರ್ಣಾಟಕದವರಿಗೆ ಅನ್ಯಾಯ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಹಳೇ ಮೈಸೂರಿನವರಿದ್ದರೆ

(ಶ್ರೀ ವೀರೇಂದ್ರ ಪಾಟೀಲ್)

ಅವರಲ್ಲಿ ಹೋಗಿ ಇವರು ಬಂದಮೇಲೆ ಹೊರಗಡೆಯಿಂದ ಬಂದಂಥ ಜನಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ, ನಮ್ಮನ್ನು ಯಾರೂ ಕೇಳುವವರೇ ಇಲ್ಲ, ನಮ್ಮನ್ನು ಕೆಳಕ್ಕೆ ಹಾಕಿದ್ದಾರೆ ಎಂದು ಹೇಳುತ್ತಾರೆ. ಈ ರೀತಿ ಅವರ ಮನಸ್ಸಿಗೆ ಬಂದಂತೆ ಪ್ರಮೋಷನ್ ಸಿಕ್ಕಲಿಲ್ಲ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಸದಸ್ಯರ ಮುಂದೆ ಯಾವ ರೀತಿ ಚಿತ್ರಣ ಮಾಡಬೇಕು ಎಂದು ಯೋಚಿಸಿ ಆ ಚಿತ್ರವನ್ನು ಮುಂದೆ ಇಡುತ್ತಾರೆ. ಆ ಜನ ತಮ್ಮ ಸ್ವಾರ್ಥಕ್ಕಾಗಿ ಬಂದು ಹೇಳುವಂಥ ಮಾತುಗಳನ್ನು ಕೇಳಬೇಡಿ; ನಮ್ಮ ಜನ, ನಮ್ಮ ಕುಲ, ನಮ್ಮ ಗೋತ್ರ ಎಂದು ನೋಡಿದರೆ ಸರ್ಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲ. ನಮ್ಮ ಇರಾಖೆಯಲ್ಲಿ 8-10 ಜನ ಚೀಫ್ ಇಂಜಿನಿಯರು ಗಳಿದ್ದಾರೆ. ಅವರಲ್ಲಿ ಇಬ್ಬರು ಒಕ್ಕಲಿಗರು, ಇಬ್ಬರು ಲಿಂಗಾಯಿತರು, ಇಬ್ಬರು ಬ್ರಾಹ್ಮಣರು, ಒಬ್ಬರು ಹರಿಜನರು ಹೀಗೆ ಹಂಚಬೇಕು ಎಂದರೆ ಅದು ಸಾಧ್ಯವಿಲ್ಲ, ಹಾಗೆ ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲ. ಬಹುಶಃ ಎದುರು ಪಕ್ಷದವರು ಬಂದರೆ ಹಾಗೆ ಮಾಡಬಹುದೋ ಏನೋ ಗೊತ್ತಿಲ್ಲ. ಅವರೂ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನನಗನ್ನಿಸುತ್ತದೆ. ಯಾರ ಕುಲಗೋತ್ರಗಳನ್ನೂ ನೋಡಬೇಕಾಗಿಲ್ಲ. ಯಾರಾದರೂ ಕೆಲಸ ಮಾಡದೆ ಇದ್ದರೆ, ಇಂಥವರು ಸರಿಯಾಗಿ ಕೆಲಸಮಾಡುವು ದಿಲ್ಲ ಎಂದು ತಿಳಿಸಿ. ಯಾರಾದರೂ ತಪ್ಪು ಮಾಡಿದ್ದರೆ ಅಂಥವರನ್ನು ಯಾವ ಶಿಕ್ಷೆಗೆ ಗುರಿ ಮಾಡ ಬೇಕೋ ಆ ಶಿಕ್ಷೆಗೆ ಗುರಿ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಯಾರನ್ನಾದರೂ ಉಳಿಸುವುದಕ್ಕೆ ಪ್ರಯತ್ನ ಮಾಡಿದರೆ ಆಗ ನನ್ನ ಕುಲದವರನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿದೆ ಎಂದು ಹೇಳ ಬಹುದು. ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ನಾವು ಪ್ರೋತ್ಸಾಹ ಕೊಡಬೇಕು. ಹಾಗೆ ಮಾಡದೆ ಒಂದು ಕುಲ, ಒಂದು ಜಾತಿ, ನೀವು ಒಂದು ಬಳಗದವರು ಎನ್ನುವ ಮಾತನ್ನು ಆಡುವುದರಿಂದ ಕೆಲಸಕ್ಕೆ ಸ್ವಲ್ಪಮಟ್ಟಿಗೆ ಚ್ಯುತಿ ಬರಬಹುದು ಎನ್ನುವ ಮಾತನ್ನು ನಾನು ಕಳಕಳಿ ಯಿಂದ ತಮಗೆ ಹೇಳುತ್ತಿದ್ದೇನೆ.

ಇನ್ನೂ ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಕಾಲಾವಕಾಶ ಇಲ್ಲದ್ದರಿಂದ ಅದನ್ನೆಲ್ಲ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ವರ್ಷ ಈ ಇರಾಖೆ ಕುರಿತು ಟೀಕೆಗಳು ಕಡಿಮೆಯಾಗಿರುವುದರಿಂದ ಉತ್ತಮ ಕಾರ್ಯವನ್ನು ಮಾಡುತ್ತಿದೆ ಎಂದು ತಿಳಿದು ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಕೊಳ್ಕೆಬೈಲ್.—ಮೈನರ್ ಪೋರ್ಟ್ ವಿಷಯ ಏನೂ ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವು ಕಡೆ ಕೆಲಸಗಳು ಸ್ವಲ್ಪ ನಿಧಾನವಾಗಿ ನಡೆಯುತ್ತಿವೆ. ಕುಂದಾಪುರ ಪೋರ್ಟಿಗೆ ಒಳ್ಳೆಯ ಇಂಜಿನಿಯರ್ ಇದ್ದಾರೆ. ಅಲ್ಲಿ ಕೆಲಸಕಾರ್ಯಗಳು ನಡೆಯುತ್ತಿವೆ. ಭಟ್ಕಳ ಬಂದರಿನ ಕೆಲಸವೂ ಪ್ರಾರಂಭವಾಗಿದೆ. ಕುಂದಾಪುರದಲ್ಲಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು ಸೂಚಿಸಿದ ಇನ್ನೊಂದು ಅಂಶವೆಂದರೆ ಸ್ಟೇಟ್ ಪೋರ್ಟ್ ಆಫೀಸರಿಗೆ ಇಂಜಿನಿಯರಿಂಗ್ ವಿಭಾಗದ ಕೆಲಸಗಳನ್ನೂ ಕೊಟ್ಟಿರುವುದನ್ನು ತಪ್ಪಿಸಿ ಅದನ್ನು ಇಂಜಿನಿಯರಿಗೆ ಕೊಡಿ ಎಂದು ಹೇಳಿದ್ದಾರೆ. ಕನ್‌ಸ್ಟ್ರಕ್ಷನ್ ಕೆಲಸವೇನಿದೆ ಅದಕ್ಕೂ ಸ್ಟೇಟ್ ಪೋರ್ಟ್ ಆಫೀಸರಿಗೂ ಏನೂ ಸಂಬಂಧವಿಲ್ಲ. ಜೆಟ್ಟಿ, ವ್ಹಾರ್ಫ್, ಮೊದಲಾದ ಕನ್‌ಸ್ಟ್ರಕ್ಷನ್ ಕೆಲಸ ವೇನಿದೆ ಅದನ್ನು ಚೀಫ್ ಇಂಜಿನಿಯರಿಗೆ ಕೊಟ್ಟಿದ್ದೇವೆ, ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಸ್ಟೇಟ್ ಪೋರ್ಟ್ ಆಫೀಸರಿಗೆ ಬರೀ ಅಡ್ಮಿನಿಸ್ಟ್ರೇಷನ್ ಮಾತ್ರ, ಬಂದರಿಗೆ ಬರಬೇಕಾದ ಬಾಕಿಗಳನ್ನು ವಸೂಲು ಮಾಡುವುದು ಈ ಕೆಲಸಗಳನ್ನು ಮಾತ್ರ ಕೊಟ್ಟಿದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಹೆದ್ದಾರಿಗಳಲ್ಲಿ ಮತ್ತು ಇತರ ಕಡೆಗಳಲ್ಲಿ ರೇಲ್ವೆ ಸೇತುವೆ ಗಳನ್ನು ಕಟ್ಟುವ ವಿಚಾರ ಏನು ಹೇಳುತ್ತೀರಿ ?

1-00 P.M.

ಶ್ರೀ ವೀರೇಂದ್ರ ಪಾಟೀಲ್.—ನ್ಯಾಷನಲ್ ಹೈ ವೇಸ್ ಮತ್ತು ಸ್ಟೇಟ್ ಹೈ ವೇಸ್ ನಲ್ಲಿ ರೇಲುವೆ ಸೇತುವೆಗಳನ್ನು ಕಟ್ಟಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಬರೆಯುತ್ತಿದ್ದೇವೆ. ಸ್ಟೇಟ್ ಹೈ ವೇಸ್ ಮೇಲೆ ಓವರ್ ಬ್ರಿಜ್ ಅಥವಾ ಅಂಡರ್ ಬ್ರಿಜ್ ಹಾಕಿದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಲ್ಲಿ ಒಂದು ರೀತಿಯ ಹೊಂದಾಣಿಕೆ ಇರುವುದರಿಂದ ಸೇತುವೆಯನ್ನು ಕಟ್ಟುವುದಕ್ಕೆ ತಗಲುವ ವೆಚ್ಚವನ್ನು ಕೇಂದ್ರದವರು ಕೊಡುತ್ತಾರೆ; ಎರಡೂ ಕಡೆಯಿಂದ ಬರುವ ಅಪ್ರೋಚ್ ರಸ್ತೆಯನ್ನು ರಾಜ್ಯ ಸರ್ಕಾರ ಮಾಡಿಕೊಳ್ಳಬೇಕು. ಇಂಥ ಸಂದರ್ಭದಲ್ಲಿ ನಾವೂ

ಒಪ್ಪಬೇಕು, ಅವರೂ ಒಪ್ಪಬೇಕು. ಅವರ ಬಜೆಟ್ಟಿನಲ್ಲಿ ಅವರು ಹಣವನ್ನು ಒದಗಿಸಬೇಕು, ನಮ್ಮ ಬಜೆಟ್ಟಿನಲ್ಲಿ ನಾವು ಹಣವನ್ನು ಒದಗಿಸಬೇಕು. ರಾಷ್ಟ್ರೀಯ ಹೆದ್ದಾರಿಗಳನ್ನು ನಾವು ಮೇಂಟೇನ್ ಮಾಡುತ್ತಿದ್ದರೂ ಅದಕ್ಕೆ ಬೀಳುವ ಖರ್ಚನ್ನು ಕೇಂದ್ರದಿಂದ ವಸೂಲು ಮಾಡುತ್ತೇವೆ. ಈ ರಸ್ತೆಗಳು ಕೇಂದ್ರಕ್ಕೆ ಸೇರಿದ ರಸ್ತೆಗಳಾಗಿರುವುದರಿಂದ ಅದರ ಮೇಲೆ ಸೇತುವೆಗಳನ್ನು ಕಟ್ಟಬೇಕಾದರೆ ರೇಲ್ವೆ ಇಲಾಖೆಯೂ ಕೇಂದ್ರಕ್ಕೆ ಸೇರಿರುವುದರಿಂದ ಅದಕ್ಕೆ ಬೀಳುವ ಖರ್ಚು ನಮ್ಮ ಮೇಲೆ ಬೀಳುವುದಿಲ್ಲ. ಸೇತುವೆಗೆ ತಗಲುವ ಖರ್ಚನ್ನು ರೇಲ್ವೆ ಶಾಖೆಯಿಂದ ಕೊಡಬೇಕು, ಅಪ್ರೋಚೆಗೆ ತಗಲುವ ಖರ್ಚನ್ನು ಟ್ರಾನ್ಸ್‌ಪೋರ್ಟ್ ಶಾಖೆ ಕೊಡಬೇಕು. ಅದಕ್ಕಾಗಿ ಇವರಿಬ್ಬರೂ ಸಮಾಧಾನಪಟ್ಟುಕೊಂಡು ಒಂದು ಫೇಸ್ಡ್ ಪ್ರೋಗ್ರಾಂ ಮಾಡಬೇಕೆಂದೂ ಮತ್ತು ಪ್ರತಿ ವರ್ಷವೂ ಒಂದಿಷ್ಟು ಸೇತುವೆಗಳನ್ನು ಕಟ್ಟುವ ಕಾರ್ಯವನ್ನು ತೆಗೆದುಕೊಳ್ಳಬೇಕೆಂದೂ ಮೀಟಿಂಗ್‌ನಲ್ಲಿ ಹೇಳುತ್ತಿದ್ದೇವೆ. ಆ ಬಗ್ಗೆ ಅನೇಕ ಕಾಗದ ಪತ್ರಗಳನ್ನೂ ಸಹ ಬರೆದಿದ್ದೇವೆ. ಈ ತರಹ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ವಿಲ್ಲ, ತುರ್ತು ಪರಿಸ್ಥಿತಿ ಬಂದಿದೆ ಎಂದು ಸರ್ಕಾರದವರು ಹೇಳುತ್ತಾರೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದು ಸರಿಯಲ್ಲ. ಇನ್ನೂ ಮತ್ತೆ ಮತ್ತೆ ಅಂತಹ ಕೆಲಸಕಾರ್ಯಗಳನ್ನು ಹೆಚ್ಚು ಹೆಚ್ಚಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

Mr. SPEAKER.—The question is :

"That the sums not exceeding the amounts mentioned in Demand Nos. 6; 30A, 31, 32, 43, 47, 48 and 50 be granted to Government to defray the charges which will come in course of payment during the financial year ending with 31st March 1967."

The motion was adopted.

As directed by the Speaker, the motion for Demands for Grants adopted by the House are reproduced below ;—

DEMAND No. 6.—OTHER TAXES—ADMINISTRATION.

13. Other Taxes and Duties.

"That a sum not exceeding Rs. 12,26,000 be granted to the Government to defray the charges which will come in course of payment during the financial year for the period ending 31st day of March 1967 in respect of 'Other Taxes and Duties'."

DEMAND No. 30A.—ELECTRICITY SCHEMES.

45. Electricity Schemes.

"That a sum not exceeding Rs. 14,74,000 be granted to the Government to defray the charges which will come in course of payment during the financial year for the period ending 31st day of March 1967, in respect of 'Electricity Schemes'."

DEMAND No. 31.—PUBLIC WORKS.

50. Public Works.

"That a sum not exceeding Rs. 21,34,89,000 be granted to the Government to defray the charges which will come in

course of payment during financial year for the period ending 31st day of March 1967, in respect of 'Public Works'."

DEMAND No. 32.—PORTS AND PILOTAGE.

53. Ports and Pilotage.

"That a sum not exceeding Rs. 8,67,000 be granted to the Government to defray the charges which will come in course of payment during the financial year for the period ending 31st day of March 1967, in respect of 'Ports and Pilotage'."

DEMAND No. 43.—CAPITAL OUTLAY ON IMPROVEMENT OF PUBLIC HEALTH.

94. Capital Outlay on Improvement of Public Health.

"That a sum not exceeding Rs. 36,50,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Improvement of Public Health'."

DEMAND No. 47.—CAPITAL ACCOUNT OF ELECTRICITY SCHEMES OUTSIDE THE REVENUE ACCOUNT.

101. Capital Outlay on Electricity Schemes.

"That a sum not exceeding Rs. 17,21,09,900 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Electricity Schemes'."

DEMAND No. 48.—CAPITAL OUTLAY ON PUBLIC WORKS.

103. Capital Outlay on Public Works.

"That a sum not exceeding Rs. 7,47,22,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Public Works'."

DEMAND NO. 50.—DEVELOPMENT OF MINOR PORTS.

110. Capital Outlay on Ports.

"That a sum not exceeding Rs. 48,80,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Ports'."

Mr. SPEAKER.—The House will now adjourn and re-assemble on Monday at 1.00 P.M.

The House adjourned at Five Minutes past One of the Clock to meet again at One of the Clock on Monday, the 21st March 1966.